

ವೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


46

ಡಿಸೆಂಬರ್ 28 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 250 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ಜ.9ರವರೆಗೆ ರಾಹುಲ್ ಗಾಂಧಿ ಸಿಗಲ್ಲ ರಾಜ್ಯದಲ್ಲಿ ಗೊಂದಲ ತಪ್ಪಲ್ಲ

ನವದೆಹಲಿ, ಡಿ.27–ಮುಖ್ಯಮಂತ್ರಿ ಬದಲಾವಣೆ ಇಲ್ಲವೆ ಸಚಿವ ಸಂಪುಟ ಪುನಾರಚನೆ ವಿಚಾರಕ್ಕೆ ತಾತ್ಕಾಲಿಕ ಬ್ರೇಕ್ ಬಿದ್ದಿದೆ. ಜನವರಿ 9ರವರೆಗೂ ಯಾವುದೇ ಬೆಳವಣಿಗೆ ನಡೆಯುವ ಲಕ್ಷಣಗಳು ಸದ್ಯಕ್ಕೆ ಕಂಡು ಬರುತ್ತಿಲ್ಲ. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿದೇಶದಿಂದ ವಾಪಸ್ ಆದ ಬಳಿಕ ಈ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆಗಳಿವೆ.

ಕಾಂಗ್ರೆಸ್ ಕಾರ್ಯಕಾರಣಿ ಸಭೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ದೆಹಲಿಗೆ ತೆರಳಿದ್ದರು. ಸಭೆಯಲ್ಲಿ ಭಾಗಿಯಾದ ಬಳಿಕ ಹೈಕಮಾಂಡ್ ನಾಯಕರ ಜೊತೆಗೆ ಪ್ರತ್ಯೇಕ ಸಭೆ ನಡೆಯುವ ಸಾಧ್ಯತೆಗಳನ್ನು ನಿರೀಕ್ಷೆ ಮಾಡಲಾಗಿತ್ತು. ಆದರೆ, ಹೈಕಮಾಂಡ್ ನಾಯಕರು ಲಭ್ಯವಾಗದ ಹಿನ್ನೆಲೆಯಲ್ಲಿ ರಾಜ್ಯದ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸದೇ ಸಿಎಂ ಸಿದ್ದರಾಮಯ್ಯ ಬೆಂಗಳೂರಿಗೆ ವಾಪಸ್ ಆಗಿದ್ದಾರೆ.

ರಾಹುಲ್ ಗಾಂಧಿ ನಾಳೆಯಿಂದ (ಡಿ.28) ಜನವರಿ 8ರವರೆಗೂ ವಿದೇಶ ಪ್ರವಾಸಕ್ಕೆ ತೆರಳುತ್ತಿದ್ದಾರೆ. ಹೀಗಾಗಿ ಸಿಎಂ ಬದಲಾವಣೆ ಅಥವಾ ಸಂಪುಟ ಪುನಾರಚನೆ ವಿಚಾರಕ್ಕೆ ತಾತ್ಕಾಲಿಕ ಬ್ರೇಕ್ ಬಿದ್ದಂತಾಗಿದ್ದು, ರಾಹುಲ್ ಗಾಂಧಿ ವಿದೇಶದಿಂದ ಮರಳಿದ ಬಳಿಕ, ಅಂದರೆ ಜ.9ರ ಬಳಿಕವಷ್ಟೆ ಈ ಬಗ್ಗೆ ಚರ್ಚೆಗಳು ಪುನಾರಂಭಗೊಳ್ಳುವ ಸಾಧ್ಯತೆ ಇದೆ.



> “ ಸಚಿವ ಸಂಪುಟ ಪುನಾರಚನೆ ಲೆಕ್ಕಾಚಾರದಲ್ಲಿದ್ದ ಸಿಎಂ ಸಿದ್ದರಾಮಯ್ಯ ದೆಹಲಿಗೆ ತೆರಳಿ ಎಲ್ಲಾ ನಾಯಕರನ್ನು ಭೇಟಿಯಾಗಿ ಬಜೆಟ್‌ಗೂ ಮುನ್ನ ಸಂಪುಟ ಪುನಾರಚನೆ ಮಾಡುವ ಇಂಗಿತವನ್ನು ಆಪ್ತರ ಮುಂದೆ ವ್ಯಕ್ತಪಡಿಸಿದ್ದಾರೆ. ಮತ್ತೊಂದು ಕಡೆ ಡಿಸಿಎಂ ಡಿ.ಕೆ.ಶಿವಕುಮಾರ್ ಸಿಎಂ ಸ್ಥಾನದ ನಿರೀಕ್ಷೆಯಲ್ಲಿದ್ದು, ಹೈಕಮಾಂಡ್ ನಿರ್ಧಾರ ಕುತೂಹಲ ಮೂಡಿಸಿದೆ.

ಕೋಡಿಶ್ರೀ ಕಷ್ಟ–ಕಷ್ಟದ ಭವಿಷ್ಯ!

ಬೆಳಗಾವಿ: ರಾಜ್ಯದಲ್ಲಿ ಸಿಎಂ ಕುರ್ಚಿ ಕಾದಾಟ ಹಾಗೂ ಸಿದ್ದರಾಮಯ್ಯ–ಡಿ.ಕೆ. ಶಿವಕುಮಾರ್ ಬೆಂಬಲಿಗರ ನಡುವಿನ ಬಣ ಬಡಿದಾಟ, ಪರ, ವಿರೋಧ ಅಭಿಪ್ರಾಯಗಳ ನಡುವೆ ಕೋಡಿಮಠ ಸಂಸ್ಥಾನದ ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಮತ್ತೆ ಸ್ಫೋಟಕ ಭವಿಷ್ಯ ನುಡಿದಿದ್ದಾರೆ.



ಬೆಳಗಾವಿಯಲ್ಲಿ ರಾಜ್ಯ ರಾಜಕೀಯದ ಬಗ್ಗೆ ಪ್ರತಿಕ್ರಿಯಿಸಿದ ಶ್ರೀಗಳು, ಹಾಲುಮತ ಸಮಾಜದವರಿಂದ ಅಧಿಕಾರ ಕಿತ್ತುಕೊಳ್ಳೋದು ಅಷ್ಟು ಸುಲಭವಲ್ಲ, ಕಷ್ಟ ಕಷ್ಟ. ತಾನಾಗಿಯೇ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಅಧಿಕಾರ ಬಿಟ್ಟು ಕೊಟ್ರೇ ಮಾತ್ರ ಬೇರೆಯವರಿಗೆ ಅವಕಾಶ ಸಿಗಬಹುದು ಎಂದಿದ್ದಾರೆ. ಸಿದ್ದರಾಮಯ್ಯ ತಾನೇ ಅಧಿಕಾರ ಬಿಟ್ಟು ಕೊಡುವವರೆಗೂ ಡಿಕೆಶಿಗೆ ಅಧಿಕಾರ ಸಿಗೋದಿಲ್ಲ ಎಂದು ಪರೋಕ್ಷವಾಗಿ ಸ್ವಾಮೀಜಿ ಭವಿಷ್ಯ ನುಡಿದ್ದಾರೆ. ಅರಸನ ಅರಮನೆಗೆ ಕಾರ್ಮೋಡ ಕವಿದಿದೆ. ಅರಸನ ಬಂಡಾರವೇ ಬಜೆಟ್ ಎಂದಿದ್ದಾರೆ. ವರ್ಷದ ಬಜೆಟ್ ಮುಗಿದ ಬಳಿಕ ಅವರಾಗಿ ಸ್ಥಾನ ಬಿಟ್ಟು ಕೊಟ್ಟರೆ ಮಾತ್ರ ಬೇರೆಯವರಿಗೆ ಅವಕಾಶವಿದೆ. ಇಲ್ಲವಾದರೆ ಕಷ್ಟವಿದೆ. ಕೇಂದ್ರದಲ್ಲೂ ಬದಲಾವಣೆ ಪರಿಸ್ಥಿತಿ ಕಷ್ಟವಾಗುತ್ತೆ ಎಂದಿದ್ದಾರೆ ಸ್ವಾಮೀಜಿ.

ರಾಜ್ಯ ಕಾಂಗ್ರೆಸ್ ಸರ್ಕಾರದಿಂದ ಹಿಂದೂ ಭಾವನೆಗೆ ಧಕ್ಕೆ

- ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪ
- ಕಾಂಗ್ರೆಸ್ಸಿಗರು ಬಾಯ್ಬಿಟ್ಟರೆ ಅಸಹಿಷ್ಣುತೆ ಪ್ರದರ್ಶನ
- ಗೋವುಗಳ ಅಕ್ರಮ ಸಾಗಣೆಕಾರರಿಗೆ ಅಭಯ!

ಬೆಂಗಳೂರು,ಡಿ.27(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಹಿಂದೂ ವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ.



ಬಿ.ವೈ. ವಿಜಯೇಂದ್ರ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧರ್ಮಸ್ಥಳದ ಬುರುಡೆ ಗ್ಯಾಂಗ್ ವಿಚಾರ–ಹಿಂದೂ ಭಾವನೆಗಳಿಗೆ ಧಕ್ಕೆ ತರುವ ಷಡ್ಯಂತ್ರ ಕುರಿತು ರಾಜ್ಯ, ದೇಶ, ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ ನಡೆದಿದೆ ಅಪ ಪ್ರಚಾರದಿಂದ ಭಕ್ತಾದಿಗಳಿಗೆ ಮಾನಸಿಕ ಕಿರುಕುಳ ಆಗಿದೆ ಎಂದರು. ಅರ್ಬನ್ ನಕ್ಸಲರ ಕೋರಿಕೆ ಮೇರೆಗೆ ಮುಖ್ಯಮಂತ್ರಿ ರಾತ್ರೋರಾತ್ರಿ ಎಸ್.ಐ.ಟಿ. ರಚಿಸಿದರು. ಹಾದಿ ಬೀದಿಯಲ್ಲಿ ನಿಂತವರ ಮಾತು ಕೇಳಿ ಮುಖ್ಯಮಂತ್ರಿ ಕೋಟ್ಯಾಂತರ ಭಕ್ತರ ಭಾವನೆಗೆ ಧಕ್ಕೆ ತರುವ ತೀರ್ಮಾನ ಮಾಡಿದರು. ಹಿಂದೂ ಭಾವನೆಗೆ ಧಕ್ಕೆ ತಂದ ಮುಖ್ಯಮಂತ್ರಿ ಕ್ಷಮೆ ಯಾಚಿಸಿಲ್ಲ, ಬದಲಾಗಿ ತಾವು ಮಾಡಿದ್ದೇ ಸರಿ ಎಂದು ಕೈತೊಳೆದುಕೊಂಡಿದ್ದಾರೆ. ಕಾಂಗ್ರೆಸ್ಸಿನವರು ಅಸಹಿಷ್ಣುತೆಯ ಮಾತನಾಡುತ್ತಾರೆ. ▶ 6ನೇ ಪುಟಕ್ಕೆ

ಜೆಡಿಎಸ್ ಜೊತೆಗಿನ ಮೈತ್ರಿ: ವರಿಷ್ಠರ ನಿರ್ಧಾರಕ್ಕೆ ಬದ್ಧ

ಬೆಂಗಳೂರು, ಡಿ.27(ಕೆಎಂಶಿ)– ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜೆಡಿಎಸ್ ಜೊತೆಗಿನ ಮೈತ್ರಿ ಬಗ್ಗೆ ಬಿಜೆಪಿ ರಾಷ್ಟ್ರೀಯ ನಾಯಕರು ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧವಾಗಿರುತ್ತೇವೆ ಎಂದು ಬಿ.ವೈ.ವಿಜಯೇಂದ್ರ ಸ್ಪಷ್ಟಪಡಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು, ರಾಷ್ಟ್ರದ ಅಭಿವೃದ್ಧಿ ಕಾರ್ಯದಲ್ಲಿ ಮೋದಿ ಅವರಿಗೆ ಬೆಂಬಲವಾಗಿದ್ದಾರೆ. ಬಿಜೆಪಿ–ಜೆಡಿಎಸ್ ಮೈತ್ರಿಯಲ್ಲಿ ಯಾವ ಗೊಂದಲ ಇಲ್ಲ. ಅವರು ಎನ್‌ಡಿಎ ಭಾಗವಾಗಿದ್ದಾರೆ. ದೇವೇಗೌಡರು ನೀಡಿರುವ ಹೇಳಿಕೆ ಗಮನಿಸಿದ್ದೇನೆ. ಆದರೆ, ಈ ವಿಷಯದಲ್ಲಿ ವರಿಷ್ಠರು ಕೈಗೊಳ್ಳುವ ನಿರ್ಧಾರವೇ ಅಂತಿಮ. ಲೋಕಸಭಾ, ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಮಾತ್ರವೇ ಬಿಜೆಪಿ ಜೊತೆ ಮೈತ್ರಿ ಎಂದಿದ್ದ ದೇವೇಗೌಡರು, ಜಿಪಂ, ತಾಪಂ ಸೇರಿದಂತೆ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಪ್ರತ್ಯೇಕ ಸ್ಪರ್ಧೆ ಮಾಡುವುದಾಗಿ ತಿಳಿಸಿದ್ದರು. ಈ ಚುನಾವಣೆಯಲ್ಲಿ ಸೀಟು ಹಂಚಿಕೆ ವಿಚಾರಕ್ಕಾಗಿ ಮೋದಿ ಹಾಗೂ ಕೇಂದ್ರ ಸಚಿವ ಅಮಿತ್ ಷಾ ಅವರನ್ನು ಭೇಟಿ ಮಾಡಿ ಮಾತನಾಡುವುದು ಸಣ್ಣ ವಿಷಯವಾಗುತ್ತದೆ. ನಾವು ಮತ್ತು ಬಿಜೆಪಿ ಸೌಹಾರ್ದಯುತ ಸ್ಪರ್ಧೆ ನಡೆಸುತ್ತೇವೆ.

ಜ.5ರಿಂದ ಕಾಂಗ್ರೆಸ್ ನರೇಗಾ ಬಚಾವೋ ಅಭಿಯಾನ

ಸಿಡಬ್ಲ್ಯೂಸಿ ಸಭೆ ಬಳಿಕ ಖರ್ಗೆ ಘೋಷಣೆ

ನವದೆಹಲಿ, ಡಿ.27– ಮಹಾತ್ಮಾಗಾಂಧಿ ನರೇಗಾ (ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ) ಬಚಾವೋ ಅಭಿಯಾನವನ್ನು ಜನವರಿ 5, 2026ರಿಂದ ಪ್ರಾರಂಭಿಸಲು ಸಿಡಬ್ಲ್ಯೂಸಿ ಸಭೆಯಲ್ಲಿ ನಿರ್ಣಯ ಅಂಗೀಕರಿಸಿದ್ದೇವೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಘೋಷಿಸಿದರು.



ಮಲ್ಲಿಕಾರ್ಜುನ ಖರ್ಗೆ

ಮುಂದಿನ ವರ್ಷ ನಡೆಯಲಿರುವ ಪ್ರಮುಖ ರಾಜ್ಯಗಳ ವಿಧಾನಸಭಾ ಚುನಾವಣೆಗಳಿಗೆ ಮುಂಚಿತವಾಗಿ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸಲು ಮತ್ತು ಯುಪಿಎ ಕಾಲದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (ನರೇಗಾ) ರದ್ದತಿಗೆ ಪಕ್ಷದ ಪ್ರತಿಕ್ರಿಯೆಯನ್ನು ರೂಪಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯೂಸಿ)ಯ ವಿಸ್ತೃತ ಅಧಿವೇಶನದಲ್ಲಿ ಶನಿವಾರ ಹಿರಿಯ ಕಾಂಗ್ರೆಸ್ ನಾಯಕರು ಸಭೆ ಸೇರಿದ್ದರು.

ಈ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಖರ್ಗೆ ಈ ಘೋಷಣೆ ಮಾಡಿದರು.

ನರೇಗಾ ಹೆಸರು ಬದಲಾವಣೆ ಬಗ್ಗೆ ಸಾರ್ವಜನಿಕರ ಕೋಪ ಹೆಚ್ಚುತ್ತಿದೆ ಮತ್ತು ಸರ್ಕಾರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಹೊಸ ಕಾನೂನನ್ನು ಸಮಾಲೋಚನೆಯಿಲ್ಲದೆ ತೆಗೆದುಕೊಂಡ ಏಕಪಕ್ಷೀಯ ನಿರ್ಧಾರ ಎಂದು ಟೀಕಿಸಿದ್ದಾರೆ. ಈ ಯೋಜನೆಗೆ ಈಗ ಕೇಂದ್ರ ಮತ್ತು ರಾಜ್ಯಗಳು ಜಂಟಿಯಾಗಿ 60:40 ಅನುಪಾತದಲ್ಲಿ ಹಣವನ್ನು ನೀಡಬೇಕಾಗಿರುವುದರಿಂದ ಇದು ರಾಜ್ಯಗಳ ಮೇಲೆ ಹೆಚ್ಚುವರಿ ಆರ್ಥಿಕ ಹೊರೆಯನ್ನು ಹೇರುತ್ತದೆ ಎಂದು ಹೇಳಿದರು. ಉದ್ಯೋಗ ಖಾತರಿ ಕಾರ್ಯಕ್ರಮದಿಂದ ಮಹಾತ್ಮ ಗಾಂಧಿಯವರ ಹೆಸರನ್ನು ಅಳಿಸಿ ಹಾಕುವ ಮತ್ತು ಕಾರ್ಮಿಕರ ಹಕ್ಕುಗಳನ್ನು ದುರ್ಬಲಗೊಳಿಸುವ ಪ್ರಯತ್ನಗಳನ್ನು ವಿರೋಧಿಸಲು ▶ 6ನೇ ಪುಟಕ್ಕೆ

ಬಂಡೀಪುರ ಅಭಯಾರಣ್ಯದಲ್ಲಿ ಹುಲಿ ದಾಳಿಗೆ ವಾಚರ್ ಬಲಿ

ಮತ್ತಿಬ್ಬರು ಅಚ್ಚರಿಯ ಪಾರು

ಮೈಸೂರು, ಡಿ.27(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮರಳಹಳ್ಳ ವಲಯದಲ್ಲಿ ಹುಲಿ ದಾಳಿಯಿಂದ ವಾಚರ್ ಒಬ್ಬರು ಬಲಿಯಾದರೆ, ಮತ್ತಿಬ್ಬರು ಅಪಾಯದಿಂದ ಅಚ್ಚರಿ ಪಾರಾದ ಘಟನೆ ಶನಿವಾರ ಬೆಳಗ್ಗೆ ನಡೆದಿದೆ.

ಮರಳಹಳ್ಳ ಕಳ್ಳಬೇಟೆ ಶಿಬಿರದಲ್ಲಿ ವಾಚರ್ ಆಗಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಹುಣಸೂರು ತಾಲೂಕಿನ ನೇರಳಕುಪ್ಪೆ ಎ ಹಾಡಿ ಜೇನುಕುರುಬ ಸಮುದಾಯದ ಸಣ್ಣಹೈದ(55), ಹುಲಿ ದಾಳಿಗೆ ಬಲಿಯಾಗಿದ್ದು, ಅವರ ಜೊತೆಯಲ್ಲಿದ್ದ ಗಿರೀಶ್ ಮತ್ತು ಕುಮಾರ್ ಅದೃಷ್ಟವಶಾತ್ ಪಾರಾಗಿದ್ದಾರೆ.

ಕಾಡಿನ ರಸ್ತೆಯಲ್ಲಿ ಗಸ್ತು ತಿರುಗುತ್ತಿದ್ದಾಗ ಈ ದುರ್ಘಟನೆ ನಡೆದಿದ್ದು, ಪೊದೆಯಲ್ಲಿದ್ದ ಹುಲಿ ಏಕಾಏಕಿ ಸಣ್ಣಹೈದ ಅವರ ಮೇಲೆರಗಿದೆ. ಹುಲಿಯ ಪಂಜದ ಹೊಡೆತಕ್ಕೆ ಬಲಿಯಾದ ಸಣ್ಣಹೈದ ಅವರ ದೇಹವನ್ನು 15 ಮೀಟರ್ ಎಳೆದುಕೊಂಡು ಹೋಗಿದೆ. ಆದರೆ, ಸಿಬ್ಬಂದಿ ಹಿಂಬಾಲಿಸಿ ಕಿರುಚಾಡಿದ್ದರಿಂದ ಕೊನೆಗೆ ದೇಹವನ್ನು ಬಿಟ್ಟು ಹುಲಿ ಪರಾರಿಯಾಗಿದೆ. ವಿಷಯ ತಿಳಿದು ಸ್ಥಳಕ್ಕೆ ಬಂದ ಹಿರಿಯ ಅಧಿಕಾರಿಗಳು, ಮೃತ ದೇಹವನ್ನು ಉಳಿದ ಸಿಬ್ಬಂದಿಗಳೊಂದಿಗೆ ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಗೆ ತಂದಿದ್ದಾರೆ. ಅಲ್ಲಿ ವೈದ್ಯರು ಪರಿಶೀಲಿಸಿ ಮೃತಪಟ್ಟಿರುವುದನ್ನು ಅಧಿಕೃತವಾಗಿ ಪ್ರಕಟಿಸಿದ್ದಾರೆ.



ಸಣ್ಣಹೈದ

ಹಲವು ಬಾರಿ ಮುಖಾಮುಖಿ: ಬಂಡೀಪುರದ ಅಭಯಾರಣ್ಯದ ಮರಳಹಳ್ಳ, ಒಳಕಲ್ಲಾರೆ ▶ 6ನೇ ಪುಟಕ್ಕೆ

ಹುಲ್ಲಿನ ಬೀಜ ಸಂಗ್ರಹಿಸುವಾಗ ಮೇಲೆರಗಿದ ವ್ಯಾಘ್ರ

ಮರಳಹಳ್ಳ ಕ್ಯಾಂಪ್‌ನಿಂದ 600 ಮೀಟರ್ ಅಂತರದಲ್ಲೇ ಹುಲಿ ದಾಳಿ ಮಾಡಿದೆ. ಕ್ಯಾಂಪ್‌ನಿಂದ ಮದುಮಲೈ ಬಾರ್ಡರ್ ರಸ್ತೆಯಲ್ಲಿ ಗಸ್ತು ಆರಂಭಿಸಿದ ಈ ಮೂವರು, ಸಫಾರಿ ರಸ್ತೆ ಪಕ್ಕದಲ್ಲಿದ್ದ ಹುಲಿನ ಗಿಡಗಳಿಂದ ಬೀಜ ಸಂಗ್ರಹಿಸುವಾಗ ಪೊದೆಯಲ್ಲಿದ್ದ ಹುಲಿ ದಾಳಿ ಮಾಡಿದೆ. ಮೂವರಲ್ಲಿ ಸಣ್ಣಹೈದ ಸ್ವಲ್ಪ ಮುಂದೆ ಇದ್ದುದ್ದರಿಂದ ಹುಲಿಗೆ ಬಲಿಯಾಗಿದ್ದಾರೆ. ಏಕಾಏಕಿ ಮೇಲೆರಗಿ ಅವರನ್ನು ಕಚ್ಚಿ, ಎಳೆದೊಯ್ಯಲಾರಂಭಿಸಿದಾಗ ಸಿಬ್ಬಂದಿ ಕೂಗಾಟದಿಂದ ಬೆದರಿ ದೇಹವನ್ನು ಬಿಟ್ಟು ಪರಾರಿಯಾಗಿದೆ.

ನಿತಿನ್ ನಬಿನ್ ಬಿಜೆಪಿ ಸಾರಥಿ?

ನವದೆಹಲಿ: ಬಿಜೆಪಿಗೆ ನೂತನ ಸಾರಥಿಯನ್ನು ಆಯ್ಕೆ ಮಾಡಲಾಗುತ್ತಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಚುನಾವಣೆಗಾಗಿ ಜನವರಿ 15ರ ನಂತರ ರಾಜ್ಯಗಳ ಬಿಜೆಪಿ ಅಧ್ಯಕ್ಷರನ್ನು ದೆಹಲಿಗೆ ಕರೆಸುವ ಸಾಧ್ಯತೆಯಿದೆ.



ಮೂಲಗಳ ಪ್ರಕಾರ, ಜನವರಿ 18ರಿಂದ ಜನವರಿ 20ರೊಳಗೆ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಬಿಜೆಪಿಯ ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ನೇಮಕವನ್ನು ಜನವರಿ 20ರೊಳಗೆ ಪ್ರಕಟಿಸುವ ಸಾಧ್ಯತೆ ಇದೆ. ಬಿಜೆಪಿ ಆಡಳಿತವಿರುವ ಅರ್ಧಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಆಂತರಿಕ ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡಿದ್ದು, 37 ರಾಜ್ಯಗಳ ಪೈಕಿ 29 ರಾಜ್ಯಗಳು ತಮ್ಮ ಆಯ್ಕೆಯನ್ನು ಅಂತಿಮಗೊಳಿಸಿವೆ. ಈ ರಾಜ್ಯಗಳ ರಾಜ್ಯಾಧ್ಯಕ್ಷರು ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ನಿತಿನ್ ನಬಿನ್ ಅವರ ಉಮೇದುವಾರಿಕೆ ಬೆಂಬಲಿಸಿ 1 ಸೆಟ್ ನಾಮಪತ್ರ ಸಲ್ಲಿಸಲಿದ್ದಾರೆ. ಬಿಜೆಪಿಯ ರಾಷ್ಟ್ರೀಯ ಮಂಡಳಿ ಸದಸ್ಯರು ಮತ್ತೊಂದು ಸೆಟ್ ನಾಮ ಪತ್ರವನ್ನು ಸಲ್ಲಿಸುವರು. ನಿತಿನ್ ನಬಿನ್ ಅವರನ್ನು ಬೆಂಬಲಿಸುವ ನಾಮಪತ್ರವು ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸಹಿಯನ್ನು ಸಹ ಹೊಂದಿರುತ್ತದೆ ಎಂದು ಮೂಲಗಳು ತಿಳಿಸಿವೆ. ಬಹುತೇಕ ನಿತಿನ್ ನಬಿನ್ ಮಾತ್ರ ನಾಮಪತ್ರ ಸಲ್ಲಿಸುವ ಅಭ್ಯರ್ಥಿಯಾಗಿದ್ದು, ಬಿಜೆಪಿ ಮುಖ್ಯ ಚುನಾವಣಾ ಅಧಿಕಾರಿ ಕೆ. ಲಕ್ಷ್ಮಣ್ ಅವರು ನಾಮಪತ್ರ ಪರಿಶೀಲಿಸಿದ ನಂತರ ರಾಷ್ಟ್ರೀಯ ಅಧ್ಯಕ್ಷರಾಗಿ ಅವರ ಆಯ್ಕೆಯನ್ನು ಅಧಿಕೃತವಾಗಿ ಘೋಷಿಸಲಾಗುತ್ತದೆ. ಆ ಸಂದರ್ಭದಲ್ಲಿ ಬಿಜೆಪಿ ಆಡಳಿತ ಇರುವ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ರಾಜ್ಯಾಧ್ಯಕ್ಷರು ದೆಹಲಿಯಲ್ಲಿ ಇರುವಂತೆ ಸೂಚಿಸಲಾಗಿದೆ. ನಿತಿನ್ ನಬಿನ್ ಜನವರಿ 2026ರಿಂದ ಜನವರಿ 2029ರವರೆಗೂ ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ಪಕ್ಷ ಮುನ್ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. 2029ಕ್ಕೆ ಲೋಕಸಭಾ ಚುನಾವಣೆ ನಡೆಯಲಿದ್ದು, ಅವರ ಸೇವಾವಧಿ 1 ವರ್ಷ ವಿಸ್ತರಣೆಯಾಗುವ ಸಾಧ್ಯತೆಯಿದೆ.



ಪಾಸ್‌ಪೋರ್ಟ್ ಸೇವಾ ಕೇಂದ್ರ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ 'ಕೈತಪ್ಪಿ' ಸಿಲ್ಕ್ಸ್ ಶೋ ರೂಂ ಪಾಲಾದ ಎಂಡಿಎ ಕಟ್ಟಡ!

- ಜನಸಾಮಾನ್ಯರಿಗೆ ಅನುಕೂಲ ಕಲ್ಪಿಸುವ ಭಾಗ್ಯವಿಲ್ಲ!
- ದೂರದ ಮೇಟಗಳ್ಳಿ, ರಾಮನಗರಕ್ಕೆ ಅಲೆಯುವ ಪರಿಸ್ಥಿತಿ!
- ಸರ್ಕಾರದ ಆದೇಶ ಉಲ್ಲಂಘಿಸಿ ಎಂಡಿಎ ನಿರ್ಧಾರ!

ಮೈಸೂರು, ಡಿ.27(ಬಿಎಲ್‌ಯು)– ಪಾಸ್‌ಪೋರ್ಟ್ ಸೇವಾ ಕೇಂದ್ರ ಹಾಗೂ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕಚೇರಿಗೆ ಮೀಸಲು ಎಂದು ಹೇಳಲಾಗುತ್ತಿದ್ದ ಮೈಸೂರು ಮೃಗಾಲಯದ ಬಳಿ, ಲೋಕರಂಜನ್ ಮಹಲ್ ರಸ್ತೆಯಲ್ಲಿರುವ ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಎಂಡಿಎ) ಕಟ್ಟಡವನ್ನು ಅಂತಿಮವಾಗಿ ಖಾಸಗಿ ಸಿಲ್ಕ್ಸ್ ಶೋ ರೂಂಗೆ ಬಾಡಿಗೆಗೆ ನೀಡಲಾಗಿದೆ.

ಇಲ್ಲಿದ್ದ ಹಳೆಯ ಕಟ್ಟಡದಲ್ಲಿ ಸರ್ಕಾರಿ ಶಾಲೆ ನಡೆಯುತ್ತಿತ್ತು. ಅದನ್ನು ಅದೇ ಬಡಾವಣೆಯ ಬೇರೊಂದು ಶಾಲೆಗೆ ವಿಲೀನಗೊಳಿಸಿದ ಬಳಿಕ ಈ ಹಳೆಯ ಕಟ್ಟಡವನ್ನು ನೆಲಸಮಗೊಳಿಸಿ, ಅಲ್ಲಿ ನೂತನ ಬೃಹತ್ ಕಟ್ಟಡವನ್ನು ಹಿಂದಿನ ಮುಡಾ ನಿರ್ಮಿಸಿತ್ತು. ಈ ಕಟ್ಟಡದಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರ ಹಾಗೂ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಚೇರಿ ತೆರೆಯಲು ನಿರ್ಧರಿಸಲಾಗಿತ್ತು. ಇದಕ್ಕೆ ಸಂಬಂಧಿಸಿದ ಇಲಾಖೆ ಹಾಗೂ ಎಂಡಿಎ ನಡುವೆ ಪತ್ರ ವ್ಯವಹಾರ ಪ್ರಕ್ರಿಯೆಗಳು ನಡೆದಿದ್ದವು. ಪ್ರಸ್ತುತ ಮೈಸೂರಿನ ▶ 6ನೇ ಪುಟಕ್ಕೆ



ಮೈಸೂರಿನ ಲೋಕರಂಜನ್ ಮಹಲ್ ರಸ್ತೆಯ ಮುಡಾದ ನೂತನ ಕಟ್ಟಡವನ್ನು ಖಾಸಗಿಯವರು ತಮಗೆ ಅನುಕೂಲವಾಗುವಂತೆ ವಿನ್ಯಾಸಗೊಳಿಸುತ್ತಿದ್ದಾರೆ.

ಖಾಸಗಿಯವರಿಗೆ ನೀಡುವುದು ಅಕ್ಷಮ್ಯ

ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಸರ್ಕಾರಿ ಕಟ್ಟಡವನ್ನು ಖಾಸಗಿಯವರಿಗೆ ವಹಿಸುವುದು ಅಕ್ಷಮ್ಯ. ಇದೊಂದು ಗಂಭೀರ ವಿಷಯವಾಗಿದ್ದು, ಈ ಬಗ್ಗೆ ಸಂಬಂಧಪಟ್ಟ ಸಚಿವಾಲಯಕ್ಕೆ ಮಾಹಿತಿ ನೀಡಿ ಕ್ರಮ ಕೈಗೊಳ್ಳಲು ಮನವಿ ಸಲ್ಲಿಸಲಾಗುವುದು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ. ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಇಟ್ಟಿಗೆಗೂಡು ಪ್ರದೇಶದಲ್ಲಿ ಹಿಂದಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಲಾದ ಕಟ್ಟಡವನ್ನು ಹಾಲಿ ಎಂಡಿಎ ಸಾರ್ವಜನಿಕ ಉದ್ದೇಶಕ್ಕೆ ಬಳಸದೆ ಖಾಸಗಿಯವರಿಗೆ ನೀಡಿದೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಇದು ಅತ್ಯಂತ ಗಂಭೀರ ಮತ್ತು ನಿಯಮಬಾಹಿರ ವಿಷಯ ಎಂದಿದ್ದಾರೆ.



ಸರ್ಕಾರದ ಹಣದಿಂದ ನಿರ್ಮಿಸಲಾದ ಕಟ್ಟಡವನ್ನು ಸಾರ್ವಜನಿಕ ಉದ್ದೇಶ ಹೊರತು ಖಾಸಗಿಯವರಿಗೆ ನೀಡಿರುವುದು ನಿಯಮಗಳ ಉಲ್ಲಂಘನೆಯಾಗಿದೆ. ಇದರಿಂದ ಸಾರ್ವಜನಿಕರಿಗೆ ಸಿಗಬೇಕಾದ ಸೌಲಭ್ಯಗಳನ್ನು ಕಸಿದುಕೊಂಡಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು, ವಿಷಯವನ್ನು ತಕ್ಷಣ ಪರಿಶೀಲಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಮತ್ತು ಪಾಸ್‌ಪೋರ್ಟ್ ಕಚೇರಿಯನ್ನು ಇದೇ ಕಟ್ಟಡದಲ್ಲಿ ಶೀಘ್ರದಲ್ಲಿ ಪ್ರಾರಂಭಿಸುವಂತೆ ಸೂಚಿಸುವುದಾಗಿ ಯದುವೀರ್ ಒಡೆಯರ್ ಹೇಳಿದ್ದಾರೆ. ಅಗತ್ಯಬಿದ್ದರೆ ಸಂಬಂಧಪಟ್ಟ ಸಚಿವರಿಗೂ ಪತ್ರ ಬರೆದು ಸೂಕ್ತ ಸೂಚನೆ ನೀಡುವಂತೆ ಮನವಿ ಸಲ್ಲಿಸುತ್ತೇನೆ ಎಂದಿರುವ ಸಂಸದರು, ಮೈಸೂರು ಮತ್ತು ಸುತ್ತಮುತ್ತಲ ಪ್ರದೇಶದ ಜನರಿಗೆ ಪಾಸ್‌ಪೋರ್ಟ್ ಸೇವೆಗಳು ಸುಲಭ ಹಾಗೂ ಶೀಘ್ರ ಗತಿಯಲ್ಲಿ ಲಭ್ಯವಾಗಬೇಕಾದ್ದರಿಂದ ಈ ವಿಷಯದಲ್ಲಿ ಯಾವುದೇ ವಿಳಂಬವಾಗದಂತೆ ಸರ್ಕಾರ ಹಾಗೂ ಸಂಬಂಧಿಸಿದ ಅಧಿಕಾರಿಗಳು ತ್ವರಿತವಾಗಿ ಕ್ರಮ ವಹಿಸಬೇಕು ಎಂದು ತಿಳಿಸಿದ್ದಾರೆ.



ಪ್ರತಾಪ್‌ಸಿಂಹ ಅಭಿಮಾನಿ ಬಳಗದಿಂದ ಸೇವಾ ಕಾರ್ಯದ ಮೂಲಕ ವಾಜಪೇಯಿ ಜನ್ಮದಿನ ಆಚರಣೆ



ಮೈಸೂರಿನ ದೇವರಾಜ ಮಾರುಕಟ್ಟೆಯ ಚಿಕ್ಕಗಡಿಯಾರ ಆವರಣದಲ್ಲಿ ರಸ್ತೆಬದಿ ವ್ಯಾಪಾರಿಗಳಿಗೆ ಸ್ವೆಟರ್‌ಗಳನ್ನು ವಿತರಿಸಲಾಯಿತು.

ಮೈಸೂರು,ಡಿ.27(ಪಿಎಂ)– ಮೈಸೂರಿನ ದೇವರಾಜ ಮಾರುಕಟ್ಟೆಯ ಚಿಕ್ಕಗಡಿಯಾರ ಆವರಣದಲ್ಲಿ ಭಾರತ ರತ್ನ, ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮದಿನವನ್ನು ವಿವಿಧ ಸೇವಾ ಕಾರ್ಯ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮಾಜಿ ಸಂಸದ ಪ್ರತಾಪ್‌ಸಿಂಹ ಅಭಿಮಾನಿ ಬಳಗ ಚಾಮರಾಜ ವಿಧಾನ ಸಭಾ ಕ್ಷೇತ್ರದ ವತಿಯಿಂದ ರಸ್ತೆಬದಿ ವ್ಯಾಪಾರಿಗಳಿಗೆ ಸ್ವೆಟರ್‌ಗಳನ್ನು ವಿತರಿಸಲಾಯಿತು. ನಂತರ ಹೋಳಿಗೆ ಸಿಹಿ ವಿತರಿಸಲಾಯಿತು. ಅಲ್ಲದೆ, ಬಿಜೆಪಿ ಹಿರಿಯ ಮುಖಂಡರಾದ ಟೆನಿಸ್ ಗೋಪಿ, ಎಂ.ಬಿ.ಮಂಜುನಾಥ್, ನಿವೃತ್ತ ಪ್ರಾಂಶುಪಾಲ ನಾಗರಾಜ್ ಅವರನ್ನು ಮಾಜಿ ಸಂಸದ ಪ್ರತಾಪ್‌ಸಿಂಹ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಮೈ.ವಿ.ರವಿಶಂಕರ್, ಸತೀಶ, ಉಮೇಶ, ಎಸ್.ಕೆ.ದಿನೇಶ್, ಬಾಲಣ್ಣ, ಜಂಬಪ್ಪ, ಬ್ರಹ್ಮಚಾರ್, ಕಾರ್ಯಕ್ರಮದ ಆಯೋಜಕರಾದ ಆರ್.ಪರಮೇಶಗೌಡ, ಪ್ರಮೋದ್, ಸಂದೇಶ್, ಶ್ರವಣ್ ಮಾಲಿ, ಕಿರಣ್, ಎಂ.ಎನ್.ಮಂಜುನಾಥ್, ಸುರೇಂದ್ರ, ಪ್ರಕಾಶ್, ಅಭಿಷೇಕ್‌ಗೌಡ, ವಿನೋದ್, ರಘು, ನಜರ್‌ಬಾದ್ ಅಭಿ, ಶ್ರೀನಿವಾಸ್ ಮತ್ತಿತರರು ಹಾಜರಿದ್ದರು.

ಕ್ಯಾಲೆಂಡರ್ ಬಿಡುಗಡೆ



24 ಮನೆ ತೆಲುಗುಶೆಟ್ಟಿ ಜನಾಂಗದ ಶ್ರೀ ಅಂಕಾಳಪರಮೇಶ್ವರಿ ನೌಕರರ ಸಂಘದ 2026ನೇ ಸಾಲಿನ ದಿನದರ್ಶಿಕೆಯನ್ನು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್ ಬಿಡುಗಡೆ ಮಾಡಿದರು. ಸಂಘದ ಅಧ್ಯಕ್ಷ ವಿ.ರಂಗಸ್ವಾಮಿಶೆಟ್ಟಿ, ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಪ್ರಸನ್ನಕುಮಾರ್, ಉಪಾಧ್ಯಕ್ಷ ಕೆ.ಚಂದ್ರಶೇಖರ್, ಖಜಾಂಚಿ ಕೆ.ಶ್ಯಾಮಸುಂದರ್, ಸಹ ಕಾರ್ಯದರ್ಶಿ ಕೃಷ್ಣಶೆಟ್ಟಿ, ಡಾ.ಯೋಗೀಂದ್ರ, ಸಂಘಟನಾ ಕಾರ್ಯದರ್ಶಿ ರತ್ನಮಾಲಾ ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು.

ಆದಿ ಕರ್ನಾಟಕ, ಮಹಾಸಂಸ್ಥಾನ ಗುರುಪೀಠದಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ

ಮೈಸೂರು, ಡಿ.27(ಜಿಎ)–ಮೈಸೂರಿನ ಅಶೋಕಪುರಂನಲ್ಲಿರುವ ಆದಿ ಕರ್ನಾಟಕ, ಛಲವಾದಿ ಮಹಾ ಸಂಸ್ಥಾನ ಗುರುಪೀಠದ ವತಿಯಿಂದ ಮುಂದಿನ ವರ್ಷದ ಫೆಬ್ರವರಿಯಲ್ಲಿ ಈ ಸಮುದಾಯಕ್ಕೆ ಸೇರಿದ ಎಸ್‌ಎಸ್‌ಎಲ್‌ಸಿಯಿಂದ ಹಿಡಿದು, ಪಿಎಚ್‌ಡಿ, ಪಿಡಿಎಫ್ ವರೆಗಿನ ಸಾಧಕರನ್ನು ಗೌರವಿಸುವ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸುವ ಕಾರ್ಯಕ್ರಮ ನಗರದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ, ಪಿಯುಸಿಗಳಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ, ಎಲ್ಲ ರೀತಿಯ ಸ್ನಾತಕ ಪದವಿಗಳಲ್ಲಿ ಶೇ.75ಕ್ಕಿಂತ, ಸ್ನಾತಕೋತ್ತರ ಪದವಿಗಳಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕ ಹಾಗೂ ಪಿಎಚ್‌ಡಿ, ಪಿಡಿಎಫ್ ಪದವಿ ಪಡೆದವರನ್ನು ಸನ್ಮಾನಿಸಲಾಗುವುದು. ಈ ಸಮುದಾಯಗಳಿಗೆ ಸೇರಿದ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಕೊಡಗು ಜಿಲ್ಲೆಗಳಿಗೆ ಸೇರಿದ ಅರ್ಹರು ಬರುವ ಫೆ.15ರ ಮುನ್ನ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದರು.

ಗುರುಪೀಠದ ಪೀಠಾಧ್ಯಕ್ಷರಾದ ಡಾ.ಜ್ಞಾನಸ್ವರೂಪಾನಂದ ಸ್ವಾಮೀಜಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಹೆಸರು, ಫೋಟೋ, ತಂದೆಯ ಹೆಸರು, ವಿದ್ಯಾರ್ಹತೆಯೊಡನೆ ಪಡೆದ ಅಂಕದ ವಿವರ, ವಿಳಾಸ, ಜಾತಿ ಪ್ರಮಾಣಪತ್ರ, ಆಧಾರ್ ಪ್ರತಿಗಳನ್ನು ಅಶೋಕಪುರಂ 3 ನೇ ಅಡ್ಡ ರಸ್ತೆಯ ಗುರುಪೀಠದ ವಿಳಾಸಕ್ಕೆ ಅರ್ಜಿಯೊಡನೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ. 91108 88953, 98865 39255 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಸಿದ್ದಸ್ವಾಮಿ, ಮಹದೇವ್, ಶ್ರೀನಿವಾಸಮೂರ್ತಿ, ಹರೀಶ್ ಉಪಸ್ಥಿತರಿದ್ದರು.

ಡಿ.30, ಕರೋಕೆ ಗೀತೆಗಳ ಗಾಯನ



ಮೈಸೂರು, ಡಿ.27(ಜಿಎ)–ನಟ ವಿಷ್ಣುವರ್ಧನ್ ಅವರ 16ನೇ ಪುಣ್ಯ ಸ್ಮರಣೆ ಅಂಗವಾಗಿ ಮೈಸೂರಿನ ಅರುಣರಾಗ ಕ್ರಿಯೇಷನ್ ವತಿಯಿಂದ ಡಿ.30ರಂದು ಉದ್ಬೂರ್ ಗೇಟ್ ಬಳಿ ಇರುವ ವಿಷ್ಣು ಸ್ಮಾರಕದಲ್ಲಿ ಆಯ್ದ ಗೀತೆಗಳ ಕರೋಕೆ ಗೀತೆಗಳ ಗಾಯನ ನಮನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅರುಣರಾಗ ಕ್ರಿಯೇಷನ್‌ನ ಡಾ.ರೇಖಾ ಅರುಣ್ ಈ ವಿಷಯ ತಿಳಿಸಿ, ಮುಖ್ಯ ಅತಿಥಿಗಳಾಗಿ ನಟಿ ಭಾರತಿ ವಿಷ್ಣುವರ್ಧನ್, ನಟ ಅನಿರುದ್ಧ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಪತ್ರಕರ್ತ ಟಿ.ಗುರುರಾಜ್, ರಘುರಾಜೇ ಅರಸ್ ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ. ಅಂದು ಬೆಳಗ್ಗೆ 10ಗಂಟೆಯಿಂದ ಸಂಜೆ 7 ಗಂಟೆವರೆಗೆ 20 ಗಾಯಕರು 60ಕ್ಕೂ ಹೆಚ್ಚು ಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಅಜಯ್ ಶಾಸ್ತ್ರೀ, ಗುರುರಾಜ್, ಪ್ರಿಯಾ, ಮನಮೋಹನ್ ರಾಜ್, ರೂಪ್ ಕುಮಾರ್ ಉಪಸ್ಥಿತರಿದ್ದರು.

ರೆಸಾರ್ಟ್‌ಗಳ ವಿರುದ್ಧ ಧ್ವನಿಯೆತ್ತಿದ್ದ ವಕೀಲ ರವಿಕುಮಾರ್ ವಜಾಕ್ಕೆ ಸೇವ್ ಕಬಿನಿ ತಂಡ ಖಂಡನೆ

ಮೈಸೂರು,ಡಿ.27(ಜಿಎ)–ಕಬಿನಿ ಹಿನ್ನೀರಿನಲ್ಲಿ ಅಕ್ರಮವಾಗಿ ನಿರ್ಮಾಣಗೊಂಡಿರುವ ರೆಸಾರ್ಟ್‌ಗಳ ವಿರುದ್ಧ ಹೋರಾಟ ನಡೆಸಿದ ವಕೀಲ ವಿ.ರವಿಕುಮಾರ್ ಅವರನ್ನು ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ವಜಾ ಮಾಡಿರುವುದನ್ನು ಸೇವ್ ಕಬಿನಿ ಸದಸ್ಯರ ತಂಡ ಖಂಡಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ಹೋರಾಟಗಾರ ಅರವಿಂದ ಶರ್ಮ ಮಾತನಾಡಿ, ಕಬಿನಿ ಹಿನ್ನೀರಿನ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅಕ್ರಮ ಚಟುವಟಿಕೆಗಳ ವಿರುದ್ಧ ಧ್ವನಿಯೆತ್ತಿರುವ ಸೇವ್ ಕಬಿನಿ ತಂಡದ ಸದಸ್ಯರನ್ನು ರಾಜಕಾರಣಿಗಳು, ಅಧಿಕಾರಿಗಳು ಟಾರ್ಗೆಟ್ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಉದಾಹರಣೆಯಂತೆ ತಂಡದ ಸದಸ್ಯ, ವಕೀಲರೂ ಆದ ರವಿಕುಮಾರ್ ಮಾಧ್ಯಮಗಳ ಮುಂದೆ ಅಕ್ರಮಗಳ ವಿಷಯವನ್ನು ಪ್ರಸ್ತುತ ಪಡಿಸದಂತೆ ಹಾಗೂ ವರದಿಯಾಗಿರುವ ಸುದ್ದಿಗಳನ್ನು ಅಳಿಸುವಂತೆ ಹಲವಾರು ಬಾರಿ ರಾಜಕಾರಣಿಗಳು, ರೆಸಾರ್ಟ್ ಮಾಲೀಕರು ಒತ್ತಡ ಹಾಕಿದ್ದಾರೆ. ಇದಕ್ಕೆ ವಕೀಲರು ಜಗ್ಗದಿದ್ದಾಗ ಅವರ ವಿರುದ್ಧ ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ ಮೆಂಬರ್ ಒಬ್ಬರಿಂದ ಒತ್ತಡ ಹಾಕಿಸಿ ಸೇವ್ ಕಬಿನಿ ತಂಡದ ವಿಚಾರವನ್ನು ರಾಜಕೀಯಗೊಳಿಸುತ್ತಿರುವುದಲ್ಲದೆ, ವಕೀಲರ ವಿರುದ್ಧ ಶೋಕಾಸ್ ನೋಟಿಸ್ ನೀಡಿ ವಿಚಾರಣೆಗೂ ಮುನ್ನವೇ ಅವರನ್ನು ಬಾರ್ ಕೌನ್ಸಿಲ್ ವಜಾ ಮಾಡಿದೆ ಎಂದರು. ಗೋಷ್ಠಿಯಲ್ಲಿ ಮದುಕೇಶ್, ರಮೇಶ್, ಕುಮಾರಸ್ವಾಮಿ, ಪರಮೇಶ್, ಶಿವಲಿಂಗ, ನಾಗರಾಜ್ ಉಪಸ್ಥಿತರಿದ್ದರು.

ಡಿ.30ರಂದು ವೈಕುಂಠ ಏಕಾದಶಿ

ಮೈಸೂರು, ಡಿ. 27– ಮೈಸೂರಿನ ಉದಯಗಿರಿ ಬಡಾವಣೆಯ ಶ್ರೀ ವಿಘ್ನೇಶ್ವರ ಪ್ರಸನ್ನ ಭಕ್ತ ಮಂಡಳಿ ಮಾರ್ಪಾಡಿತ ಟ್ರಸ್ಟ್ ವತಿಯಿಂದ ಉದಯಗಿರಿ ಬಡಾವಣೆಯ ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಡಿ.30 ರಂದು ವೈಕುಂಠ ಏಕಾದಶಿ ಅಂಗವಾಗಿ ಬೆಳಗ್ಗೆ 6ರಿಂದ ರಾತ್ರಿ 9 ಗಂಟೆಯವರೆಗೆ ವಿಶೇಷ ಅಲಂಕಾರ, ದೇವರ ದರ್ಶನಕ್ಕೆ ಭಕ್ತಾದಿಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ದುರಂತದಲ್ಲಿ ಬಲಿಯಾದ

ನಂ.ಗೂಡು ಮಂಜುಳಾ, ಬೆಂಗಳೂರು ಲಕ್ಷ್ಮೀ ದೇಹಗಳು ವಾರಸುದಾರರಿಗೆ ಹಸ್ತಾಂತರ



ಮಂಜುಳಾ ಲಕ್ಷ್ಮೀ

ಮೈಸೂರು, ಡಿ.27 (ಎಂಟಿವೈ)– ಹೀಲಿಯಂ ಸಿಲಿಂಡರ್ ಸ್ಫೋಟ ಪ್ರಕರಣದಲ್ಲಿ ಗಾಯಗೊಂಡು, ಶುಕ್ರವಾರ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟ ನಂಜನಗೂಡಿನ ಮಂಜುಳಾ ಹಾಗೂ ಬೆಂಗಳೂರಿನ ಲಕ್ಷ್ಮೀ ಅವರ ದೇಹಗಳ ಮರಣೋತ್ತರ ಪರೀಕ್ಷೆ ಬಳಿಕ ಶನಿವಾರ ಬೆಳಗ್ಗೆ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಅರಮನೆಯ ಜಯಮಾರ್ತಾಂಡ ದ್ವಾರ ಮುಂಭಾಗ ಬಿ.ಎನ್.ರಸ್ತೆ ಬದಿಯಲ್ಲಿ ಗುರುವಾರ ರಾತ್ರಿ ಬಲೂನು ಮಾರಾಟಗಾರನ ಬಳಿಯಿದ್ದ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ಬಲೂನು ಮಾರಾಟಗಾರ ಉತ್ತರ ಪ್ರದೇಶ ಮೂಲದ ಸಲೀಂ ಸ್ಥಳದಲ್ಲಿಯೇ ಮೃತಪಟ್ಟರೆ, ಗಂಭೀರವಾಗಿ ಗಾಯಗೊಂಡಿದ್ದ ನಂಜನಗೂಡಿನ ಚಾಮಲಾಪುರ ಬೀದಿ ನಿವಾಸಿ ಮಂಜುಳಾ, ಬೆಂಗಳೂರಿನ ಕಾಮಾಕ್ಷಿಪಾಳ್ಯದ ಲಕ್ಷ್ಮೀ ಶುಕ್ರವಾರ ಸಂಜೆ ಕೆ.ಆರ್. ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದರು.

ಮೈಸೂರು ಮೆಡಿಕಲ್ ಕಾಲೇಜಿನ ಶವಾಗಾರದಲ್ಲಿ ಶನಿವಾರ ಬೆಳಗ್ಗೆ ಮಂಜುಳಾ ಹಾಗೂ ಲಕ್ಷ್ಮೀ ದೇಹದ ಮರಣೋತ್ತರ ಪರೀಕ್ಷೆ ನಡೆಯಿತು. ಮಂಜುಳಾ ಅವರ ದೇಹವನ್ನು ಅವರ ಕುಟುಂಬದ ಸದಸ್ಯರು ನಂಜನಗೂಡಿಗೆ ಕೊಂಡೊಯ್ದು ಸಂಬಂಧಿಕರು, ಸ್ಥಳೀಯರ ಸಮ್ಮುಖದಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಿದರೆ, ಲಕ್ಷ್ಮೀ ದೇಹವನ್ನು ಹೊಸಳ್ಳಿ ಸರ್ಕಲ್‌ಗೆ ಕೊಂಡೊಯ್ದು ಸಂಜೆ ವೇಳೆಗೆ ಬಂಧು–ಬಳಗದ ಸಮ್ಮುಖದಲ್ಲಿ ಅವರ ಅಂತ್ಯ ಸಂಸ್ಕಾರ ನೆರವೇರಿಸಿದರು.

ಬಾಲಕಿ ಹೆಸರಿಗೆ ಪರಿಹಾರ ಎಫ್‌ಡಿ ಮಾಡಿ, ಓದಲು ನೆರವು ನೀಡಿ: ಲಕ್ಷ್ಮೀ ಅವರ ಸಂಬಂಧಿಕರು ಪತ್ರಕರ್ತರೊಂದಿಗೆ ಮಾತನಾಡಿ, ದುರಂತದಲ್ಲಿ ನಮ್ಮ ಮಗಳನ್ನು ಕಳೆದುಕೊಂಡಿದ್ದೇವೆ. ಸರ್ಕಾರ ನಮಗೆ ನ್ಯಾಯ ದೊರಕಿಸಿಕೊಡಬೇಕು. ಲಕ್ಷ್ಮೀ ಅವರ ಮಗಳು ಡಿಂಪಲ್ ಹೆಸರಿನಲ್ಲಿ ಪರಿಹಾರದ ಮೊತ್ತವನ್ನು ಡೆಪಾಸಿಟ್ ಇಡಬೇಕು. ಅಲ್ಲದೆ, ಡಿಂಪಲ್ ಶಿಕ್ಷಣದ ಜವಾಬ್ದಾರಿಯನ್ನು ಸರ್ಕಾರವೇ ಹೊರಬೇಕು ಎಂದು ಮನವಿ ಮಾಡಿದರು.

ಮಂಜುಳಾ ಸಾವಿನ ಆಘಾತದಿಂದ ಸಹೋದರ ಹೃದಯಾಘಾತಕ್ಕೆ ಬಲಿ



ಹೀಲಿಯಂ ಸಿಲಿಂಡರ್ ಸ್ಫೋಟಕ್ಕೆ ಬಲಿಯಾದ ನಂಜನಗೂಡಿನ ಮಂಜುಳಾ ಅವರ ಸಹೋದರ ಹೃತಯಾಘಾತದಿಂದ ಮೃತಪಟ್ಟಿದ್ದಾರೆ. ಮೈಸೂರಿನ ಕೆ.ಟಿ.ಸ್ಟ್ರೀಟ್‌ನಲ್ಲಿ ವಾಸವಿದ್ದ ಮಂಜುಳ ಅಣ್ಣ ಪರಮೇಶ್(60) ಕಳೆದ ರಾತ್ರಿಯಷ್ಟೇ ಶವಾಗಾರದಲ್ಲಿ ಮಂಜುಳ ಅವರ ಮೃತದೇಹದ ಅಂತಿಮ ದರ್ಶನ ಪಡೆದು ಬಂದಿದ್ದರು. ತಂಗಿಯ ಸಾವಿನಿಂದ ತೀವ್ರ ನೊಂದಿದ್ದ ಪರಮೇಶ್, ಇಂದು ಬೆಳಗ್ಗೆ ತೀವ್ರ ಹೃದಯಾಘಾತದಿಂದ ಕೊನೆಯುಸಿರೆಳೆದಿದ್ದಾರೆ. ಮಂಜುಳ ಅವರ ಅಂತ್ಯಕ್ರಿಯೆ ನೆರವೇರಿಸಿದ ಬಳಿಕ ಸಂಬಂಧಿಕರು ಮೈಸೂರಿಗೆ ಬಂದು ಪರಮೇಶ್ ಅವರ ಅಂತ್ಯಕ್ರಿಯೆಯಲ್ಲಿ ಭಾಗಿಯಾದರು.



ಹುಟ್ಟುಹಬ್ಬದ ಶುಭಾಶಯ...

ಕೆಪಿಸಿಸಿ ಸಂಯೋಜಕರೂ ಆದ ಮೈಸೂರು ನಗರ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಸಿ.ಎಸ್.ರಘು ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ಮೈಸೂರಿನ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮುಖಂಡರಾದ ನಾಗೇಶ್ ಕರಿಯಪ್ಪ, ಅಶೋಕ, ಗಿರೀಶ್, ಮೋಹನ್‌ಕುಮಾರ್, ಡೈರಿ ವೆಂಕಟೇಶ್, ಈಶ್ವರ್ ಚಕ್ಕಡಿ, ಲತಾ ರಂಗನಾಥ್, ಮಹೇಶ್, ಮಹೇಂದ್ರ, ಹರೀಶ್‌ಗೌಡ ಇದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.27–ಹೂಟಗಳ್ಳಿ ಸ್ವೀಕರಣಾ ಕೇಂದ್ರ ಮತ್ತು ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ನಿರ್ವಹಣಾ ಕೆಲಸದ ನಿಮಿತ್ತ ಡಿ.28ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6ರವರೆಗೆ ಆಟೋ ಮೋಟಿವ್ ಆಕ್ಸಿಲ್ ಸುತ್ತಮುತ್ತ, ರಾಣೆ ಮದ್ರಾಸ್ ಪಕ್ಕದ ರಸ್ತೆ, ಹೆಚ್.ಟಿ.ರೆಕೆಟ್ ಬೆನ್‌ಸರ್, ಕೂರ್ಗಳ್ಳಿ ಕೈಗಾರಿಕ ಪ್ರದೇಶ, ಹೂಟಗಳ್ಳಿ ಕೈಗಾರಿಕ ಪ್ರದೇಶ, ಹಳೇ ಲೂನಾರ್ಸ್, ತಿಯೋರೆಮ್ಸ್, ಸ್ವೆಕ್ಟ್ರಾ ಪೈಪ್ಸ್, ವರ್ಷ ಕೇಬಲ್, ಎಲ್&ಟಿ, ವಿಪ್ರೋ ಲೈಟ್ಸ್, ಶ್ರೀರಾಮ್ ಇಂಜಿನಿಯರ್ಸ್, ರಜತ್ ಬ್ಯಾಟರಿ, ಆರ್.ಪಿ.ಜಿ ಕೇಬಲ್, ಜಿಮ್‌ಕೋ, ಸ್ಪೈ, ಎಂಪ್ರೋಕಾಂಕ್ರಿಟ್ ಸುತ್ತಮುತ್ತಲಿನ ಪ್ರದೇಶಗಳು. ಕೂರ್ಗಳ್ಳಿ ಕೈಗಾರಿಕ ಪ್ರದೇಶ, ಎಕ್ಸೆಲ್ ಪಬ್ಲಿಕ್ ಶಾಲೆ, ವಿನ್ಯಾಸ್, ಕೂರ್ಗಳ್ಳಿ ಕೆರೆ ಸುತ್ತಮುತ್ತ, ಗೋಪಾಲನ್ ಕಾಂಪೌಂಡ್, ವಿಪ್ರೋ, ಮೆರಿಟಾರ್, ಪಟ್ಟಾಬಿ ಎಂಟರ್ ಪ್ರೈಸಸ್, ಮಿಲೆನಿಯಮ್, ಎಲ್& ಟಿ, ಮಾರ್ಕ್ ಬ್ಯಾಟರಿಸ್ ರಸ್ತೆ, ಚಾಮುಂಡಿ ಸಿಲ್ಕ್ಸ್ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಆರ್.ಗೋಪಾಲಕೃಷ್ಣ ಅರಸ್ ಮತ್ತು ಡಾ.ಕೆ.ಎಸ್. ನಿತಿನ್ ಅವರ ಮಾರ್ಗದರ್ಶನದಲ್ಲಿ ಪಿ.ಮಹದೇವಪ್ರಸಾದ್ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ ಇನ್ವೆಸ್ಟಿಗೇಷನ್ ಆನ್ ದಿ ಸ್ಟ್ರಕ್ಚರ್ ಪ್ರಾಪರ್ಟಿ ರಿಲೇಷನ್‌ಶಿಪ್ ಆಫ್ ಮಾಡಿಫೈಡ್ ಮಹಾಪ್ರಬಂಧಕ್ಕೆ ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.12.2025 ಭಾನುವಾರ, ಮಳೆ ನಕ್ಷತ್ರ: ಮೂಲ, 16.12.2025 ರಿಂದ 28.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ರೇವತಿ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಮೈಸೂರು ಡಿಸ್ಟ್ರಿಕ್ಟ್ ಅಥ್ಲೆಟಿಕ್ ಅಸೋಸಿಯೇಷನ್ :** ಬೆಳಗ್ಗೆ 8.30ಕ್ಕೆ ಕರ್ನಾಟಕ ರಾಜ್ಯ ಕ್ರಾಸ್ ಕಂಟ್ರಿ ಚಾಂಪಿಯನ್‌ಶಿಪ್ ಅಂಗವಾಗಿ ಜಾಗೃತಿ ಜಾಥಾ, ಚಾಲನೆ : ಜಿ. ಶ್ರೀನಾಥ್ ಬಾಬು, ಹರೀಶ್ ಕೇಜ್ರಿವಾಲ್, ಎಸ್. ಬಸವರಾಜ್, ಬಿ.ಎಲ್. ಜಗದೀಶ್; ಬೆಳಗ್ಗೆ 9.30ಕ್ಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಗೃಹ ಸಚಿವ ಜಿ. ಪರಮೇಶ್ವರ್, ಅತಿಥಿಗಳು : ಶಾಸಕರಾದ ಜಿ.ಟಿ. ದೇವೇಗೌಡ, ಹರೀಶ್‌ಗೌಡ, ಹೆಚ್.ಎಂ. ಗಣೇಶ್‌ಪ್ರಸಾದ್, ಎಸ್.ಸೋಮಶೇಖರ್, ಅಭಿಲಾಷ್ ನಾಯರ್, ಅಧ್ಯಕ್ಷತೆ : ಡಾ. ಸಿ. ಕೃಷ್ಣ, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ.
- **ಕರ್ನಾಟಕ ಸ್ಪೋರ್ಟ್ಸ್ ಸಿಲಂಬಮ್ ಅಸೋಸಿಯೇಷನ್ :** 6ನೇ ರಾಜ್ಯ ಮಟ್ಟದ ಸ್ಟಿಕ್ ಫೈಟಿಂಗ್ ಟೂರ್ನಮೆಂಟ್, ಉಪಸ್ಥಿತರು : ನಿವೃತ್ತ ಜಿಲ್ಲಾ ಮತ್ತು ಸೆಸನ್ಸ್ ನ್ಯಾಯಾಧೀಶ ಎ.ಕೆ. ನವೀನ್ ಕುಮಾರಿ, ಕೊಂಕಣ್ ಭವನದ ಅಧ್ಯಕ್ಷ ಜಾನ್ ವಿಲಿಯಮ್ ಡಿಸೋಜಾ, ರವಿ, ಎಂ.ಬಿ. ಚಿದಾನಂದ, ಸ್ಥಳ: ಕೊಂಕಣ್ ಭವನ, ವಿಜಯನಗರ 2ನೇ ಹಂತ, ಬೆಳಗ್ಗೆ 9.30ಕ್ಕೆ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ಶರಣು ವಿಶ್ವವಚನ ಫೌಂಡೇಷನ್, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಶರಣು ದಿನಚರಿ, ಬಸವ ಭಾನು ಸಂಚಿಕೆ, ಮಂಗಳ ಮುದ್ದುಮಾದಪ್ಪರವರ ವಚನ ಗುಮ್ಮಟ ಡಾ. ಫ.ಗು. ಹಳಕಟ್ಟಿ ಕೃತಿ ಬಿಡುಗಡೆ, ರಾಜ್ಯ ಮಟ್ಟದ ಚಿನ್ಮಯಜ್ಞಾನಿ ಶಿಕ್ಷಕ ಪ್ರಶಸ್ತಿ, ವಿವಿಧ ಪ್ರಶಸ್ತಿಗಳ ಪ್ರದಾನ ಸಮಾರಂಭ, ಕೃತಿ ಬಿಡುಗಡೆ : ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ ಗಂಗಾವತಿ, ಉಪಸ್ಥಿತರು : ಬೆಂಗಳೂರು ಬಸವ ಸಮಿತಿ ಅಧ್ಯಕ್ಷ ಡಾ. ಅರವಿಂದ ಜತ್ತಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10ಕ್ಕೆ.
- **ಸುರುಚಿ ರಂಗಮನೆ :** ಸಾಹಿತ್ಯ ಚಾವಡಿ ಕಾರ್ಯಕ್ರಮ –164, ಭಾಷಣಕಾರರು: ಡಾ.ಎಚ್.ಎಲ್. ಚಂದ್ರಶೇಖರ್, ಪ್ರಾಧ್ಯಾಪಕರು ಹಾಗೂ ಲೇಖಕರು., ವಿಷಯ: ಸರಸ ಸಂಗೀತ, ಸಾಹಿತ್ಯ – ಸಂಗೀತಗಳ ಸಂಬಂಧ ಹಾಗೂ ಸೌಂದರ್ಯ ಮೀಮಾಂಸೆ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.
- **ಶ್ರೀಮತಿ ಜಯಲಕ್ಷ್ಮಮ್ಮ ಬಿ.ಎಸ್. ಸಣ್ಣಯ್ಯ ಟ್ರಸ್ಟ್ :** ಬಿ.ಎಸ್. ಸಣ್ಣಯ್ಯ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಸಾಹಿತಿ ಡಾ. ಸಿ. ನಾಗಣ್ಣ, ಪ್ರಶಸ್ತಿ ಪ್ರದಾನ : ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್, ಅಧ್ಯಕ್ಷತೆ : ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ರಾಗೌ, ಪ್ರಶಸ್ತಿ ಪುರಸ್ಕೃತರು : ಹಿರಿಯ ಸಂಶೋಧಕರಾದ ಡಾ. ವೈ.ಸಿ. ಭಾನುಮತಿ, ಉಪಸ್ಥಿತರು : ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ಬಿ.ಎಸ್. ಸುಶೀಲ ಲಕ್ಷ್ಮೀಗೌಡ, ಸಂವಹನ ಪ್ರಕಾಶಕ ಡಿ.ಎನ್. ಲೋಕಪ್ಪ, ಸ್ಥಳ: ಗ್ರೀನ್ ಹೆರಿಟೇಜ್ ಹೋಟೆಲ್, ಬೆಳಗ್ಗೆ 10.30ಕ್ಕೆ
- **ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರ :** ಜ್ಯೋತಿಷ್ಯ ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಪ್ರದಾನ ಸಮಾರಂಭ, ಸಾನ್ನಿಧ್ಯ: ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಉಪಸ್ಥಿತರು: ತುಮಕೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ವೈ.ಎಸ್.ಸಿದ್ದೇಗೌಡ, ಎಡಿಸಿ ಡಾ.ಪಿ.ಶಿವರಾಜು, ಕರ್ನಾಟಕ ಸಂಸ್ಕೃತ ವಿವಿ ಕುಲಸಚಿವ ಪ್ರೊ.ಗಿರೀಶ್ ಚಂದ್ರ, ಡಾ.ವಿ.ಭಾನುಪ್ರಕಾಶ್ ಶರ್ಮ, ವಿ.ನಾಗಭೂಷಣಾರಾಧ್ಯ, ಅಧ್ಯಕ್ಷತೆ : ಕೇಂದ್ರದ ಅಧ್ಯಕ್ಷ ಸಿದ್ಧಾಂತಿ ಕೆ.ಜಿ. ಪುಟ್ಟಹೊನ್ನಯ್ಯ, ಸ್ಥಳ: ಆರಾಧ್ಯ ಮಹಾಸಭಾ, ಚಾಮುಂಡಿಪುರಂ, ಬೆಳಗ್ಗೆ 10.30ಕ್ಕೆ.
- **ಮೈಸೂರು ಮುಲಕನಾಡು ಸಭಾ:** ಬೆಳಗ್ಗೆ 10.30 ರಿಂದ ತ್ಯಾಗರಾಜ ಆರಾಧನೆ ಪ್ರಯುಕ್ತ ಸಂಗೀತ ಸ್ಪರ್ಧೆ, ಸಂಜೆ 4ಕ್ಕೆ ದಿವಂಗತ ಪುಟ್ಟಣ್ಣ ಕಣಗಾಲ್ ಅವರ ಸಂಸ್ಮರಣೆ ಪ್ರಯುಕ್ತ ಸಂಗೀತ ಸಂಜೆ, ಉಪಸ್ಥಿತರು : ನಾರಾಯಣಸ್ವಾಮಿ, ಶ್ರೀಮತಿ ನಾಗಲಕ್ಷ್ಮಿ ಪುಟ್ಟಣ್ಣ ಕಣಗಾಲ್, ಅಧ್ಯಕ್ಷತೆ : ನಾಡೋಜ ಪ್ರಶಸ್ತಿ ವಿಜೇತ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, ಮಧ್ಯಾಹ್ನ 12 ರಿಂದ ಆಹಾರ ಮೇಳ, ಸ್ಥಳ: ಮುಲಕನಾಡು ಸಭಾ ಭವನ, ವಿಜಯನಗರ 3ನೇ ಹಂತ.
- **ಮೈಸೂರು ಡಿಸ್ಟ್ರಿಕ್ಟ್ ಫೋಟೋಗ್ರಾಫರ್ಸ್ ಅಂಡ್ ವೀಡಿಯೋಗ್ರಾಫರ್ಸ್ ಅಸೋಸಿಯೇಷನ್ :** ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಉಪಸ್ಥಿತರು : ಶಾಸಕ ಕೆ. ಹರೀಶ್‌ಗೌಡ, ಮಾಜಿ ಸಂಸದ ಪ್ರತಾಪ್‌ಸಿಂಹ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಎಂಡಿಪಿವಿಎ ಅಧ್ಯಕ್ಷ ಬಿ. ವಿಜಯ್, ಕೆ.ಎಸ್. ಉಮಾಶಂಕರ್, ಹೆಚ್. ರಾಜಗೋಪಾಲ್, ಕೆ. ಉಮೇಶ್, ಕೆ.ಜಿ. ಸಿದ್ದಲಿಂಗ ಪ್ರಸಾದ್, ಎ. ಮೋಹನ್, ಎಂ. ಲೋಕೇಶ್, ಎಂ.ಎನ್. ಮಂಜುನಾಥ್, ಎಂ. ನಾರಾಯಣಸ್ವಾಮಿ, ಮಂಜುನಾಥ, ವರ್ಗೀಸ್, ನಾಗರಾಜ ನಾಯ್ಡು, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಬೆಳಗ್ಗೆ 11ಕ್ಕೆ.
- **ಭಾರತೀಯ ರಿಸರ್ವ್ ಬ್ಯಾಂಕ್ ನೋಟು ಮುದ್ರಣ ಪ್ರೈವೇಟ್ ಲಿಮಿಟೆಡ್, ಆಶ್ರಯ್ ಸೇವಾ ಸಂಸ್ಥಾನ್, ಲಯನ್ಸ್ ಅಂತಾರಾಷ್ಟ್ರೀಯ, ಜೈನ್ ಮಿಲನ್ ಚಾರಿಟಬಲ್ ಟ್ರಸ್ಟ್ :** ಮಾಡ್ಯುಲರ್ ಕೃತಕ ಕೈ ಮತ್ತು ಕಾಲಿನ ಅಂಗಗಳನ್ನು ವಿಶೇಷ ವಿಕಲಚೇತನರಿಗೆ ವಿತರಿಸುವ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ಲಯನ್ ಹೇಮಂತ್‌ಕುಮಾರ್ ಬನ್ನಾಲಿ, ಉಪಸ್ಥಿತರು: ಸಚಿವ ಡಿ. ಸುಧಾಕರ್, ಕೆ.ರಾಜಶೇಖರ್, ಶಾಸಕರಾದ ತನ್ವೀರ್‌ಸೇಠ್, ಸಿ.ಎನ್.ಮಂಜೇಗೌಡ, ಟಿ.ಎಸ್.ಶ್ರೀವತ್ಸ, ಕೆ. ಹರೀಶ್‌ಗೌಡ, ಡಾ.ಯತೀಂದ್ರ, ಕೆ.ಎಸ್. ರಾಘವೇಂದ್ರ, ಸ್ಥಳ: ನಟರಾಜ ಕಲ್ಯಾಣ ಮಂದಿರ, ಬೆಳಗ್ಗೆ 11ಕ್ಕೆ.
- **ಕುಮಾರ್ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ :** 67ನೇ ಅಂತರರಾಷ್ಟ್ರೀಯ ವಿಶೇಷ ನಿರಂತರ ಕಲೆಮನೆ ಉತ್ಸವ, ಮುಖ್ಯ ಅತಿಥಿಗಳು : ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್ ಪ್ರಿನ್ಸಿಪಾಲ್ ಶ್ರೀವತ್ಸ, ಕಲಾ ಪೋಷಕ ಆರ್.ಜ್ಞಾನೇಶ್ವರ್ ಸಿಂಗ್, ಕಲಾವಿದೆ ಡಾ ಜಮುನಾ ರಾಣಿ.ವಿ ಮಿರ್ಲೆ, ಸ್ಥಳ: ಕಲೆಮನೆ ಸಭಾಂಗಣ, ಮಧ್ಯಾಹ್ನ 2.30ಕ್ಕೆ.
- **ಅರಸು ಯುವಜನ ವೇದಿಕೆ :** ಕನ್ನಡ ರಾಜ್ಯೋತ್ಸವ, ಉದ್ಘಾಟನೆ: ಡಾ.ಪ್ರಶಾಂತ್ ಅರಸ್, ಮುಖ್ಯ ಅತಿಥಿಗಳು: ಇತಿಹಾಸ ವಿಶ್ಲೇಷಕರಾದ ಧರ್ಮೇಂದ್ರಕುಮಾರ್, ಅಧ್ಯಕ್ಷತೆ: ವೇದಿಕೆ ಅಧ್ಯಕ್ಷ ಪುನೀತ್ ರಾಜೇ ಅರಸ್, ಉಪಸ್ಥಿತರು: ಅರಸು ಮಂಡಳಿ ಸಂಘದ ಅಧ್ಯಕ್ಷ ಶ್ರೀಕಾಂತರಾಜೇ ಅರಸ್, ಮಲ್ಲರಾಜೇ ಅರಸ್, ಸುಬ್ರಹ್ಮಣ್ಯ ಅರಸ್, ಶ್ರೀಧರ್‌ರಾಜೇ ಅರಸ್, ಮೋಹನ್‌ರಾಜೇ ಅರಸ್, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 4ಕ್ಕೆ.
- **ವಿಶ್ವ ಮಾನವ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ :** ಪ್ರತಿಭಾ ಪುರಸ್ಕಾರ, ಹಿರಿಯ ಸದಸ್ಯರಿಗೆ ಸನ್ಮಾನ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ.ಎಸ್. ಕೃಷ್ಣ, ಉಪಸ್ಥಿತರು : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಶ್ರೀಮತಿ ಶಾರದಮ್ಮ ಈಶ್ವರ್, ಬಿ.ಎಲ್. ಭೈರಪ್ಪ, ಡಾ. ಎಂ.ಬಿ. ಮಂಜೇಗೌಡ, ಸ್ಥಳ: ಡಾ. ಪುಟ್ಟರಾಜು ಗವಾಯಿ ಕ್ರೀಡಾಂಗಣ, ಜೆ.ಪಿ.ನಗರ, ಸಂಜೆ 5.30ಕ್ಕೆ.
- **ಪರಂಪರೆ :** ಶ್ರೀ ಮದ್ಭಾಗವತ ಉಪನ್ಯಾಸ ಸರಣಿ, ನೃತ್ಯಾಲಯ ತಂಡದಿಂದ ಭಜನೆ, ಡಾ. ವೀಣಾ ಬನ್ನಂಜೆ ಅವರಿಂದ ಭಾಗವತ ಉಪನ್ಯಾಸ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಸಂಜೆ 6 ರಿಂದ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಅಘಹರಾನಂದ ಅವರಿಂದ ಶ್ರೀ ರಾಮಕೃಷ್ಣರ ಪ್ರತಿಪಾದಕರಾಗಿ ಸ್ವಾಮಿ ವಿವೇಕಾನಂದರು ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀವೇಣುಗೋಪಾಲಸ್ವಾಮಿ ದೇವಸ್ಥಾನ, ತ್ಯಾಗರಾಜ ರಸ್ತೆ, ಸಂಜೆ 6.30 ರಿಂದ.
- **ಶ್ರೀ ಮಹಾಜನ ಸಭಾ ಟ್ರಸ್ಟ್ :** ತಿರುಪ್ಪಾವೈ ಪಾರಾಯಣ, ಡಾ. ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾದೇವಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್ ಆವರಣ, ಶ್ರೀ ರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6.30 ರಿಂದ.
- **ರಂಗಾಯಣ :** ಧಾರವಾಡ ರಂಗಾಯಣ ಕಲಾವಿದರಿಂದ ಕಂದಗಲ್ಲ ಭಾರತ ನಾಟಕ ಪ್ರದರ್ಶನ, ನಿರ್ದೇಶನ : ಡಾ. ಪ್ರಕಾಶ್ ಗರುಡ, ಸ್ಥಳ: ವನರಂಗ, ರಂಗಾಯಣ, ಸಂಜೆ 6.30ಕ್ಕೆ.
- **ನೃತ್ಯ ಸಂಸ್ಕೃತಿ ನಾಟ್ಯ ಶಾಲೆ :** ನೃತ್ಯ ಸಿಂಚನ, ಸರ್ವಂ ಶಿವಮಯಂ, ಮುಖ್ಯ ಅತಿಥಿಗಳು : ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಮಣ್ಯ, ಆಕಾಶವಾಣಿ ನಿವೃತ್ತ ಕಾರ್ಯಕ್ರಮ ನಿರ್ವಾಹಕ ಪ್ರಭುಸ್ವಾಮಿ ಮಳಿಮಠ, ನೃತ್ಯ ಸಂಯೋಜನೆ : ವಿದುಷಿ ಚಾಂದಿನಿ ಮನೋಜ್, ವಿದ್ವಾನ್ ಎಂ.ಎಸ್. ನವೀನ್–ಗಾಯನ, ವಿದ್ವಾನ್ ವಿಕ್ರಮ್ ಭಾರದ್ವಾಜ್–ಮೃದಂಗ, ವಿದ್ವಾನ್ ಸಮೃದ್ ಶ್ರೀನಿವಾಸ್–ಕೊಳಲು, ಸ್ಥಳ: ರಮಾಗೋವಿಂದ ಕಲಾವೇದಿಕೆ, ಗಾನಭಾರತಿ, ಕುವೆಂಪುನಗರ, ಸಂಜೆ 6.30ಕ್ಕೆ

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣ ಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ – ಡಾ.ಶಾಂತ ನಾಗರಾಜ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಎ.ಎಸ್. ನಾಗಲಕ್ಷ್ಮಿ, ಎಸ್.ಸಂಗೀತಾ, ವ್ಯಾಖ್ಯಾನ : ಡಾ.ಹೆಚ್.ಎನ್.ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ, ಡಾ.ಎಸ್.ಎಲ್.ಭೈರಪ್ಪ ಅವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಚಿತ್ರಗೀತೆಗಳು, 9.05 ಕ್ಯಾನ್ಸರ್–ಮಿಥ್ಯೆಗಳು ಈ ಕುರಿತ ಪ್ರಾಯೋಜಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.40 ನಮ್ಮ ಆರೋಗ್ಯ–ರೋಗಿಗಳು ಮತ್ತು ವೈದ್ಯರ ಬಾಂಧವ್ಯ ಕುರಿತು ಹಿರಿಯ ಹೃದ್ರೋಗ ತಜ್ಞರು ಹಾಗೂ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಹೃದ್ರೋಗ ವಿಜ್ಞಾನಗಳ ವಿಭಾಗದ ನಿರ್ದೇಶಕರಾದ ಡಾ.ಕೇಶವಮೂರ್ತಿ.ವಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ –ಬೇದ್ರೆ ಮಂಜುನಾಥ, 10.00 ಕೇಳಿಗಿಳಿಗಳೇ–ವಿಜಯನಗರದ ರಾಷ್ಟ್ರೋತ್ಥಾನ ಶಾಲೆಯ ಪುಟ್ಟ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.55 ಮನ್ ಕೀ ಬಾತ್–ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತು. ನಂತರ ಮನದ ಮಾತಿನ ಕನ್ನಡ ಅನುವಾದ, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ–ಸೆಂಟ್ ಜಾನ್ ಪೌಲ್ ಸೆಕೆಂಡ್ ಚರ್ಚ್ ಸದಸ್ಯರಿಂದ ಕ್ರಿಸ್ಮಸ್ ವಿಶೇಷ ಕಾರ್ಯಕ್ರಮ, 12.35 ದೇವರನಾಮ, 12.45 ಜನಪದ ಸಂಗೀತ : ಮಂಡ್ಯ ಜಿಲ್ಲೆ ಸಂತೆಕಸಲಗೆರೆಯ ಕೆಂಪಮ್ಮ ಮತ್ತು ಸಂಗಡಿಗರು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿಯೋಜನೆಗಳ ಸರಣಿ – ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ನಿಧಿ ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು–ಎ.ಜೆ.ದಿವ್ಯಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿಸಿ–ಹೃದಯ ಪಲ್ಲವಿ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್.ಎ.ರಮಾಮಣಿ–ಹಾಡುಗಾರಿಕೆ, 6.51 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ–ಸಾಹಿತ್ಯ ಲೋಕದ ಮೇರು ಪ್ರತಿಭೆಗಳಿಗೆ ಕನ್ನಡ ಬೋಧಿಸಿದ ಗುರುವರ್ಯರಾದ ಚಿತ್ರದುರ್ಗದ ಪ್ರೊ. ಟಿ.ಎಸ್. ವೆಂಕಣ್ಣಯ್ಯ ಅವರ ವ್ಯಕ್ತಿ ಚಿತ್ರಣ. ಮಾತನಾಡುತ್ತಾರೆ : ಎಂ. ಮೃತ್ಯುಂಜಯಪ್ಪ, 8.00 ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಬಿ.ಎಸ್.ಸ್ವಾಮಿಗೌಡ, 9.30 National Science Magazine Radio Scope, 10.00 ರವಿವಾರದ ಅಖಿಲ ಭಾರತದ ಸಂಗೀತ ಸಭಾ – ವಿದುಷಿ ಡಾ.ಎನ್.ಜೆ.ನಂದಿನಿ – ಹಾಡುಗಾರಿಕೆ

ಮೈಸೂರು ಮಿತ್ರ

ಭಾನುವಾರ 28 ಡಿಸೆಂಬರ್ 2025

ಡಿ.30ಕ್ಕೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರ ಆಯ್ಕೆ

ಮೈಸೂರು, ಡಿ.27– ಪ್ರತಿಷ್ಠಿತ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ (ಎಂಸಿಡಿಸಿಸಿ) ಬ್ಯಾಂಕ್ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆಗೆ ಡಿ.30ರಂದು ಚುನಾವಣೆ ನಡೆಯಲಿದೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಡಿ.21ರಂದು ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸಭೆ ನಡೆಸಿ ಉಭಯ ಜಿಲ್ಲೆಗಳ ಶಾಸಕರು, ವಿಧಾನಪರಿಷತ್ ಸದಸ್ಯರು, ಪಕ್ಷದ ಪದಾಧಿಕಾರಿಗಳು ಹಾಗೂ ಬ್ಯಾಂಕ್‌ನ ಕಾಂಗ್ರೆಸ್ ಬೆಂಬಲಿತ ನಿರ್ದೇಶಕರ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಆ ಸಭೆಯಲ್ಲಿ ಅನೇಕ ಆಕಾಂಕ್ಷಿಗಳ ಹೆಸರು ಪ್ರಸ್ತಾಪವಾಗಿದ್ದು, ಈ ಸಂಬಂಧ ಇನ್ನಷ್ಟೇ ಅಂತಿಮ ನಿರ್ಧಾರವಾಗಬೇಕಿದೆ.

ಆಕಾಂಕ್ಷಿಗಳು: ನ್ಯಾಯಾಲಯದ ಸೂಚನೆ ಮೇರೆಗೆ ಡಿ.12ರಂದು ನಡೆಸಲಾದ ಮತ ಎಣಿಕೆಯಲ್ಲಿ ತಾಲೂಕು ಜಿಲ್ಲೆ ಮತ್ತು ತಾಲೂಕು ಮೇಲ್ಪಟ್ಟು ಕಾರ್ಯವ್ಯಾಪ್ತಿ ಹೊಂದಿರುವ ಸಹಕಾರ ಸಂಘಗಳು ಹಾಗೂ ಸಹಕಾರ ಬ್ಯಾಂಕುಗಳ ಪ್ರತಿನಿಧಿ ಕ್ಷೇತ್ರದಿಂದ ಒಂದು ಮತದಿಂದ ರೋಚಕ ಗೆಲುವು ಕಂಡ ಎಸ್.ಚಂದ್ರಶೇಖರ್, ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಆಯ್ಕೆಯಾಗಿರುವ ದೊಡ್ಡಸ್ವಾಮೇಗೌಡ(ಶಾಸಕ ರವಿಶಂಕರ್ ತಂದೆ), ಮೈಸೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ



ಸಹಕಾರ ಸಂಘಗಳ ಕ್ಷೇತ್ರದಿಂದ ಆಯ್ಕೆಯಾಗಿರುವ ಕೆಂಚಪ್ಪ, ಪಿರಿಯಾಪಟ್ಟಣ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಆಯ್ಕೆಯಾಗಿರುವ ಲೋಕೇಶ್ ಸೇರಿ ಹಲವರು ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳಾಗಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ದೊಡ್ಡಸ್ವಾಮೇಗೌಡರು ತಾವು ಅಧ್ಯಕ್ಷರಾಗಬೇಕೆಂಬ ಆಕಾಂಕ್ಷೆ ವ್ಯಕ್ತಪಡಿಸಿದ್ದಾರೆ. ಈಗಾಗಲೇ ಬ್ಯಾಂಕ್ ಅಧ್ಯಕ್ಷರಾಗಿ 13 ಶಾಖೆ ಆರಂಭ, ಸಿಬ್ಬಂದಿ ನೇಮಕಾತಿ ಹಾಗೂ ವಹಿವಾಟಿನಲ್ಲಿ ಗಣನೀಯ ಹೆಚ್ಚಳ ಮಾಡಿ, ದಾಖಲೆ ಬರೆದಿದ್ದ ಎಸ್.ಚಂದ್ರಶೇಖರ್ ಅಧ್ಯಕ್ಷ ಸ್ಥಾನಕ್ಕೆ ಪ್ರಬಲ ಆಕಾಂಕ್ಷಿಯಾಗಿದ್ದರೂ ಮುಖ್ಯಮಂತ್ರಿಗಳ ನಿರ್ಧಾರಕ್ಕೆ ಬದ್ಧರಾಗಿರುವುದಾಗಿ ನಿಷ್ಠೆ ಪ್ರದರ್ಶಿಸಿದ್ದಾರೆ. ರೇಸ್‌ನಲ್ಲಿರುವ ಇನ್ನಿತರ ತಮ್ಮದೇ ರೀತಿಯಲ್ಲಿ ಪ್ರಯತ್ನ ಮುಂದುವರೆಸಿದ್ದಾರೆ. ಇನ್ನು ಉಪಾಧ್ಯಕ್ಷ ಸ್ಥಾನಕ್ಕೆ



ಎಸ್.ಚಂದ್ರಶೇಖರ್



ದೊಡ್ಡಸ್ವಾಮೇಗೌಡ

ಸಭೆಯಲ್ಲಿ ಯಾರ ಹೆಸರೂ ಪ್ರಸ್ತಾಪವಾಗಿಲ್ಲವಾದರೂ ಅನೇಕರು ತೆರೆಮರೆ ಕಸರತ್ತು ನಡೆಸಿದ್ದಾರೆ. ಜೊತೆಗೆ ಕೊಳ್ಳೇಗಾಲ ಹಾಗೂ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪ್ರತಿನಿಧಿ ಕ್ಷೇತ್ರದಿಂದ ಆಯ್ಕೆಯಾಗಿರುವ ಮಾಜಿ ಶಾಸಕ ಆರ್.ನರೇಂದ್ರ, ಎಂಸಿಡಿಸಿಸಿ ಬ್ಯಾಂಕ್ ಪ್ರತಿನಿಧಿಯಾಗಿ ಅಪೆಕ್ಸ್ ಬ್ಯಾಂಕ್‌ಗೆ ಆಯ್ಕೆ ಮಾಡುವಂತೆ ಮನವಿ ಮಾಡಿದ್ದಾರೆ ಎನ್ನಲಾಗಿದೆ.

ಸಚಿವದ್ವಯರ ಹೆಗಲಿಗೆ: ಎಂಸಿಡಿಸಿಸಿ ಬ್ಯಾಂಕ್ ಅಧಿಕಾರವನ್ನು ಕೈವಶ ಮಾಡಿಕೊಂಡಿರುವ ಕಾಂಗ್ರೆಸ್‌ಗೆ, ಅಧ್ಯಕ್ಷರ ಆಯ್ಕೆ ವಿಚಾರ ಸವಾಲಾಗಿ ಪರಿಣಮಿಸಿದೆ. ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ನಿರ್ದೇಶಕರು ಪಕ್ಷದ ನಿರ್ಧಾರಕ್ಕೆ ಬದ್ಧ ಎಂದಿದ್ದರೂ ಹೆಸರು ಪ್ರಕಟಿಸಿದಾಗ ಏನಾದರೂ ಆಕ್ಷೇಪ ಅಥವಾ ಅಸಮಾಧಾನ ವ್ಯಕ್ತಪಡಿಸಬಹುದೇ ಎಂಬ ಎಚ್ಚರಿಕೆ ಇದ್ದೇ ಇದೆ. ಹಲವು ವರ್ಷಗಳಿಂದ ಸಹಕಾರ ಕ್ಷೇತ್ರದ ಸೇವೆ ಜೊತೆಗೆ ಪಕ್ಷನಿಷ್ಠೆವುಳ್ಳ ಅನುಭವಿಗಳಿಗೆ ಅವಕಾಶ ನೀಡಬೇಕೋ ಇಲ್ಲವೇ ಜನಪ್ರತಿನಿಧಿಗಳ ಕುಟುಂಬದವರು ಅಥವಾ ಪ್ರಭಾವಿಗಳನ್ನು ಆಯ್ಕೆ ಮಾಡಬೇಕೋ ಎಂಬ ಅವಲೋಕನ ಮುಂದುವರೆದಿದೆ. ಈ ನಡುವೆ ಎಲ್ಲರ ಅಭಿಪ್ರಾಯ ಸಂಗ್ರಹಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಈ ವಿಚಾರದಲ್ಲಿ ಯಾವುದೇ ಗೊಂದಲ ಉಂಟಾಗದಂತೆ ಸೂಕ್ತ ನಿರ್ಣಯ ಕೈಗೊಳ್ಳುವ ಜವಾಬ್ದಾರಿಯನ್ನು ಜಿಲ್ಲಾ ಉಸ್ತುವಾರಿ ಸಚಿವರುಗಳಾದ ಮೈಸೂರಿನ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಚಾಮರಾಜನಗರದ ಕೆ.ವೆಂಕಟೇಶ್‌ಗೆ ವಹಿಸಿದ್ದಾರೆ. ಈ ನಿಟ್ಟಿನಲ್ಲಿ ಬರುವ ಸೋಮವಾರ ಸಚಿವದ್ವಯರ ಸಮ್ಮುಖದಲ್ಲಿ ಸಭೆ ನಡೆಸುವ ತಯಾರಿ ನಡೆದಿದೆ.

ಸಚಿವದ್ವಯರು ಕಾಂಗ್ರೆಸ್ ಬೆಂಬಲಿತ ನಿರ್ದೇಶಕರೊಂದಿಗೆ ಚರ್ಚೆ ನಡೆಸಲಿದ್ದಾರೆ. ಅಧ್ಯಕ್ಷ ಉಪಾಧ್ಯಕ್ಷ ಹಾಗೂ ಅಪೆಕ್ಸ್ ಬ್ಯಾಂಕ್‌ಗೆ ಪ್ರತಿನಿಧಿ ಆಯ್ಕೆ ಸಂಬಂಧ ಸಿಎಂ ಸಭೆಯಲ್ಲಿ ಚರ್ಚೆಯಾದಂತೆ ಎರಡು ಅವಧಿಯಲ್ಲಿ ಒಟ್ಟು ಆರು ನಿರ್ದೇಶಕರಿಗೆ ಅವಕಾಶ ಕಲ್ಪಿಸುವ ಬಗ್ಗೆಯೂ ಸ್ಪಷ್ಟ ನಿಲುವು ಕೈಗೊಳ್ಳಲಾಗುತ್ತದೆ. ಹಾಗಾದರೆ ಮೊದಲ ಅವಧಿ ಹಾಗೂ ಎರಡು ಅವಧಿಯಲ್ಲಿ ಅವಕಾಶ ಪಡೆಯುವ ನಿರ್ದೇಶಕರ ಪಟ್ಟಿಯನ್ನು ಅಂತಿಮಗೊಳಿಸಲಾಗುತ್ತದೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ.

ಆರ್‌ಎಸ್‌ಎಸ್ ಸಂಘಟನಾ ರಚನೆಯಲ್ಲಿ ಅಮೂಲಾಗ್ರ ಬದಲಾವಣೆ

ಇತಿಹಾಸ ಸೇರಲಿದ್ದಾರೆ ಪ್ರಾಂತೀಯ ಪ್ರಚಾರಕರು

ನವದೆಹಲಿ, ಡಿ.27– ಆರ್‌ಎಸ್‌ಎಸ್ ತನ್ನ ಕಾರ್ಯಚಟುವಟಿಕೆಯನ್ನು ಇನ್ನಷ್ಟು ತಳಮಟ್ಟಕ್ಕೆ ಕೊಂಡೊಯ್ಯಲು ಮತ್ತು ಆಡಳಿತಾತ್ಮಕ ಸುಧಾರಣೆ ತರಲು ಮುಂದಾಗಿದೆ. ಇದರ ಭಾಗವಾಗಿ ದಶಕಗಳಿಂದ ಜಾರಿಯಲ್ಲಿದ್ದ 'ಪ್ರಾಂತೀಯ ಪ್ರಚಾರಕ' ಹುದ್ದೆಗಳನ್ನು ರದ್ದುಗೊಳಿಸಿ, ಹೊಸದಾಗಿ 'ವಿಭಾಗೀಯ ಪ್ರಚಾರಕ' ವ್ಯವಸ್ಥೆಯನ್ನು ಜಾರಿಗೆ ತರಲು ಯೋಜಿಸಿದೆ.

ಸಂಘದ ಹೊಸ ಯೋಜನೆಯ ಪ್ರಕಾರ ಇನ್ನು ಮುಂದೆ ಪ್ರಾಂತ್ಯ ಮಟ್ಟದ ದೊಡ್ಡ ಜವಾಬ್ದಾರಿಗಳ ಬದಲಿಗೆ ಕೆಲಸದ ವ್ಯಾಪ್ತಿಯನ್ನು ಸೀಮಿತಗೊಳಿಸಿ 'ವಿಭಾಗೀಯ ಪ್ರಚಾರಕ'ರನ್ನು ನೇಮಿಸಲಾಗುತ್ತದೆ. ಈ ವಿಭಾಗೀಯ ಪ್ರಚಾರಕರು ಪ್ರಾಂತೀಯ ಪ್ರಚಾರಕರಿಗಿಂತ ಕಡಿಮೆ ಭೌಗೋಳಿಕ ಪ್ರದೇಶದ ಜವಾಬ್ದಾರಿ ಹೊಂದಿರುತ್ತಾರೆ. ಪ್ರತಿ ರಾಜ್ಯಕ್ಕೆ ಒಬ್ಬರೇ ರಾಜ್ಯ ಪ್ರಚಾರಕರಿರುತ್ತಾರೆ. ಅವರ ಅಡಿಯಲ್ಲಿ ಎರಡು ಡಿವಿಷನ್ ಒಳಗೊಂಡ ಒಂದು ಸಂಘದ ವಿಭಾಗವಿರುತ್ತದೆ. ಉದಾಹರಣೆಗೆ, ಪ್ರಸ್ತುತ 6 ಪ್ರಾಂತ್ಯಗಳಾಗಿ ಹಂಚಿ ಹೋಗಿರುವ ಉತ್ತರ ಪ್ರದೇಶದ ಜವಾಬ್ದಾರಿಯನ್ನು ಇನ್ನು ಮುಂದೆ ಒಬ್ಬರೇ ರಾಜ್ಯ ಪ್ರಚಾರಕರು ಮತ್ತು ಒಂಬತ್ತು ವಿಭಾಗೀಯ ಪ್ರಚಾರಕರು ನಿರ್ವಹಿಸಲಿದ್ದಾರೆ.

ಕೇವಲ ಜಿಲ್ಲಾ ಅಥವಾ ಪ್ರಾಂತೀಯ ಮಟ್ಟದಲ್ಲಿ ಮಾತ್ರವಲ್ಲದೆ, ಉನ್ನತ ಮಟ್ಟದ 'ಕ್ಷೇತ್ರ ಪ್ರಚಾರಕ'ರ ಹುದ್ದೆಗಳಲ್ಲೂ ಕಡಿತವಾಗಲಿದೆ. ಉತ್ತರ ಪ್ರದೇಶ ಮತ್ತು ಉತ್ತರಾಖಂಡಕ್ಕೆ ಪ್ರತ್ಯೇಕವಾಗಿ ಇಬ್ಬರು ಕ್ಷೇತ್ರ ಪ್ರಚಾರಕರಿರುವ ಬದಲಿಗೆ, ಇನ್ನು ಮುಂದೆ ಇಡೀ ಪ್ರದೇಶಕ್ಕೆ ಒಬ್ಬರೇ ಕ್ಷೇತ್ರ ಪ್ರಚಾರಕರಿರುತ್ತಾರೆ. ಆದರೆ ಎರಡೂ ರಾಜ್ಯಗಳಿಗೆ ಪ್ರತ್ಯೇಕ ರಾಜ್ಯ ಪ್ರಚಾರಕರು ಕಾರ್ಯನಿರ್ವಹಿಸಲಿದ್ದಾರೆ. ಇದೇ ಮಾದರಿಯು ರಾಜಸ್ಥಾನ, ದೆಹಲಿ, ಹರಿಯಾಣ ಮತ್ತು ಪಂಜಾಬ್ ಒಳಗೊಂಡ ಉತ್ತರ ವಲಯಕ್ಕೂ ಅನ್ವಯವಾಗಲಿದ್ದು, ವಿಶಾಲ ಪ್ರದೇಶಕ್ಕೆ ಒಬ್ಬರೇ ಕ್ಷೇತ್ರ ಪ್ರಚಾರಕರು ನೇತೃತ್ವ ವಹಿಸಲಿದ್ದಾರೆ.

ಸಂಘಟನೆಯನ್ನು ಹೆಚ್ಚು ಚುರುಕುಗೊಳಿಸುವ ಉದ್ದೇಶದಿಂದ ದೇಶಾದ್ಯಂತ ಇರುವ ಪ್ರಾದೇಶಿಕ ಪ್ರಚಾರಕರ ಸಂಖ್ಯೆಯನ್ನು 11 ರಿಂದ 9 ಕ್ಕೆ ಇಳಿಸಲು ಸಂಘ ನಿರ್ಧರಿಸಿದೆ. ಈ ಹೊಸ ವ್ಯವಸ್ಥೆಯು ಜಾರಿಯಾದಾಗ ಇಡೀ ದೇಶದಲ್ಲಿ ಸರಿಸುಮಾರು 75 ವಿಭಾಗೀಯ ಪ್ರಚಾರಕರು ಕಾರ್ಯನಿರ್ವಹಿಸಲಿದ್ದಾರೆ. ಅಧಿಕಾರ ಮತ್ತು ಜವಾಬ್ದಾರಿಯ ವಿಕೇಂದ್ರೀಕರಣದ ಜೊತೆಗೆ ಆಡಳಿತಾತ್ಮಕ ಸುಗಮತೆಗಾಗಿ ಸಂಘವು ಈ ಮಹತ್ವದ ಮರುರಚನೆಗೆ ಕೈಹಾಕಿದೆ.

ಬಿವಿಬಿ ಶಾಲೆಯ ವಾರ್ಷಿಕೋತ್ಸವ ಭವನೋತ್ಸವ

● ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ● ಮನಸೂರೆಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳು

ಮೈಸೂರು, ಡಿ.27(ಎಸ್‌ಪಿಎನ್)–ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಬಯಲು ರಂಗಮಂದಿರದಲ್ಲಿ ಭಾರತೀಯ ವಿದ್ಯಾಭವನ(ಬಿವಿಬಿ) ಶಾಲೆಯ 20ನೇ ವಾರ್ಷಿಕೋತ್ಸವದ ಅಂಗವಾಗಿ ಶನಿವಾರ ಏರ್ಪಡಿಸಿದ್ದ 'ಭವನೋತ್ಸವ –2025' ಕಾರ್ಯಕ್ರಮವನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಕುಲಪತಿಗಳು, ಕಳೆದ 20 ವರ್ಷಗಳಿಂದ ಭಾರತೀಯ ವಿದ್ಯಾಭವನ ಶಾಲೆ ಉತ್ತಮ ಶಿಕ್ಷಣ ನೀಡಿ, ಈ ಸಮಾಜಕ್ಕೆ ಕೊಡುಗೆ ನೀಡಿದೆ. ಕೇವಲ ಶಿಕ್ಷಣವಲ್ಲದೆ, ಭಾರತೀಯ ಪರಂಪರೆಯನ್ನು ಪ್ರಸಾರ ಮಾಡುತ್ತಿದೆ. ಇದಕ್ಕೆಲ್ಲಾ ಆಡಳಿತ ಮಂಡಳಿ ಸದಸ್ಯರು ಒತ್ತಾಸೆಯಾಗಿ ನಿಂತಿರುವುದೇ ಸಾಕ್ಷಿ ಎಂದರು.

ಪೋಷಕರು ತಮ್ಮ ಮಕ್ಕಳಿಗೆ ಕೇವಲ ಅಂಕ ಆಧಾರಿತ ಶಿಕ್ಷಣ ಕಲಿಸುವುದಕ್ಕಿಂತ ಪರಂಪರೆ ಆಧಾರಿತ, ಮೌಲ್ಯಾಧಾರಿತ, ಜ್ಞಾನಧಾರಿತ ಶಿಕ್ಷಣ ಕಲಿಸುವುದು ಮುಖ್ಯ. ಶಾಲೆಯಲ್ಲಿ ನಡೆಯುವ ಪಠ್ಯೇತರ ಚಟುವಟಿಕೆಗಳಲ್ಲೂ ವಿದ್ಯಾರ್ಥಿಗಳು ಭಾಗಿಯಾಗುವಂತೆ ನೋಡಿಕೊಳ್ಳಬೇಕು. ಮಾನಸ ಗಂಗೋತ್ರಿ ಬಯಲು ರಂಗಮಂದಿರ ಹಲವು ಖ್ಯಾತ ಕಲಾವಿದರ ಕಾರ್ಯಕ್ರಮಗಳಿಗೆ ಸಾಕ್ಷಿಯಾಗಿದೆ. ಭಾರತೀಯ ವಿದ್ಯಾಭವನ ಶಾಲೆಯ ವಿದ್ಯಾರ್ಥಿಗಳು ನಡೆಸಿಕೊಡುವ ಸಾಂಸ್ಕೃತಿಕ ಚಟುವಟಿಕೆಗಳಿಗೂ ಈ ವೇದಿಕೆ ಸಾಕ್ಷಿಯಾಗುತ್ತಿರುವುದು ಸಂತೋಷದ ಸಂಗತಿ ಎಂದರು.

ಕೇವಲ ಒಂದು ಕಾರ್ಯಕ್ರಮವಲ್ಲ. ಪೋಷಕರು, ಶಿಕ್ಷಕರು ಹಾಗೂ ಮಕ್ಕಳ ಭಾವನೆಗಳ ಮಿಲನವಾಗಿರುವುದೇ ಭಾವನೋತ್ಸವ. ಈ ಕಾರ್ಯಕ್ರಮದ ಯಶಸ್ಸಿಗೆ ನೂರಾರು ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಹಲವು ದಿನಗಳಿಂದ ಶ್ರಮಿಸಿದ್ದಾರೆ. ಮಕ್ಕಳು, ಪೋಷಕರು ಈ ಬಯಲು ರಂಗಮಂದಿರದಲ್ಲಿ ತುಂಬಿ



ಭಾರತೀಯ ವಿದ್ಯಾಭವನ(ಬಿವಿಬಿ) ಶಾಲೆಯ 20ನೇ ವಾರ್ಷಿಕೋತ್ಸವದ ಅಂಗವಾಗಿ ಶನಿವಾರ ಏರ್ಪಡಿಸಿದ್ದ 'ಭವನೋತ್ಸವ –2025' ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಈ ವೇಳೆ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಭಾರತೀಯ ವಿದ್ಯಾಭವನದ ಮೈಸೂರು ಕೇಂದ್ರದ ಛೇರ್ಮನ್ ಡಾ. ಸಿ. ನಾಗಣ್ಣ, ಗೌರವ ಕಾರ್ಯದರ್ಶಿ ಪಿ.ಎಸ್. ಗಣಪತಿ, ಖಜಾಂಚಿ ಡಾ.ಎ.ಟಿ.ಭಾಷ್ಯಂ, ಪ್ರಾಂಶುಪಾಲೆ ಎಸ್.ಲೇಖಾ ನಾಯರ್ ಇತರರು ಹಾಜರಿದ್ದರು.

ತುಳುಕುವಷ್ಟು ನೆರೆದಿರುವುದೇ ಇದಕ್ಕೆ ಸಾಕ್ಷಿ ಎಂದರು.

ಈ ವೇದಿಕೆಯಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿ, ರಾಜ್ಯಮಟ್ಟದಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಹಲವು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗಿದೆ.

ಭಾರತೀಯ ವಿದ್ಯಾಭವನ ಮೈಸೂರು ಕೇಂದ್ರದ ಛೇರ್ಮನ್ ಡಾ.ಸಿ.ನಾಗಣ್ಣ ಮಾತನಾಡಿ, ಭಾರತೀಯ ಪರಂಪರೆ, ಸಂಸ್ಕೃತಿ ಮೂಲಕ ಶಿಕ್ಷಣ ನೀಡುವ ಉದ್ದೇಶದಿಂದ 1938ರಲ್ಲಿ ಶಿಕ್ಷಣ ತಜ್ಞ ಕೆ.ಎಂ.ಮುನ್ಷಿ ನೇತೃತ್ವದಲ್ಲಿ ಭಾರತೀಯ ವಿದ್ಯಾಭವನ ಸ್ಥಾಪಿಸಲಾಯಿತು. ಅಂದಿನಿಂದ ದೇಶದ ನಾನಾ ಭಾಗದಲ್ಲಿ ಹಲವು ಕೇಂದ್ರಗಳನ್ನು ಆರಂಭಿಸಲಾಗಿದೆ. ಈ ಕೇಂದ್ರದ ಮೂಲಕ ಶಾಲೆಗಳ ತೆರೆದು ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವುದು ಸಂತೋಷದ ಸಂಗತಿ ಎಂದು ಅಭಿಪ್ರಾಯಪಟ್ಟರು.

ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರು, ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಂತೆ ಮೌಲ್ಯಾಧಾರಿತ, ಜ್ಞಾನಾಧಾರಿತ, ಸಂಸ್ಕೃತಿ ಆಧಾರಿತ ಶಿಕ್ಷಣವನ್ನು ನೀಡಲು ನಮ್ಮ ಹಿರಿಯರು ಸಾಕಷ್ಟು ಶ್ರಮಿಸಿದ್ದಾರೆ. ಅವರ ಶ್ರಮದಿಂದ ಇಂದು ಬೃಹತ್ ಸಂಸ್ಥೆಯೊಂದು ನಮ್ಮ ಕಣ್ಣೆದುರಿಗಿದೆ. ಈ ಸಂಸ್ಥೆ ಮೂಲಕ ನೂರಾರು ವಿದ್ಯಾರ್ಥಿಗಳನ್ನು ದೇಶಕ್ಕೆ ಕೊಡುಗೆಯಾಗಿ ನೀಡಲಾಗುತ್ತಿದೆ. ಇದಕ್ಕೆ ಪೋಷಕರು, ಶಿಕ್ಷಕರು ಕೂಡ ಕೈ ಜೋಡಿಸಿದ್ದಾರೆ ಎಂದು ಹೇಳಿದರು.

ಈ ವೇಳೆ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳಿಸಿದ ಆರ್.ಎನ್.ತಾನ್ಯ ಅವರಿಗೆ 25 ಸಾವಿರ ನಗದು ಬಹುಮಾನ ವಿತರಿಸಲಾಯಿತು. ಭವನ್ ರಮೇಶ್(624), ಜಿ.ಎನ್.ಚಿನ್ಮಯಿ (622), ನಿಶಾಲ್ ನಾಗರಾಜ್ (621), ಮೇಘನ ಆರ್.ಪ್ರಕಾಶ್(621), ಸಿ.ಕೆ.ಸಂಗೀತ(616), ಭುವನ್ ಅರಸ್(615), ಸಿ.ಸಚಿನ್(616), ವೈ.ಆರ್. ಕುಶಾಲ್ ಗೌಡ (615) ಸೇರಿದಂತೆ ಇತರೆ ಪ್ರತಿಭಾನ್ವಿತ ವಿದ್ಯಾರ್ಥಿಗಳು, ಜೊತೆಗೆ ಶಿಕ್ಷಕರನ್ನು ಗೌರವಿಸಲಾಯಿತು. ವೇದಿಕೆ ಕಾರ್ಯಕ್ರಮದ ಬಳಿಕ ಭಾರತೀಯ ವಿದ್ಯಾಭವನ ಶಾಲೆಯ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸೊಗಸಾಗಿ ನೀಡಿ, ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು.

ವೇದಿಕೆಯಲ್ಲಿ ಭಾರತೀಯ ವಿದ್ಯಾಭವನದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಡಾ.ಎ.ಟಿ. ಭಾಷ್ಯಂ, ಪ್ರಾಂಶುಪಾಲರಾದ ಎಸ್.ಲೇಖಾ ನಾಯರ್ ಸೇರಿದಂತೆ ಇತರರು ಪೋಷಕರು ಹಾಜರಿದ್ದರು.



ಭಾರತೀಯ ವಿದ್ಯಾಭವನದ ಶಾಲೆಯ ವಿದ್ಯಾರ್ಥಿಗಳ ಆಕರ್ಷಕ ನೃತ್ಯ ಪ್ರದರ್ಶನ

ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆ ಮಾಡುವ ಸರ್ಕಾರಿ ಶಾಲೆ ಶಿಕ್ಷಕರಿಗೆ ಸಾವಿರ ರೂ. ಪ್ರೋತ್ಸಾಹಧನ

ಬೆಂಗಳೂರು, ಡಿ. 27– ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ಶಿಕ್ಷಣ ಇಲಾಖೆ ಹೊಸ ಪ್ಲಾನ್ ಮಾಡಿದ್ದು, ಪ್ರೌಢಶಾಲಾ ಶಿಕ್ಷಕರಿಗೆ ಬಂಪರ್ ಆಫರ್ ನೀಡಿದೆ. 10ನೇ ತರಗತಿ ವಾರ್ಷಿಕ ಪರೀಕ್ಷೆ ಫಲಿತಾಂಶ ಸುಧಾರಿಸುವ ಶಿಕ್ಷಕರಿಗೆ ಹೆಚ್ಚುವರಿ ಒಂದು ಸಾವಿರ ಪ್ರೋತ್ಸಾಹಧನ ನೀಡಲು ಮುಂದಾಗಿದೆ. ಈ ಮೂಲಕ ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡಲು ಸರ್ಕಾರಿ ಶಾಲೆಗಳು ಮುಂದಾಗಿದೆ.

ಪ್ರತಿವರ್ಷ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಖಾಸಗಿ ವಲಯದ ಶಾಲೆಗಳಿಂದ ಉತ್ತಮ ಫಲಿತಾಂಶ ಹಿನ್ನಲೆ ಹಾಗೂ ಕಳೆದ ವರ್ಷ ಎಸ್‌ಎಸ್‌ಎಲ್‌ಸಿ ಫಲಿತಾಂಶ ಕುಸಿತದಿಂದ ಸಿಎಂ ಗರಂ ಆಗಿದ್ದರು. ಹೀಗಾಗಿ ಈ ಬಾರಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸೇರಿದಂತೆ ಶಿಕ್ಷಣ ಇಲಾಖೆಗೆ ಟಾರ್ಗೆಟ್ ನೀಡಿದ್ದು, ಪ್ರಸಕ್ತ ವರ್ಷ ಶೇ.75ರಷ್ಟು ಫಲಿತಾಂಶ ಸಾಧಿಸುವ ಗುರಿ ನೀಡಿರುವ ಹಿನ್ನಲೆ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಸ್ಪೆಷಲ್ ಕ್ಲಾಸ್ ಮಾಡಲು ಶಿಕ್ಷಕರು ಮುಂದಾಗಿದ್ದಾರೆ. ಹೀಗಾಗಿ ಸರ್ಕಾರಿ ಪ್ರೌಢಶಾಲಾ ಶಿಕ್ಷಕರಿಗೆ ಹೆಚ್ಚುವರಿಯಾಗಿ ಒಂದು ಸಾವಿರ ರೂಪಾಯಿಯನ್ನು ನೀಡಲು ಸರ್ಕಾರ ಪ್ಲ್ಯಾನ್ ಮಾಡಿದೆ.

ಕಳೆದೊಂದು ತಿಂಗಳಲ್ಲಿ ಕಂಪ್ಲೀಟ್ ಪಠ್ಯ ಕವರ್ ಮಾಡಿ ಜನವರಿ–ಫೆಬ್ರವರಿಯಲ್ಲಿ ಪರೀಕ್ಷೆಗಳು ಹಾಗೂ ಮಾರ್ಚ್ ತಿಂಗಳಲ್ಲಿ ಅಂತಿಮ ಪರೀಕ್ಷೆಗೆ ತಯಾರಿ ಶುರು ಮಾಡಿದ್ದಾರೆ ಆದರೆ ಈ ಬಾರಿ ಹಲವು ರಜೆಗಳ ಕಾರಣ ಇನ್ನೆರಡು ತಿಂಗಳಲ್ಲಿ ಪಠ್ಯಕ್ರಮ ಮುಗಿಸುವುದು ಸವಾಲಾಗಿದೆ. ಇದರಿಂದ ಹೆಚ್ಚುವರಿ ಕ್ಲಾಸ್ ಶುರು ಮಾಡಿದ್ದು ಮಕ್ಕಳನ್ನು ತಯಾರು ಮಾಡುವ ಹೊಣೆ ಶಿಕ್ಷಕರಿಗೆ ನೀಡಿದ್ದಾರೆ. ರಜಾ ದಿನಗಳಲ್ಲಿ ತರಗತಿಗಳನ್ನು ನಡೆಸಿ ಪಠ್ಯ ಕಂಪ್ಲೀಟ್ ಮಾಡಿ ಫಲಿತಾಂಶ ಸುಧಾರಿಸಲು ಶಿಕ್ಷಕರಿಗೆ ಹೆಚ್ಚುವರಿ ಪ್ರೋತ್ಸಾಹಧನ ನೀಡಲು ಇಲಾಖೆ ಮುಂದಾಗಿದೆ

ಒಟ್ಟಿನಲ್ಲಿ ಮಕ್ಕಳು ಮತ್ತು ಶಿಕ್ಷಕರನ್ನು ಪ್ರೋತ್ಸಾಹಿಸಲು ಸರ್ಕಾರ ಮುಂದಾಗಿದ್ದು, ನಿಗದಿತ ಶಾಲಾ ಅವಧಿ ಮುಗಿದ ಬಳಿಕ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಆಯಾ ಶಾಲೆಗಳ ಶಿಕ್ಷಕರು ವಿಶೇಷ ತರಗತಿಗಳನ್ನು ಕೈಗೊಳ್ಳಬೇಕಿದೆ. ಈ ವೇಳೆ ವಿದ್ಯಾರ್ಥಿಗಳ ಬರವಣಿಗೆ ಕೌಶಲ್ಯ, ಪಾಠಗಳ ಪುನರಾವರ್ತನೆ ಮೂಲಕ ಅವರನ್ನು ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುವಂತೆ ಮಾಡಬೇಕಿದೆ.

ಹುಟ್ಟುಹಬ್ಬದ ಶುಭಾಶಯ



ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಅವರಿಗೆ ನಗರ ಕಾಂಗ್ರೆಸ್ ಉಪಾಧ್ಯಕ್ಷ ವಿಕ್ರಾಂತ್ ಪಿ ದೇವೇಗೌಡ, ಹಿರಿಯ ಮುಖಂಡರಾದ ಎಚ್.ವಾಸು, ಎಚ್.ಎಸ್.ವೆಂಕಟಸುಬ್ಬಯ್ಯ, ನಾಗೇಶ್. ಶ್ರೀಮತಿ ಲತಾ ರಂಗನಾಥ್, ರಫೀಕ್, ಮೈಸೂರು ಬಸವಣ್ಣ ಮುಂತಾದವರು ಹುಟ್ಟುಹಬ್ಬದ ಶುಭಾಶಯ ಕೋರಿದರು.

ಗ್ರೇಟರ್ ಮೈಸೂರು ವ್ಯಾಪ್ತಿಗೆ ಚಾಮುಂಡಿಬೆಟ್ಟ ಗ್ರಾಮ ಸೇರಿಸಬೇಡಿ

ಮೈಸೂರು, ಡಿ.27– ಗ್ರೇಟರ್ ಮೈಸೂರು ವ್ಯಾಪ್ತಿಗೆ ಚಾಮುಂಡಿಬೆಟ್ಟ ಗ್ರಾಮವನ್ನು ಸೇರ್ಪಡೆಗೊಳಿಸುವ ಅವೈಜ್ಞಾನಿಕ ಚಿಂತನೆಯನ್ನು ಕೈಬಿಡಬೇಕು ಎಂದು ಚಾಮುಂಡಿಬೆಟ್ಟ ನಾಯಕರ ಬೀದಿಯ ಶ್ರೀ ಶರಣಂ ಅಯ್ಯಪ್ಪಸ್ವಾಮಿ ಸೇವಾ ಸಮಿತಿ ಆಗ್ರಹಿಸಿದೆ.

ಮೈಸೂರು ನಗರ ಹಾಗೂ ಚಾಮುಂಡಿಬೆಟ್ಟ ಗ್ರಾಮದ ನಡುವೆ ಸಂರಕ್ಷಿತ ಮೀಸಲು ಅರಣ್ಯವಿದೆ. ಗ್ರೇಟರ್ ಮೈಸೂರು ನೆಪದಲ್ಲಿ ಚಾಮುಂಡಿಬೆಟ್ಟ ಗ್ರಾಮವನ್ನು ನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಿದರೆ ನಗರೀಕರಣದ ಮುಖೇನ ಬೆಟ್ಟದ ಪರಿಸರ ಹಾಳಾಗುತ್ತದೆ. ರಾಜಕೀಯ ಪ್ರಭಾವ ಹೆಚ್ಚಾಗಿ ಧಾರ್ಮಿಕ ಕ್ಷೇತ್ರದ ಮೂಲಸ್ವರೂಪವೇ ಹಾಳಾಗುತ್ತದೆ.

ಪುಟ್ಟ ಗ್ರಾಮ ಚಾಮುಂಡಿಬೆಟ್ಟದಲ್ಲಿ ಮೂಲಸೌಕರ್ಯಗಳ ಹೊರತು ಅತಿಯಾದ ಅಭಿವೃದ್ಧಿ ಕಾಮಗಾರಿಗಳ ಅಗತ್ಯವಿಲ್ಲ. ಇದರಿಂದ ಬೆಟ್ಟ ಹಾಗೂ ಪರಿಸರಕ್ಕೆ ಆಪತ್ತು ಹೆಚ್ಚುತ್ತದೆ. ಆದ್ದರಿಂದ ಚಾಮುಂಡಿಬೆಟ್ಟ ಗ್ರಾಮವನ್ನು ಗ್ರೇಟರ್ ಮೈಸೂರು ವ್ಯಾಪ್ತಿಗೆ ಸೇರಿಸುವ ಅವೈಜ್ಞಾನಿಕ ಚಿಂತನೆಯನ್ನು ಕೈಬಿಡಬೇಕು ಎಂದು ಸಮಿತಿಯ ಅಧ್ಯಕ್ಷ ಸುಬ್ರಮಣ್ಯ ಹಾಗೂ ಗೌರವ ಕಾರ್ಯದರ್ಶಿ ಮಂಜುನಾಯಕ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ಗಾಯತ್ರಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತದ 2026ನೇ ವರ್ಷದ ಕ್ಯಾಲೆಂಡರ್ ಅನ್ನು ಹಿರಿಯ ಸಹಕಾರಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಬಿಡುಗಡೆ ಮಾಡಿದರು. ಈ ವೇಳೆ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್, ಕೋಶಾಧ್ಯಕ್ಷ ಕೆ.ಆರ್.ಮಂಜುನಾಥ್, ನಿರ್ದೇಶಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಭಾರತ ಸರ್ಕಾರ ಅವಕಾಶ ಕಲ್ಪಿಸಿದಂತೆ ಆಯುರ್ವೇದದ ಶಲ್ಯ, ಶಾಲಕ್ಯ, ಪ್ರಸೂತಿ ತಂತ್ರದಲ್ಲಿ

ಸರ್ಜರಿ ಪ್ರಾಕ್ಟೀಸ್‌ಗೆ ರಾಜ್ಯ ಸರ್ಕಾರ ಅನುಮೋದನೆ ನೀಡಲಿ

● ಎಸ್‌ಡಿಎಂ ಆಯುರ್ವೇದ ಸಂಸ್ಥೆಗಳ ನಿರ್ದೇಶಕ ಡಾ.ಪ್ರಸನ್ನ ಎನ್.ರಾವ್ ಮನವಿ ● 'ಆಹಾರ-ವಿಹಾರ-ಆರೋಗ್ಯ ವಿಚಾರ' ಕುರಿತ ಸಮ್ಮೇಳನ ಸಮಾರೋಪ

ಮೈಸೂರು,ಡಿ.27(ಪಿಎಂ)– ಭಾರತ ಸರ್ಕಾರ 1970ರಲ್ಲಿ ಆಯುರ್ವೇದ ಸಂಬಂಧ ಶಲ್ಯ, ಶಾಲಕ್ಯ ಮತ್ತು ಪ್ರಸೂತಿ ತಂತ್ರದಲ್ಲಿ ಸರ್ಜರಿ ಪ್ರಾಕ್ಟೀಸ್‌ಗೆ ಅವಕಾಶ ಕಲ್ಪಿಸಿ ಆದೇಶ ಹೊರಡಿಸಿದ್ದು, ಅದೇ ರೀತಿ ರಾಜ್ಯದಲ್ಲಿ ಸರ್ಜರಿಗೆ ಅವಕಾಶ ಕಲ್ಪಿಸಿ ಆದೇಶ ಹೊರಡಿಸಲು ರಾಜ್ಯ ಸರ್ಕಾರಕ್ಕೆ ಮನವಿ ಮಾಡಬೇಕಿದೆ ಎಂದು ಎಸ್‌ಡಿಎಂ ಆಯುರ್ವೇದ ಸಂಸ್ಥೆಗಳ ನಿರ್ದೇಶಕ ಡಾ.ಪ್ರಸನ್ನ ಎನ್.ರಾವ್ ಹೇಳಿದರು.

ಮೈಸೂರಿನ ಚಾಮುಂಡಿಬೆಟ್ಟದ ರಸ್ತೆಯಲ್ಲಿರುವ ಎಸ್‌ಡಿಎಂ–ಐಎಂಡಿ ಸಂಸ್ಥೆಯ ಸಭಾಂಗಣದಲ್ಲಿ ಕಾವೇರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಹಾಗೂ ಮಂಡ್ಯದ ಮಹಾರಾಜ ಇನ್ಸಿಟಿಟ್ಯೂಟ್ ಮೆಡಿಕಲ್ ಸೈನ್ಸಸ್ ಮತ್ತು ಆಸ್ಪತ್ರೆ ಜಂಟಿ ಆಶ್ರಯದಲ್ಲಿ 'ಆಹಾರ–ವಿಹಾರ–ಆರೋಗ್ಯ ವಿಚಾರ' ಶೀರ್ಷಿಕೆಯಡಿ 'ಇಂಟರ್‌ಸೆಕ್ಟಿಂಗ್ ನ್ಯೂಟ್ರಿಷನ್ ಲೈಫ್ ಸ್ಟೈಲ್ ಮೆಡಿಸಿನ್ ಅಂಡ್ ಸಸ್ಟೇನ್‌ಬಲ್ ಹೆಲ್ತ್‌ಕೇರ್' ಕುರಿತು ಹಮ್ಮಿಕೊಂಡಿದ್ದ ಎರಡು ದಿನಗಳ ಸಿಸಿಎಆರ್‌ಡಿ ಅಂತಾರಾಷ್ಟ್ರೀಯ ಸಮ್ಮೇಳನ 2025ರ ಸಮಾರೋಪ ಸಮಾರಂಭದಲ್ಲಿ ಶನಿವಾರ ಅವರು ಮಾತನಾಡಿದರು.

ಶಾಸಕ ಟಿ.ಎಸ್.ಶ್ರೀವತ್ಸ ಅವರು ಆಂಧ್ರ ಪ್ರದೇಶದಲ್ಲಿ ಆಯುರ್ವೇದ ವೈದ್ಯರಿಗೆ ಸರ್ಜರಿ ಮಾಡಲು ಅವಕಾಶ ಕಲ್ಪಿಸಿರುವ ಬಗ್ಗೆ ಪ್ರಸ್ತಾಪಿಸಿದರು. ಭಾರತ ಸರ್ಕಾರ 1970ರಲ್ಲಿ ಶಲ್ಯ, ಶಾಲಕ್ಯ ಹಾಗೂ ಪ್ರಸೂತಿ ತಂತ್ರದಲ್ಲಿ ಸರ್ಜರಿ ಪ್ರಾಕ್ಟೀಸ್‌ಗೆ ಅವಕಾಶ ಕಲ್ಪಿಸಿದೆ. ಬಹುತೇಕ ರಾಜ್ಯ ಸರ್ಕಾರಗಳೂ ಅವಕಾಶ ಕಲ್ಪಿಸಿವೆ. ಆದರೆ ನಮ್ಮಲ್ಲಿ ರಾಜ್ಯ ಸರ್ಕಾರ ಮನಸ್ಸು ಮಾಡಬೇಕಿದೆ. ಅದಕ್ಕಿಂತಲೂ ಮೊದಲು ನಾವು ಆಯುರ್ವೇದ ವೈದ್ಯರು ಇದಕ್ಕೆ ದೊಡ್ಡ ಮನಸ್ಸು ಮಾಡಿ ಸರ್ಕಾರದ ಗಮನ ಸೆಳೆಯಬೇಕು ಎಂದರು.



ಮೈಸೂರಿನ ಎಸ್‌ಡಿಎಂ–ಐಎಂಡಿ ಸಂಸ್ಥೆಯ ಸಭಾಂಗಣದಲ್ಲಿ 'ಆಹಾರ–ವಿಹಾರ–ಆರೋಗ್ಯ ವಿಚಾರ' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಶನಿವಾರ 'ರಸಶಾಸ್ತ್ರ ಏವಂ ಭೈಷಜ್ಯಕಲ್ಪನಾ' ಪುಸ್ತಕ ಬಿಡುಗಡೆ ಮಾಡಲಾಯಿತು.

ಈ ಸಂಬಂಧ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಲು ಆಯುರ್ವೇದ ವೈದ್ಯರು ಗಮನ ಸೆಳೆಯಬೇಕಿದೆ. ಈ ಕುರಿತು ಶಾಸಕ ಟಿ.ಎಸ್. ಶ್ರೀವತ್ಸರಲ್ಲೂ ಮನವಿ ಮಾಡುತ್ತೇನೆ. ಮುಖ್ಯಮಂತ್ರಿಗಳು ಮೈಸೂರಿನವರೇ ಆಗಿದ್ದು, ಈ ಅವಕಾಶವನ್ನು ಮೈಸೂರಿನವರು ಬಳಸಿಕೊಳ್ಳುವ ಮೂಲಕ ಅಧಿಸೂಚನೆ ಹೊರಡಿಸಲು ಅವರ ಗಮನ ಸೆಳೆಯಬೇಕು ಎಂದು ಸಲಹೆ ನೀಡಿದರು.

ವೈದ್ಯರ ರಕ್ಷಣೆ ಸಂಬಂಧ ಇತ್ತೀಚೆಗೆ ಸಂಸತ್ ಕೂಡ ಶಾಸನ ತಂದಿದೆ. ಅಲೋಪತಿ ಹಾಗೂ ಆಯುರ್ವೇದ ಎಲ್ಲರಿಗೂ ಒಂದೇ ರೀತಿಯ ಭದ್ರತೆ ಇದೆ. ಆದರೆ ಪ್ರಾಕ್ಟೀಸ್ ಮಟ್ಟದಲ್ಲಿ ಸ್ವಲ್ಪ ಅಂತರ ಇದೆ. ಅದನ್ನು ನಿವಾರಿಸುವ ಅಗತ್ಯವಿದೆ. ಭಾರತ ಸರ್ಕಾರ 'ಹೀಲ್ ಇನ್ ಇಂಡಿಯಾ ಅಂಡ್ ಹೀಲ್ ಬೈ ಇಂಡಿಯಾ' ಕಾರ್ಯಕ್ರಮ ತಂದಿದ್ದು, ಅದರಡಿ ಆಯುರ್ವೇದ ವೈದ್ಯರು ಯಾವ್ಯಾವ ದೇಶದಲ್ಲಿ ಪ್ರಾಕ್ಟೀಸ್ ಮಾಡಬಹುದು ಎಂಬುದನ್ನು ಕೂಡ ಪಟ್ಟಿ ಮಾಡಲಾಗಿದೆ. ಎಲ್ಲಾ ದೇಶದಿಂದ ಭಾರತಕ್ಕೆ ಬಂದು ಆಯುರ್ವೇದದ ಚಿಕಿತ್ಸೆ ಕೂಡ ಪಡೆದುಕೊಳ್ಳಬಹುದು. ಅದಕ್ಕಾಗಿ ಕೇಂದ್ರ ಗೃಹ ಸಚಿವಾಲಯ ಹೊಸದಾಗಿ 'ಆಯುಷ್ ವಿಸಾ' ತಂದಿದೆ. ಅದೇ ರೀತಿ ಭಾರತ ಸರ್ಕಾರದಲ್ಲಿ ಅನೇಕ ಯೋಜನೆಗಳು ಇದ್ದು, ಇಂದು ಆಯುರ್ವೇದ ವೈದ್ಯರು ಆಸ್ಪತ್ರೆ ಪ್ರಾರಂಭಿಸಲು ಸಾಲಸೌಲಭ್ಯ ಸಹ ಲಭ್ಯವಿದೆ. ಆಯುರ್ವೇದ ವೈದ್ಯರಿಗೆ ಇಡೀ ವಿಶ್ವದಲ್ಲಿ ಉತ್ತಮ ಅವಕಾಶಗಳಿವೆ ಎಂದು ಹೇಳಿದರು.

ಹಿಂದೆಂದೂ ಇಲ್ಲದಂತಹ ರಾಜಾಶ್ರಯ ಇಂದು ಆಯುರ್ವೇದ ಹಾಗೂ ಭಾರತೀಯ ವೈದ್ಯ ಪದ್ಧತಿಗೆ ದೊರೆಯುತ್ತಿದ್ದು, ವಿಶೇಷವಾಗಿ ಕೇಂದ್ರ ಸರ್ಕಾರ ಈ ಸಂಬಂಧ ಹೆಚ್ಚು ಉತ್ತೇಜನ ನೀಡುತ್ತಿದೆ. ಇಡೀ ಪ್ರಪಂಚದಲ್ಲಿ ಎಲ್ಲೂ ಇಲ್ಲದ 'ಗ್ಲೋಬಲ್ ಸೆಂಟರ್ ಆಫ್ ಟ್ರೆಡಿಷನಲ್ ಮೆಡಿಸಿನ್' ಭಾರತದಲ್ಲೇ ಇರುವುದು ಎಂಬುದು ನಮ್ಮ ಹೆಮ್ಮೆ. ಅದಕ್ಕೆ ಕಾರಣ ನಮ್ಮ ಪ್ರಧಾನಿಗಳಾದ ನರೇಂದ್ರ ಮೋದಿಯವರು. ಆಯುರ್ವೇದಕ್ಕೆ ಇನ್‌ಸ್ಟಿಟ್ಯೂಟ್ ಆಫ್ ನ್ಯಾಷನಲ್ ಇಂಪಾರ್ಟೆನ್ಸ್ ಎಂದು ಜಾಮ್ ನಗರದಲ್ಲಿ ಭಾರತ ಸರ್ಕಾರವು ಇಟ್ರಾ ಹೆಸರಿನಲ್ಲಿ ಸಂಸ್ಥೆ ಮಾಡಿದೆ. ಇದೇ ತಿಂಗಳ 17, 18, 19ರಂದು ಪ್ರಧಾನಿಗಳು ದೆಹಲಿಯಲ್ಲಿ ಎರಡನೇ ಗ್ಲೋಬಲ್ ಸಮ್ಮಿಟ್ ಉದ್ದೇಶಿಸಿ ಮಾತನಾಡಿದಾಗ, 'ಸೆಂಟ್ರಲ್ ಲೈಬ್ರರಿ ಫಾರ್ ಟ್ರೆಡಿಷನಲ್ ಮೆಡಿಸಿನ್' ಮಾಡುವ ಘೋಷಣೆ ಮಾಡಿದರು ಎಂದು ತಿಳಿಸಿದರು.

ಇದೇ ವೇಳೆ ಕರ್ನಾಟಕ ಸರ್ಕಾರದ ಆಯುಷ್ ಇಲಾಖೆಯ ಮಾಜಿ ವಿಶೇಷ ಅಧಿಕಾರಿ ಡಾ.ಎನ್. ಆಂಜನೇಯ ಮೂರ್ತಿ ಅವರಿಗೆ 'ಕಾವೇರಿ ಆಯುರ್ವೇದ ಗುರು ತಿಲಕ' ಹಾಗೂ ಶಿರಸಿಯ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ವೈದ್ಯಕೀಯ ಅಧಿಕಾರಿ ಡಾ.ಜಗದೀಶ್ ವಿಷ್ಣು ಯಾಜಿ ಅವರಿಗೆ 'ಕಾವೇರಿ ಆಯುರ್ವೇದ ವೈದ್ಯ ಶ್ರೇಷ್ಠ' ಜೀವಮಾನ ಸಾಧನೆ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಅಲ್ಲದೆ, ಡಾ.ಹೆಚ್.ಕೆ.ಅನುರೂಪ ಹಾಗೂ ಡಾ.ವಿ.ಎಸ್.ಶರ್ಮಾ ಅವರ ಬರೆದಿರುವ 'ರಸಶಾಸ್ತ್ರ ಏವಂ ಭೈಷಜ್ಯ ಕಲ್ಪನಾ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಶಾಸಕ ಟಿ.ಎಸ್.ಶ್ರೀವತ್ಸ, ಯುನೈಟೆಡ್ ಕಿಂಗ್‌ಡಂನ್ ಖ್ಯಾತ ಆಯುರ್ವೇದ ಶಿಕ್ಷಣ ತಜ್ಞ ಡಾ.ವಿಜಯೇಂದ್ರ ಎಸ್.ಮೂರ್ತಿ, ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್, ವ್ಯವಸ್ಥಾಪಕ ನಿರ್ದೇಶಕಿ ಡಾ.ಸರಳಾ ಚಂದ್ರಶೇಖರ್, ಮಹಾರಾಜ ಎಜುಕೇಷನಲ್ ಟ್ರಸ್ಟ್ ಮಂಡ್ಯದ ಅಧ್ಯಕ್ಷ ಡಾ.ಬಿ.ಜಿ.ನರೇಶ್ ಕುಮಾರ್, ಎಸ್‌ಡಿಎಂ ಐಎಂಡಿ ನಿರ್ದೇಶಕ ಡಾ.(ಲೆ.ಕ.) ಎಸ್.ಎನ್. ಪ್ರಸಾದ್, ಕಾವೇರಿ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ನಿರ್ದೇಶಕ ಡಾ.ಎನ್.ಕೃಷ್ಣ ಪ್ರಸಾದ್, ಮಹಾರಾಜ ಇನ್ಸಿಟ್ಯೂಟ್ ಆಫ್ ಆಯುರ್ವೇದ ಮೆಡಿಕಲ್ ಸೈನ್ಸಸ್ ಮತ್ತು ಆಸ್ಪತ್ರೆ ಮಂಡ್ಯದ ಪ್ರಾಂಶುಪಾಲ ಡಾ.ಎನ್.ವಿ.ಕೃಷ್ಣಮೂರ್ತಿ, ಕಾವೇರಿ ಆಯುರ್ವೇದ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ವಿ.ಪೂರ್ಣಿಮಾ ಮತ್ತಿತರರು ಹಾಜರಿದ್ದರು.

ಆನ್‌ಲೈನ್‌ನಲ್ಲಿ ಕಮಿಷನ್ ಆಸೆಗೆ ಬಿದ್ದು 2.74 ಲಕ್ಷ ಕಳೆದುಕೊಂಡ ಮಹಿಳೆ!

ಮೈಸೂರು, ಡಿ.27– ಆನ್‌ಲೈನ್ ಮೂಲಕ ಮಾರಾಟವಾಗುವ ಉತ್ಪನ್ನಗಳಿಗೆ ರೇಟಿಂಗ್ಸ್ ನೀಡಿ, ಅಧಿಕ ಹಣ ಸಂಪಾದಿಸಬಹುದು ಎಂದು ನಂಬಿಸಿ, ಮಹಿಳೆಯೊಬ್ಬರಿಂದ 2.74 ಲಕ್ಷ ರೂ. ವಂಚಿಸಿರುವ ಬಗ್ಗೆ ಮೈಸೂರಿನ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾರದಾದೇವಿನಗರದ ಮಹಿಳೆ, ಮನೆಯಿಂದಲೇ ಕೆಲಸ ಮಾಡಿ ಹಣ ಗಳಿಸುವ ಆನ್‌ಲೈನ್ ಅಸಿಸ್ಟೆಂಟ್ ಕೆಲಸದ ಬಗ್ಗೆ ಇನ್ಸಾಟ್ರಾಮ್‌ನಲ್ಲಿ ಜಾಹಿರಾತು ನೋಡಿದ್ದಾರೆ. ಕುತೂಹಲದಿಂದ ಅದರ ಮೇಲಿದ್ದ ಲಿಂಕ್ ಕ್ಲಿಕ್ ಮಾಡಿದ ಕೂಡಲೇ ಅವರ ವಾಟ್ಸಾಪ್ ನಂಬರ್‌ಗೆ ಅಂಜಲಿ ಪೂಜಾ ಹೆಸರಿನಲ್ಲಿ ಸಂದೇಶ ಬಂದಿದೆ. ತಾನು ಫ್ಲಿಪ್‌ಕಾರ್ಟ್‌ನಲ್ಲಿ ಹೆಚ್‌ಆರ್ ಆಗಿದ್ದು, ನೀವು ದಿನಕ್ಕೆ 1ರಿಂದ 3 ಗಂಟೆ ಕೆಲಸ ಮಾಡಿದರೆ 10ರಿಂದ 20 ಸಾವಿರ ಸಂಪಾದಿಸಬಹುದು ಎಂದು ಆಸೆ ಹುಟ್ಟಿಸಿದ್ದಾರೆ.

ಆನ್‌ಲೈನ್ ಮರ್ಚೆಂಟ್ಸ್‌ಗೆ ಅವರ ಉತ್ಪನ್ನಗಳ ರೇಟಿಂಗ್ಸ್ ಹೆಚ್ಚಿಸಿಕೊಳ್ಳಲು ಸಹಾಯ ಮಾಡಿದರೆ ಒಳ್ಳೆಯ ಕಮಿಷನ್ ನೀಡುತ್ತೇವೆ ಎಂದು ಆನ್‌ಲೈನ್ ಅಸಿಸ್ಟೆಂಟ್ ಕೆಲಸಕ್ಕೆ ನೋಂದಾಯಿಸಿಕೊಂಡಿದ್ದಾರೆ. ಕ್ಯೂಆರ್ ಕೋಡ್ ಮೂಲಕ ಆರಂಭದಲ್ಲಿ ಸಾವಿರ ರೂ. ಸಂದಾಯ ಮಾಡಿಸಿಕೊಂಡು, ರೇಟಿಂಗ್ಸ್ ನೀಡುವ ಕೆಲಸ ನೀಡಿದ್ದಾರೆ. ಹೀಗೆ ಹಂತ ಹಂತವಾಗಿ 1.74 ಲಕ್ಷ ಪಾವತಿಸಿದ ಮಹಿಳೆ, ರೇಟಿಂಗ್ಸ್ ಟಾಸ್ಕ್ ಪೂರೈಸಿದ ಬಳಿಕ ಕಮಿಷನ್ ಹಣ ಕೇಳಿದ್ದಾರೆ. ಆಗ ಹ್ಯಾಂಡ್ಲಿಂಗ್ ಫೀ, ಇನ್‌ಕಮ್ ಟ್ಯಾಕ್ಸ್, ಲಾಂಡರಿಂಗ್ ಫೀ ಪಾವತಿಸಬೇಕೆಂದು ತಿಳಿಸಿ, ಒಟ್ಟು 2.74 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗುಂಡ ಓಟು ಹಾಕಲೆಂದು ಇವಿಎಂ ಹತ್ತಿರ ಹೋದವನು ತಟ್ಟನೇ ಸುಮ್ಮನೇ ನಿಂತು ಬಿಟ್ಟ...
ಚುನಾವಣಾಧಿಕಾರಿ : ಯಾಕ್ ಸಾರ್ ಸುಮ್ನೆ ನಿಂತುಬಿಟ್ರಿ? ಏನಾಯಿತು?
ಗುಂಡ : ರಾತ್ರಿ ಎಣ್ಣೆ ಹಾಕಿಸಿದವರು ಯಾರು ಅಂತಾನೇ ನೆನಪಾಗ್ತಿಲ್ಲ ಸಾರ್!

ಮೈಸೂರು ಮಿತ್ರ

ಭಾನುವಾರ, 28 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಪೆಟ್ಟು ಕೊಟ್ಟವರಿಗೆ ಮರು ಪೆಟ್ಟು ಕೊಡಲು ನಾವು ನೀವ್ಯಾರು? ಪಟ್ಟು ಹಿಡಿಯದೇ ದುಪ್ಪಟ್ಟು ಪೆಟ್ಟು ಕೊಡಲು ಮೇಲೊಬ್ಬ ಇಲ್ಲವೆ?

ವೇದ ಸುಳ್ಳಾದರೂ { ಹಾಲು ಎಟುಕದಿರುವಾಗ
ಗಾದೆ ಸುಳ್ಳಾಗದು { ಬೆಕ್ಕೂ ಪ್ರಾಮಾಣಿಕ

ನಿಮ್ಮ ಪತ್ರಗಳು

ಸಾರ್ವಜನಿಕ ಸ್ಥಳಗಳಲ್ಲಿ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಬಳಕೆ ನಿಷೇಧಿಸಿ!

ಮಾನ್ಯರೆ,

ಸಾಂಸ್ಕೃತಿಕ ನಗರಿ, ಉದ್ಯಾನ ನಗರಿ, ಅರಮನೆಗಳ ನಗರಿ ನಂಬರ್ 1 ಸ್ವಚ್ಛ ನಗರಿ ಎಂಬ ಬಿರುದುಗಳನ್ನು ಹೊತ್ತಿದ್ದ ನಮ್ಮ ಮೈಸೂರು ಈಗ ನಂಬರ್ 1 ಅಪಾಯಕಾರಿ ನಗರವಾಗುತ್ತಿದೆ. ಮೈಸೂರಿನ ಯಾವುದೇ ರಸ್ತೆಯ ಬದಿಯ ಪಾದಚಾರಿ ಮಾರ್ಗವು ಪಾದಚಾರಿಗಳಿಗೆ ಸುರಕ್ಷಿತವಲ್ಲ.

ಮೈಸೂರು ಅರಮನೆಯ ಜಯಮಾರ್ತಾಂಡ ದ್ವಾರದ ಮುಂದೆ ಇರುವ ಪಾದಚಾರಿ ಮಾರ್ಗದಲ್ಲಿ ಬಲೂನಿಗೆ ತುಂಬುವ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ಸಾವು ನೋವು ಸಂಭವಿಸಿರುವುದೇ ಇದಕ್ಕೆ ಸಾಕ್ಷಿ!

ಈ ಸಾವು ನೋವು ಆಕಸ್ಮಿಕವೂ ಅಲ್ಲ. ಅಪಘಾತವೂ ಅಲ್ಲ. ಇದು ನಮ್ಮ ಪೊಲೀಸ್, ಪಾಲಿಕೆ, ಪ್ರಾಧಿಕಾರ, ಜಿಲ್ಲಾಡಳಿತ ಹಾಗೂ ಜನಪ್ರತಿನಿಧಿಗಳ ಬೇಜವಾಬ್ದಾರಿಯ ಪ್ರತಿಫಲ!

ಇದು ಕೇವಲ ಸಿಲಿಂಡರ್ ಸ್ಫೋಟವಲ್ಲ. ಕುಕ್ಕರ್ ಬಾಂಬ್ ಸ್ಫೋಟದಂತೆಯೇ ಇದು ಭಯೋತ್ಪಾದಕ ಕೃತ್ಯವೂ ಆಗಿರಬಹುದು. ಮೈಸೂರಿನ ಗಲ್ಲಿ ಗಲ್ಲಿಗಳಲ್ಲಿ, ಬೀದಿ ಬೀದಿಗಳಲ್ಲಿ, ಪಾದಚಾರಿ ಮಾರ್ಗಗಳಲ್ಲಿ, ರಸ್ತೆಯ ಬದಿಯ ಖಾಲಿ ಜಾಗಗಳಲ್ಲಿ, ಪಾರ್ಕ್ ಪಕ್ಕದಲ್ಲಿ, ಹೈಟೆನ್ಷನ್ ಲೈನ್ ಮಾರ್ಗಗಳಲ್ಲಿ ಹಾಗೂ ನಗರದ ಹೃದಯ ಭಾಗಗಳಲ್ಲಿ ರಾಜಾರೋಷವಾಗಿ ಅಕ್ರಮ ಗ್ಯಾಸ್ ಸಿಲಿಂಡರ್ ಬಳಸಿಕೊಂಡು ಫಾಸ್ಟ್ ಫುಡ್, ತಿಂಡಿ, ಊಟ ಇತ್ಯಾದಿ ತಿನಿಸುಗಳನ್ನು ತಯಾರಿಸಿ ಮಾರಾಟ ಮಾಡುವ ವಾಹನಗಳು,ಅಂಗಡಿ ಮುಂಗಟ್ಟುಗಳು ಮೆರೆಯುತ್ತಿವೆ.

ಈ ಅಪಾಯಕಾರಿ ಸ್ಥಳಗಳಲ್ಲಿ ಮುತ್ತಿಕೊಂಡಿರುವ ತಿಂಡಿಪೋತರ ಸಂಖ್ಯೆಗಳೂ ಕಡಿಮೆಯಿಲ್ಲ. ಈ ಬೆಂಕಿಯುಗುಳುವ ಸ್ಟೌವ್ ಪಕ್ಕದಲ್ಲಿಯೇ ಗ್ಯಾಸ್ ಸಿಲಿಂಡರುಗಳಿರುತ್ತವೆ. ಈ ಸಿಲಿಂಡರ್ ಪಕ್ಕದಲ್ಲಿಯೇ ಗುಂಪು ಗುಂಪಾಗಿ ತಿಂಡಿಪೋತರು ಕುಳಿತಿರುತ್ತಾರೆ. ನಿಂತಿರುತ್ತಾರೆ. ಇಂತಹ ಸಂದರ್ಭದಲ್ಲಿ ಸಿಲಿಂಡರ್ ಸ್ಫೋಟವಾಗಿ ಪ್ರಾಣಹಾನಿ ಸಂಭವಿಸಿದರೆ ಯಾರು ಹೊಣೆ?

ಸಾರ್ವಜನಿಕ ಸ್ಥಳಗಳಲ್ಲಿ ಸಾರ್ವಜನಿಕರ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಗ್ಯಾಸ್ ಸಿಲಿಂಡರ್ ಬಳಕೆ ಮಾಡಲು ಅನುಮತಿ ನೀಡಿದವರ್ಯಾರು? ಈ ಅನುಮತಿ ನೀಡಿದವರಿಗೆ ಕಾಮನ್ ಸೆನ್ಸ್ ಇಲ್ಲವೇ? ಈ ಕೂಡಲೇ ಪೊಲೀಸ್ ಇಲಾಖೆ ಹಾಗೂ ಪಾಲಿಕೆ ಎಚ್ಚೆತ್ತು ಸಾರ್ವಜನಿಕ ಸ್ಥಳಗಳಲ್ಲಿ ಗ್ಯಾಸ್ ಸಿಲಿಂಡರ್ ಬಳಸುವವರ ವಿರುದ್ಧ ಕ್ರಮ ಕೈಗೊಂಡು ಸ್ಫೋಟಕ್ಕೆ ಬ್ರೇಕ್ ಹಾಕಲಿ!

ಮೈಸೂರಿನ ಪೊಲೀಸ್ ಆಯುಕ್ತರು, ಪಾಲಿಕೆ ಆಯುಕ್ತರು, ಜಿಲ್ಲಾಧಿಕಾರಿಗಳು, ಮುಡಾ ಆಯುಕ್ತರು, ಸಂಸದರು ಹಾಗೂ ಶಾಸಕರು ಕನಿಷ್ಠ ತಿಂಗಳಿಗೊಮ್ಮೆಯಾದರೂ ನಗರದ ಪ್ರತಿಯೊಂದು ಪಾದಚಾರಿ ಮಾರ್ಗದಲ್ಲಿ ಪಾದಯಾತ್ರೆ ಕೈಗೊಂಡರೆ ಅಪಾಯದ ಅರಿವಾಗಬಹುದು. ಅವರಿಗೂ ಪಾದಚಾರಿ ಹಾಗೂ ನಾಗರಿಕರ ಸಂಕಷ್ಟದ ಅನುಭವವಾಗಬಹುದು. ಜ್ಞಾನೋದಯವಾಗಬಹುದು. ಎಚ್ಚರವಾಗಬಹುದು. ತಿಳುವಳಿಕೆ ಮೂಡಬಹುದು!!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ಮಹದೇಶ್ವರ ಬಡಾವಣೆಯಲ್ಲಿ ಒಳಚರಂಡಿ ವ್ಯವಸ್ಥೆ ಮಾಡಿ

ಮಾನ್ಯರೆ,

ಮೈಸೂರಿನ ವಿಜಯನಗರಕ್ಕೆ ಹೊಂದಿಕೊಂಡಂತಿರುವ ಮಹದೇಶ್ವರ ಬಡಾವಣೆಯ ಎರಡನೆಯ ಕ್ರಾಸ್ ನಿವಾಸಿಗಳ ಗೋಳು ಹೇಳತೀರದಾಗಿದೆ. ಈ ರಸ್ತೆಯಲ್ಲಿನ ಮ್ಯಾನ್‌ಹೋಲ್‌ಗಳು ಪದೇ ಪದೆ ಕಟ್ಟಿಕೊಂಡು ಮಲಿನ ನೀರು ಸಲೀಸಾಗಿ ಹೋಗದೆ ಹಲವಾರು ಬಾರಿ ಮನೆಯ ಒಳಗಡೆಗೆ ವಾಪಸ್ಸು ಬರುತ್ತಿದ್ದು, ಇದರಿಂದ ವಿಪರೀತ ದುರ್ನಾತದ ಜೊತೆಗೆ ಕ್ರಿಮಿಕೀಟಗಳು, ಮತ್ತು ಮಲಿನ ನೀರಿನಿಂದ ನಿವಾಸಿಗಳಿಗೆ ಅತೀವ ತೊಂದರೆಯಾಗುತ್ತಿದೆ. ನಿವಾಸಿಗಳು ಹಲವಾರು ಬಾರಿ ಅವರ ಖರ್ಚಿನಲ್ಲಿಯೇ ಇದನ್ನು ಆಗಿಂದಾಗ್ಗೆ ದುರಸ್ತಿಪಡಿಸಿಕೊಂಡಿದ್ದರೂ, ಮ್ಯಾನ್‌ಹೋಲ್ ಕಟ್ಟಿಕೊಳ್ಳುತ್ತಿದೆ.

ಮೈಸೂರು ನಗರಪಾಲಿಕೆಯವರು ಆಗಿಂದಾಗ್ಗೆ ನಮ್ಮ ಮನವಿಗೆ ಸ್ಪಂದಿಸಿ ಇದನ್ನು ತೆರವುಗೊಳಿಸಿದರೂ ಹತ್ತಿರದ ಹೋಟಲ್ ಬಳಿಯಿರುವ ಮ್ಯಾನ್‌ಹೋಲ್‌ನಲ್ಲಿ ಕೆಲವು ತ್ಯಾಜ್ಯ ಘನಪದಾರ್ಥಗಳಿಂದಾಗಿ ರಸ್ತೆಯ ಕೆಳಗಡೆಯ ಮ್ಯಾನ್‌ಹೋಲ್‌ಗಳು ಕಟ್ಟಿಕೊಳ್ಳುತ್ತಿದೆ. ಪಾಲಿಕೆಯವರು ಇದನ್ನು ಒಳಚರಂಡಿ ವಿಭಾಗದವರು ಸರಿಪಡಿಸಬೇಕಾಗಿರುವುದರಿಂದ ಮತ್ತು ಹೊಟೇಲ್ ಮ್ಯಾನ್‌ಹೋಲ್‌ಗೆ ಸೂಕ್ತ ತಂತಿ ಜಾಲರಿಯನ್ನು ಒಳಭಾಗದಲ್ಲಿ ಅಳವಡಿಸಿದಲ್ಲಿ, ಬಾಟಲು, ಮತ್ತಿತರ ಘನತ್ಯಾಜ್ಯಗಳು ಒಳಚರಂಡಿಯಲ್ಲಿ ಸಿಲುಕಿಕೊಳ್ಳದೆ ಮಲಿನ ನೀರು ಸಲೀಸಾಗಿ ಹೋಗುವಂತಾಗುತ್ತದೆ. ಈ ನಿಟ್ಟಿನಲ್ಲಿ ವಾಣಿವಿಲಾಸ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗದವರು ತಕ್ಷಣವೇ ಪರಿಶೀಲಿಸಿ ಒಳಚರಂಡಿ ನೀರು ಸಲೀಸಾಗಿ ಹರಿದು ಹೋಗುವಂತೆ ಶಾಶ್ವತ ಕ್ರಮ ಕೈಗೊಳ್ಳಬೇಕೆಂದು ಮನವಿ.

–ವಿಜಯ್ ಹೆಮ್ಮಿಗೆ, ಮೈಸೂರು

ಹೆಚ್ಚುವರಿ ಬಸ್ ವ್ಯವಸ್ಥೆ ಕಲ್ಪಿಸಿ



ಮಾನ್ಯರೆ,

ಮೈಸೂರು ನಗರದಿಂದ ಪಿರಿಯಾಪಟ್ಟಣ ಮಾರ್ಗವಾಗಿ ಕುಶಾಲನಗರಕ್ಕೆ ಸಂಚರಿಸುವ ಬಸ್ಸುಗಳ ಸಂಖ್ಯೆ ಕಡಿಮೆಯಿದ್ದು, ಇದರಿಂದ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ. ನೌಕರರು ಹಾಗೂ ಶಾಲಾ–ಕಾಲೇಜು ಮಕ್ಕಳು ಮನೆಗೆ ತೆರಳುವ ಸಮಯದಲ್ಲಿ ಜನದಟ್ಟಣೆ ಹೆಚ್ಚಿರುವುದರಿಂದ ಆ ವೇಳೆಯಲ್ಲಿ ಪ್ರಯಾಣಿಕರಿಗೆ ಬಸ್ಸು ಹತ್ತಲು ಸಾಧ್ಯವೇ ಆಗದ ಪರಿಸ್ಥಿತಿಗಳು ಎದುರಾಗುತ್ತಿವೆ. ಪ್ರಯಾಣಿಕರು ಬಸ್ಸುಗಳು ಸಿಗದೇ ಪರದಾಡುವ ಸ್ಥಿತಿ ನಿರ್ಮಾಣವಾಗುತ್ತಿವೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಇತ್ತ ಗಮನಹರಿಸಿ ಹೆಚ್ಚುವರಿ ಬಸ್ಸುಗಳನ್ನು ಕಲ್ಪಿಸಿಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

–ಸುಷ್ಮಾ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ವಿಸ್ಮಯ ಲೋಕದ ಮಾರ್ಗದರ್ಶಿ ಡಾ.ಚನ್ನೇಶ್

ನಾವು ದಿನನಿತ್ಯ ತಿನ್ನುವ ಅನೇಕ ಸಸ್ಯ, ತರಕಾರಿ, ಹಣ್ಣುಗಳ ಬಗ್ಗೆ, ಕನ್ನಡದ್ದೇ ಆದ ಶ್ರೀಗಂಧ, ಕೇವಲ ಹೆಣ್ಣಿನಿಂದಲೇ ಮಕ್ಕಳಿಗೆ ಸಾಗಿ ಬರುವ ಡಿಎನ್‌ಎ–ಮೈಟೋಕಾಂಡ್ರಿಯಾ, ನೌಕಾಯಾನದಲ್ಲಿ ಜಗತ್ತಿನ ಮೊದಲ ಪ್ರದಕ್ಷಿಣೆ ಮಾಡಿದ ಸಸ್ಯತಜ್ಞೆ ಇತ್ಯಾದಿಗಳ ಬಗ್ಗೆ ಬಹುಶಃ ನಿಮಗೆ ಗೊತ್ತಿರದ ಅನೇಕ ವಿಷಯಗಳನ್ನು ಇಂದು ಪ್ರಸ್ತಾಪ ಮಾಡಲಿದ್ದೇನೆ. (ನನಗೂ ಇದರ ಬಗ್ಗೆ ತಿಳಿದದ್ದು ಇತ್ತೀಚೆಗೆ ಅಷ್ಟೇ !)

ಬಟಾಣಿಯು ನವಶಿಲಾಯುಗದ ಅಂತ್ಯದಲ್ಲಿ ಕೃಷಿ ಆರಂಭಕ್ಕೆ ಕಾರಣವಾದ ಎಂಟು ಬೆಳೆಗಳಲ್ಲಿ ಒಂದು ಅಂದರೆ ಆಶ್ಚರ್ಯ ಆಗುತ್ತದೆ ಅಲ್ಲವೇ!? ಮನುಷ್ಯನು ಆರಂಭದಲ್ಲಿ ಬೆಳೆದದ್ದು ಎರಡು ರೀತಿಯ ಗೋಧಿ, ಬಾರ್ಲಿ, ಕೇಸರಿಬೇಳೆ, ಬಟಾಣಿ, ಕಡಲೆ ಮತ್ತು ಬಟರ್ ವಿಚ್ ಎಂಬ ದ್ವಿದಳ ಧಾನ್ಯಗಳು ಮತ್ತು ಅಗಸೆ ಮಾತ್ರ ಎಂಬುದನ್ನು ಪ್ರಾಚ್ಯ ಸಂಶೋಧನೆಗಳ ಮೂಲಕ ಕಂಡುಹಿಡಿದಿದ್ದಾರೆ.

ಯೂರೋಪಿನ ದಕ್ಷಿಣ ಭಾಗದಲ್ಲಿ ಹುಟ್ಟಿರುವ ಮೃದು ಎಲೆಗಳ–ಗಡಸು ಕಾಳಿನ ಮೆಂತ್ಯವು ಸುಮಾರು ನಾಕು ಸಾವಿರ ವರುಷಗಳಿಂದ ಮನುಷ್ಯನ ಆರೋಗ್ಯವನ್ನು ಕಾಪಾಡುವುದರಲ್ಲಿ ಹಿರಿದಾದ ಪಾತ್ರವನ್ನು ವಹಿಸುತ್ತಲೇ ಬಂದಿದೆ. ಜಗತ್ತಿನ ಹೆಚ್ಚು ಮೆಂತ್ಯ ಬೆಳೆಯುವ ದೇಶ ಭಾರತ, ಅದರಲ್ಲೂ ರಾಜಸ್ತಾನ.

ಧಾರ್ಮಿಕ ಭಾವನೆಯಿಂದ, ಔಷಧೀಯ ಗುಣಗಳಿಂದ ನಮಗೆ ತೀರಾ ಪರಿಚಿತವಾದ ಸಸ್ಯ ಎಂದರೆ ತುಳಸಿ. ಇದರ ಎಲೆ, ಕಾಂಡ, ತೊಗಟೆ, ಬೀಜ, ಹೂ, ಬೇರು ಎಲ್ಲವೂ ಔಷಧಯುಕ್ತ. ಅವುಗಳ ಮಹತ್ವವನ್ನು ಅರಿತಿದ್ದುದರಿಂದಲೇ ನಮ್ಮ ಪೂರ್ವಿಕರು ಗಿಡ, ಮರ, ನದಿ ಬೆಟ್ಟ ಹೀಗೆ ಪ್ರಕೃತಿಯ ಪೂಜೆಯನ್ನು ಮಾಡಿದ್ದು ಎಂದು ಅನ್ನಿಸುವುದಿಲ್ಲವೇ?


ನಮ್ಮ ಅಡುಗೆ ಮನೆಯ ಅವಿಭಾಜ್ಯ ಅಂಗ ಎಂದೇ ಹೇಳಬಹುದಾದ ಆಲೂಗೆಡ್ಡೆ ಗಿಡವೂ ಹೂವು ಮತ್ತು ಕಾಯಿಗಳನ್ನು ಬಿಡುತ್ತವೆಯಾದರೂ ಅದರ ಕಾಯಿಗಳನ್ನು ತಿನ್ನುವಂತಿಲ್ಲ, ಗೊತ್ತೆ!? ಕಾರಣ ಅದು ವಿಷಕಾರಿ! ಜಾಗತಿಕವಾಗಿ ನಾಲ್ಕನೆಯ ಆಹಾರ ಬೆಳೆಯಾಗಿರುವ ಈ ಜನಪ್ರಿಯ ಆಲೂಗೆಡ್ಡೆಯನ್ನು ಮಂಗಳ ಗ್ರಹದಲ್ಲೂ ಬೆಳೆಯಲು ಪ್ರಯೋಗಗಳು ನಡೆದಿವೆ!

ಸೀತಾಫಲ ಮತ್ತು ರಾಮಫಲಗಳು ನಮಗೆ ಗೊತ್ತು. ಅದರ ಸಂಬಂಧಿಗಳಾದ ಲಕ್ಷ್ಮಣ ಫಲ, ಹನುಮಾನ್ ಫಲಗಳು ಗೊತ್ತೆ? ಇವ್ಯಾವುವೂ ಭಾರತದ್ದಲ್ಲ. ಪೋರ್ಚುಗೀಸರಿಂದ ನಮ್ಮ ನೆಲಕ್ಕೆ ಬಂದವುಗಳು.

ಶತಮಾನಗಳಿಂದ ಬಳಕೆಯಲ್ಲಿರುವ, ನೂರಾರು ಅಡಿ ಎತ್ತರ ಬೆಳೆಯುವ ಮತ್ತೊಂದು ಬೃಹತ್ ಮರದ ತೊಗಟೆಯಿಂದ ಮಾಡುವ ವಸ್ತುವು ನಮ್ಮ ಪೂಜೆಯ ಅವಿಭಾಜ್ಯ ಅಂಗ. ಅದು ಯಾವುದು ಗೊತ್ತೇ? ಕರ್ಪೂರ! ಇದರ ವಿಶೇಷತೆಯೆಂದರೆ, ಅದು ಕರಗಿ ನೀರಾಗದೆ ನೇರವಾಗಿ ಆವಿಯಾಗುವುದು. ಕರ್ಪೂರ, ಪಚ್ಚ ಕರ್ಪೂರವು ಸಸ್ಯದಿಂದ ಬರುತ್ತವೆ ಎಂಬುದೂ ಹಲವರಿಗೆ ಗೊತ್ತಿರದ ಸಂಗತಿ.

ಅಪ್ಪಟ ಭಾರತದ್ದೇ ಆಗಿ, ಅರಬ್ಬರ ಮೂಲಕ ಪಶ್ಚಿಮಕ್ಕೂ ಹೋಗಿ, ಈಜಿಪ್ಟ್, ಇಟಲಿ, ಫ್ರಾನ್ಸ್‌ಗಳಲ್ಲೂ ಜನಪ್ರಿಯವಾಗಿರುವ ತರಕಾರಿ ಅಂದರೆ ಬದನೇಕಾಯಿ! ಹೇಳೋದು ಆಚಾರ, ತಿನ್ನೋದು ಬದನೇಕಾಯಿ!! ಎಂಬ ಮಾತು ಇದ್ದರೂ ಎಣ್ಣೆಗಾಯಿ, ವಾಂಗೀ ಬಾತ್, ಸಾಂಬಾರುಗಳ ಸವಿಯನ್ನು ಸವಿಯದವರ್ಯಾರು?

ಹಸಿರು ತರಕಾರಿ ಎಂಬ ಅರ್ಥದ ಸಂಸ್ಕೃತದ ಪಾಲಕ್ಯಾ ಶಬ್ದವೇ ಹಿಂದಿ ಭಾಷೆಯಲ್ಲಿ ಪಾಲಕ್ ಆಗಿದೆ. ಅದರ ಹಸಿರು ಎಲೆಗಳನ್ನೇ ತಾನೇ ತಿನ್ನುವುದು ! 2000 ವರ್ಷಗಳ ಹಿಂದೆಯೇ ವಿಕಸಿತವಾದ, ಪರ್ಷಿಯಾ ಮೂಲದ ಇದು ಕ್ರಿ.ಶ.647ರಲ್ಲಿಯೇ ಭಾರತವನ್ನು ನೇಪಾಳದ ಮೂಲಕ ತಲುಪಿತ್ತು.



> ಡಾ.ಚನ್ನೇಶ್ ಅವರ ಮತ್ತೊಂದು ವಿಶೇಷ ಲೇಖನಮಾಲೆ ಎಂದರೆ, ನೊಬೆಲ್ ಪ್ರಶಸ್ತಿ ಪ್ರಕಟವಾಗುತ್ತಿದ್ದಂತೆಯೇ ಆ ಪುರಸ್ಕೃತರ ಬಗ್ಗೆ, ಅವರಿಗೆ ಪ್ರಶಸ್ತಿ ಸಿಕ್ಕಿರುವ ವಿಷಯದ ಬಗ್ಗೆ ಅಂದೇ ಬರೆಯುವುದು. ಹೀಗಾಗಿ ಅದೆಷ್ಟೋ ಗಣ್ಯರ ಬಗ್ಗೆ, ಅವರ ಆಸಕ್ತಿಯ ಕ್ಷೇತ್ರದ ಬಗ್ಗೆ ನಮಗೆ ಹಲವು ಉಪಯುಕ್ತ ಮಾಹಿತಿಗಳು ಲಭ್ಯ. ವಿದ್ಯಾರ್ಥಿಗಳಿಗೆ ಇದರಿಂದ ಆಗುವ ಪ್ರಯೋಜನ ಅಷ್ಟಿಷ್ಟಲ್ಲ. ಆ ನೊಬೆಲ್ ಪ್ರಶಸ್ತಿ ವಿಜೇತರಲ್ಲಿ ಅನೇಕರು ಇವರ ಸಂಪರ್ಕದಲ್ಲಿ ಇದ್ದುದೂ ವಿಶೇಷವೇ ಹೌದು.

ಹೀಗೆ ನೂರಾರು ಅಲ್ಲ ಸಾವಿರಾರು ಲೇಖನಗಳನ್ನು ಸಸ್ಯಯಾನ ಎಂಬ ಮಾಲಿಕೆಯ ಮೂಲಕ, ಜನಸಾಮಾನ್ಯರಲ್ಲಿ ವಿಜ್ಞಾನದ ಬಗೆಗೆ ಅರಿವನ್ನು ಹೆಚ್ಚಿಸುವ ಉದ್ದೇಶ ಇಟ್ಟುಕೊಂಡು, ಆ ದಿಸೆಯಲ್ಲಿ ನಿರಂತರವಾಗಿ ಶ್ರಮಿಸುತ್ತಿರುವವರೇ ಅಪ್ಪಟ ಕನ್ನಡಿಗ **ಡಾ.ಟಿ.ಎಸ್.ಚನ್ನೇಶ್**. ಕೃಷಿ ವಿಜ್ಞಾನವನ್ನು ಓದಿ, ಮಣ್ಣಿನ ವಿಷಯದಲ್ಲಿ ಹೆಚ್ಚಿನ ಸಂಶೋಧನೆಯನ್ನು ಮಾಡಿರುವ ಇವರ ಒಂದು ದೊಡ್ಡ ತುಡಿತ ಎಂದರೆ, ಕನ್ನಡದಲ್ಲಿ ವಿಜ್ಞಾನದ ಬರಹಗಳನ್ನು ಬರೆದು, ಜನರಿಗೆ ಮುಟ್ಟಿಸಬೇಕು ಎನ್ನುವುದು. ಅದಕ್ಕಾಗಿಯೇ ಸೆಂಟರ್ ಫಾರ್ ಅಂಡರ್ಸ್ಟಾಂಡಿಂಗ್ ಆಫ್ ಸೈನ್ಸ್ ಎಂಬ ಸಂಸ್ಥೆ ಒಂದನ್ನು ಹುಟ್ಟುಹಾಕಿ, ಅದರ ಮೂಲಕ ಉಪನ್ಯಾಸ, ಪುಸ್ತಕ ಪ್ರಕಟಣೆ, ಶಾಲಾ ಕಾಲೇಜುಗಳ ಮಕ್ಕಳಿಗೆ ಕಾರ್ಯಾಗಾರಗಳನ್ನು ನಡೆಸುವುದು, ವಿಡಿಯೋ ಮೊದಲಾದ ಕಾರ್ಯಕ್ರಮಗಳನ್ನು ನಡೆಸುತ್ತಾ ಶ್ರೀಸಾಮಾನ್ಯರಲ್ಲಿ ವಿಜ್ಞಾನದ ಬಗೆಗೆ ಆಸಕ್ತಿ ಹುಟ್ಟುವಂತೆ ಮಾಡಿದ್ದಾರೆ. ಬಿ.ಜಿ.ಎಲ್. ಸ್ವಾಮಿಯವರ ಜನ್ಮ ಶತಾಬ್ದಿಯ ಸಮಯದಿಂದ ಆರಂಭವಾದ ಅವರ ಸಸ್ಯಯಾನ ಲೇಖನಮಾಲೆಯು ಈ ಮೇಲೆ ಹೇಳಿದ ನೂರಾರು ರೀತಿಯ ಸಸ್ಯಗಳ ಬಗ್ಗೆ ಅರಿವು ಮೂಡಿಸಿವೆ.

ಡಾ.ಚನ್ನೇಶ್ ಅವರ ಮತ್ತೊಂದು ವಿಶೇಷ ಲೇಖನಮಾಲೆ ಎಂದರೆ, ನೊಬೆಲ್ ಪ್ರಶಸ್ತಿ ಪ್ರಕಟವಾಗುತ್ತಿದ್ದಂತೆಯೇ ಆ ಪುರಸ್ಕೃತರ ಬಗ್ಗೆ, ಅವರಿಗೆ ಪ್ರಶಸ್ತಿ ಸಿಕ್ಕಿರುವ ವಿಷಯದ ಬಗ್ಗೆ ಅಂದೇ ಬರೆಯುವುದು. ಹೀಗಾಗಿ ಅದೆಷ್ಟೋ ಗಣ್ಯರ ಬಗ್ಗೆ, ಅವರ ಆಸಕ್ತಿಯ ಕ್ಷೇತ್ರದ ಬಗ್ಗೆ ನಮಗೆ ಹಲವು ಉಪಯುಕ್ತ ಮಾಹಿತಿಗಳು ಲಭ್ಯ. ವಿದ್ಯಾರ್ಥಿಗಳಿಗೆ ಇದರಿಂದ ಆಗುವ ಪ್ರಯೋಜನ ಅಷ್ಟಿಷ್ಟಲ್ಲ. ಆ ನೊಬೆಲ್ ಪ್ರಶಸ್ತಿ ವಿಜೇತರಲ್ಲಿ ಅನೇಕರು ಇವರ ಸಂಪರ್ಕದಲ್ಲಿ ಇದ್ದುದೂ ವಿಶೇಷವೇ ಹೌದು. ಶಿವಮೊಗ್ಗ ಸಮೀಪದ ನ್ಯಾಮತಿಯವರಾದ ಚನ್ನೇಶ್ ಅವರ ಮೇಲೆ ಅವರ ತಾಯಿಯವರ ಪ್ರಭಾವವು ದಟ್ಟವಾಗಿದೆ. ಅವರ ನಿರಂತರ ಓದು ಬರಹಕ್ಕೆ ಸ್ಫೂರ್ತಿ ಆಕೆಯೇ. ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಮೊಳೆಯಲೂ ಒಂದರ್ಥದಲ್ಲಿ ಅವರೇ ಕಾರಣ. **ಅನುರಣನ, ಸಸ್ಯ ಯಾನದ ಅಮೃತಬಿಂದು, ಪ್ರತಿಫಲನ, ಅನ್ನದ ಬಟ್ಟಲು, ಉಳುವವರ ಪರ ವಕಾಲತ್ತು** ಮುಂತಾದ ಅನೇಕ ಪುಸ್ತಕಗಳು ಅವರ ಲೇಖನಿಯಿಂದ ಮೂಡಿಬಂದಿವೆ.

ಅಲ್ಲದೆ ವೈಜ್ಞಾನಿಕ ಕತೆಗಳನ್ನೂ ಸಹ ಅವರು ಬರೆದಿದ್ದಾರೆ. ಕನ್ನಡದಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಕತೆಗಳನ್ನು ಬರೆಯುವವರು ಸ್ವಲ್ಪ ವಿರಳ ಎನ್ನುವ ಕೊರತೆಯನ್ನು ಇವರು ತಕ್ಕಮಟ್ಟಿಗೆ ತುಂಬಿಕೊಟ್ಟಿದ್ದಾರೆ. ಅವರ ಅರಿವಿನ ಹರಹು ಬಹಳ ವಿಸ್ತಾರವಾಗಿದೆ. ಜಗತ್ತನ್ನು ಪ್ರದಕ್ಷಿಣೆ ಮಾಡಿ ಬಂದ ಮೊದಲ ಮಹಿಳೆ ಜೆಯಾನ್ ಬರೆ, ಲೇಖನವು ಎಷ್ಟೋ ಕುತೂಹಲಕಾರಿ ಅಂಶಗಳನ್ನು ಓದುಗರೆದುರು ಬಿಚ್ಚಿಡುತ್ತದೆ.

ಸಸ್ಯಗಳ ಬಗ್ಗೆ ಹೇಳುವಾಗ ಅಥವಾ ವಿಜ್ಞಾನದ ಬಗೆಗೆ ತಿಳಿಸುವಾಗ ಸಹಜವಾಗಿಯೇ ಅವುಗಳ ವೈಜ್ಞಾನಿಕ ವಿವರಣೆಯು ಒಳಗೊಳ್ಳಬೇಕಾಗುತ್ತದೆ. ಅದು ಜನಸಾಮಾನ್ಯರಿಗೆ ಶುಷ್ಕ ಎಂದನಿಸಿಬಿಡುವ ಸಾಧ್ಯತೆಯೂ ಇರುತ್ತದೆ. ಹಾಗಾಗದಿರಲು ಅವರು ಬಹಳ ಸರಳವಾದ ಭಾಷೆಯಲ್ಲಿ, ಸಾಮಾನ್ಯರಿಗೂ ಆಪ್ತವಾಗುವಂತಹ ಒಂದು ಶೈಲಿಯನ್ನು ರೂಢಿಸಿಕೊಂಡಿದ್ದಾರೆ. ಮೇಲೆ ನಾನು ಉದಾಹರಿಸಿರುವ ಸಸ್ಯಗಳನ್ನು ಕುರಿತ ಮಾಹಿತಿಗಳು ಅವರ ಲೇಖನಗಳಿಂದ ಆಯ್ದ ಕೇವಲ ಒಂದೊಂದು ಸಾಲುಗಳು ಅಷ್ಟೇ. ಅದನ್ನು ಓದಬಯಸುವವರು ಅವರ ವೆಬ್‌ಸೈಟಿಗೆ ಹೋಗಿ ಅದರ ಸಂಪೂರ್ಣ ರೂಪವನ್ನು ಓದಬಹುದು.

ರಾಷ್ಟ್ರೀಯ ಗಣಿತ ದಿನದಂದು ಜಗತ್ತು ಕಂಡ ಅಸಾಮಾನ್ಯ ಗಣಿತ ತಜ್ಞ ಶ್ರೀನಿವಾಸ ರಾಮಾನುಜನ್ ಅವರನ್ನು ಕುರಿತ ಲೇಖನವು ಅದ್ಭುತವಾಗಿದೆ. ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಕೃಷಿ ವಿಜ್ಞಾನ ಲೇಖಕರ ಪ್ರಶಸ್ತಿ, ಡಿವಿಜಿ ಬಳಗ ಪ್ರತಿಷ್ಠಾನವು ಬಿ.ಜಿ.ಎಲ್.ಸ್ವಾಮಿಯವರ ಹೆಸರಿನಲ್ಲಿ ಸ್ಥಾಪಿಸಿದ ಮೊದಲ ಪ್ರಶಸ್ತಿಯೂ ಒಳಗೊಂಡಂತೆ ಇವರ ಬಹುಮುಖ ವ್ಯಕ್ತಿತ್ವಕ್ಕೆ ಅನೇಕ ಗೌರವ ಸನ್ಮಾನಗಳು ಲಭಿಸಿವೆ. ಕನ್ನಡಿಗರೆಲ್ಲರೂ ಹೆಮ್ಮೆ ಪಡಬೇಕಾದ ಅಪರೂಪದ ಲೇಖಕ ಡಾ.ಟಿ.ಎಸ್.ಚನ್ನೇಶ್ ಅವರು ಎಂಬುದು ನಿರ್ವಿವಾದ.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಡಿ.27–ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿತವಾಗಿರುವ ಜಿ.ಆರ್.ಅಮೀರ್‌ಜಾನ್ ದತ್ತಿ ಮೂಲ ಧನದ ಮೇಲೆ ಕ್ರೋಢೀಕೃತವಾಗಿರುವ ಬಡ್ಡಿ ಹಣವನ್ನು ಅರ್ಹ ಮುಸ್ಲಿಂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವಾಗಿ 2025–26ನೇ ಸಾಲಿನಲ್ಲಿ ವಿತರಿಸುವ ಸಲುವಾಗಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. (ಬಿ.ಕಾಂ., ಬಿಬಿಎಂ, ಪಾಲಿಟೆಕ್ನಿಕ್ ಕೋರ್ಸ್‌ಗಳಿಗೆ ಮಾತ್ರ). ಅರ್ಜಿಗಳನ್ನು ಆಯಾ ಕಾಲೇಜಿನ ಪ್ರಾಂಶುಪಾಲರ ಮೂಲಕ ಜ.31,ರೊಳಗೆ ಕಚೇರಿಗೆ ತಲುಪಿಸುವಂತೆ ಕೋರಲಾಗಿದೆ. ಕಳೆದ ಸಾಲಿನಲ್ಲಿ ವಿದ್ಯಾರ್ಥಿವೇತನ ಪಡೆದಿರುವ ವಿದ್ಯಾರ್ಥಿಗಳು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿಯೂ ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಾಗಿದ್ದಲ್ಲಿ, ಅವರ ಅರ್ಜಿಗಳನ್ನು ನವೀಕರಣಕ್ಕಾಗಿ ಶಿಫಾರಸು ಮಾಡುವಾಗ ಅವರ ಪ್ರಗತಿ, ನಡತೆ, ಹಾಜರಾತಿ ಬಗ್ಗೆ ವಿವರ ಒದಗಿಸುವುದು. ಶೇ.60 ಅಥವಾ ಅದಕ್ಕೂ ಹೆಚ್ಚು ಅಂಕ ಪಡೆದಿರುವವರು ಅರ್ಹರಾಗಿರುತ್ತಾರೆ. ಅರ್ಜಿ ಜೊತೆ ಅಂಕಪಟ್ಟಿ ಆದಾಯ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಗಳಿಗೆ ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಲಗತ್ತಿಸುವುದು.

ದೆಹಲಿಯಲ್ಲಿ ಮೊಳಗಿತು ದಲಿತ ಸಿಎಂ ಕೂಗು

ಡಾ.ಪರಮೇಶ್ವರ್‌ಗೆ ಸಿಎಂ ಸ್ಥಾನ ನೀಡುವಂತೆ ಒತ್ತಾಯ

ನವದೆಹಲಿ, ಡಿ.27– ರಾಜ್ಯ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆ ಗೊಂದಲ ಮುಂದುವರಿದಿದೆ. ಒಂದು ವೇಳೆ ಮುಖ್ಯಮಂತ್ರಿ ಬದಲಾವಣೆ ಮಾಡುವುದಾದರೆ ದಲಿತರಿಗೆ, ಅದರಲ್ಲೂ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಡಾ. ಬಿ.ಆರ್. ಅಂಬೇಡ್ಕರ್ ದಲಿತ ಸೇವಾ ಸಮಿತಿ ಆಗ್ರಹಿಸಿದೆ.


ದೆಹಲಿಯಲ್ಲಿರುವ ಎಐಸಿಸಿ ಕಚೇರಿ ಇಂದಿರಾ ಭವನಕ್ಕೆ ಆಗಮಿಸಿದ ಡಾ.ಬಿಆರ್ ಅಂಬೇಡ್ಕರ್ ದಲಿತಾ ಸೇವಾ ಸಮಿತಿ ಸದಸ್ಯರು ಹಾಗೂ ತುಮಕೂರು ಮೂಲದ ಕೆಲವು ಕಾಂಗ್ರೆಸ್ ನಾಯಕರು ಜಿ.ಪರಮೇಶ್ವರ್ ಅವರಿಗೆ ಮುಖ್ಯಮಂತ್ರಿಯಾಗಲು ಅವಕಾಶ ನೀಡಬೇಕು ಎಂದು ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿದರು.



ಎಐಸಿಸಿ ಕಚೇರಿಗೆ ಆಗಮಿಸುವ ಮುನ್ನ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿಯಾದ ಸದಸ್ಯರು, ಜಿ.ಪರಮೇಶ್ವರ್‌ಗೆ ಅವಕಾಶ ನೀಡಬೇಕು ಎಂದು ಮನವಿ ಮಾಡಿದರು. ಅಲ್ಲದೇ ಸೋನಿಯಾ ಗಾಂಧಿ ಅವರ ನಿವಾಸಕ್ಕೂ ಮನವಿ ಪತ್ರ ರವಾನಿಸಿದರು. ಎಐಸಿಸಿ ಕಚೇರಿ ಬಳಿ ಮಾತನಾಡಿದ ಸದಸ್ಯರು, ದಲಿತ ಸಮುದಾಯ ದಶಕಗಳಿಂದ ಕಾಂಗ್ರೆಸ್ ಅನ್ನು ಬೆಂಬಲಿಸುತ್ತಾ ಬಂದಿದೆ. ಹೀಗಾಗಿ ದಲಿತ ನಾಯಕರಿಗೆ ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ನೀಡಬೇಕು. ಜಿ.ಪರಮೇಶ್ವರ್ ಪಕ್ಷನಿಷ್ಠರಾಗಿ ಕೆಲಸ ಮಾಡುತ್ತಿದ್ದಾರೆ. 2013ರಲ್ಲಿ ಅವರ ನೇತೃತ್ವದಲ್ಲಿ ಕಾಂಗ್ರೆಸ್ 122 ಸ್ಥಾನ ಗೆದ್ದಿತ್ತು. ಈ ಬಾರಿಯೂ ವಿಧಾನಸಭೆ ಚುನಾವಣೆಯಲ್ಲಿ ದಲಿತರು ಕಾಂಗ್ರೆಸ್ ಪರವಾಗಿ ನಿಂತಿದ್ದಾರೆ. ಈ ಹಿನ್ನೆಲೆಯಲ್ಲಿ ದಲಿತರಿಗೆ ಸಿಎಂ ಸ್ಥಾನ ನೀಡುವ ಮೂಲಕ ನ್ಯಾಯ ನೀಡಬೇಕು ಎಂದು ಒತ್ತಾಯಿಸಿದರು.

ಶಾಮನೂರು ಶಿವಶಂಕರಪ್ಪ ಪುತ್ಥಳಿ ರೂಪಿಸಿದ ಅರುಣ್ ಯೋಗಿರಾಜ್

ದಾವಣಗೆರೆ, ಡಿ.27– ಅಯೋಧ್ಯೆಯ ಶ್ರೀರಾಮ ಮಂದಿರದ ರಾಮಲಲ್ಲಾ ಮೂರ್ತಿಯನ್ನು ಕೆತ್ತುವ ಮೂಲಕ ವಿಶ್ವದಾದ್ಯಂತ ಮನೆಮಾತಾಗಿರುವ ಮೈಸೂರಿನ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್, ಇದೀಗ ಹಿರಿಯ ರಾಜ ಕಾರಣಿ ಹಾಗೂ ಲಿಂಗಾಯತ ಸಮಾಜದ ಮುತ್ಸದ್ದಿ ನಾಯಕ ದಿವಂಗತ ಡಾ.ಶಾಮನೂರು ಶಿವಶಂಕರಪ್ಪ ಅವರ ಭವ್ಯ ಪುತ್ಥಳಿಯನ್ನು ಕೆತ್ತನೆ ಮಾಡುವ ಮೂಲಕ ಗೌರವ ಸಮರ್ಪಿಸಿದ್ದಾರೆ.



ದಾವಣಗೆರೆಯ ಆನೆಕೊಂಡದ ಕಲ್ಲೇಶ್ವರ ರೈಸ್ ಮಿಲ್ ಆವರಣದ ಬೃಹತ್ 100 ಎಕರೆ ಪ್ರದೇಶದಲ್ಲಿ ಆಯೋಜಿಸಲಾಗಿದ್ದ 'ದಿ. ಶಾಮನೂರು ಶಿವಶಂಕರಪ್ಪ ನುಡಿ ನಮನ' ಹಾಗೂ ಶಿವಗಣಾರಾಧನೆ ಕಾರ್ಯಕ್ರಮದಲ್ಲಿ ಈ ಪುತ್ಥಳಿಯನ್ನು ಗಣ್ಯರ ಸಮ್ಮುಖದಲ್ಲಿ ಲೋಕಾರ್ಪಣೆಗೊಳಿಸಲಾಯಿತು.

ದಿ.ಶಾಮನೂರು ಶಿವಶಂಕರಪ್ಪ ಅವರ ಪುತ್ಥಳಿ ಕೆತ್ತನೆ ಬಗ್ಗೆ ಶಿಲ್ಪಿ ಅರುಣ್ ಯೋಗಿರಾಜ್ ಅವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಮಾಜಿ ಸಚಿವ ಮತ್ತು ಖ್ಯಾತ ಸಮಾಜ ಸುಧಾರಕರಾದ ಶ್ರೀ ಶಾಮನೂರು ಶಿವಶಂಕರಪ್ಪ ಅವರ ಪ್ರತಿಮೆಯನ್ನು ಕೆತ್ತನೆ ಮಾಡುವ ಅವಕಾಶ ನನಗೆ ಸಿಕ್ಕಿದ್ದು ಭಾಗ್ಯ ಎಂದು ಬರೆದುಕೊಂಡಿದ್ದಾರೆ.

ನುಡಿ ನಮನ ಕಾರ್ಯಕ್ರಮದಲ್ಲಿ ಶಾಮನೂರು ಶಿವಶಂಕರಪ್ಪ ಪುತ್ಥಳಿ ಅನಾವರಣ ಮಾಡಿ ಮಾತನಾಡಿದ ಅರುಣ್ ಯೋಗಿರಾಜ್, ಶಾಮನೂರು ಅವರಲ್ಲಿ ಮನುಷ್ಯತ್ವ ಇತ್ತು. ಬಡವರು, ಕಷ್ಟದಲ್ಲಿರುವವರಿಗೆ ಸಹಾಯಹಸ್ತ ಚಾಚಲು ಟ್ರಸ್ಟ್ ಮೂಲಕ ನೆರವಾಗುವ ಕೊಡುಗೈದಾನಿಯಾಗಿದ್ದರು. ಪ್ರತಿಯೊಬ್ಬರಿಗೂ ಹುಟ್ಟು ಆಕಸ್ಮಿಕ, ಆದರೆ ಸಾವು ಖಚಿತ, ಈ ನಡುವಿನ ಪಯಣದಲ್ಲಿ ಬದುಕಿನ ಸಾರ್ಥಕತೆ ಕಂಡುಕೊಳ್ಳುವುದು ಮುಖ್ಯ. ದುಃಖದಲ್ಲಿರುವವರಿಗೆ ಸದಾ ನೆರವಾಗುವ ಅವರ ಬದುಕು ನಿಜಕ್ಕೂ ಸಾರ್ಥಕ ಎಂದು ಹೇಳಿದ್ದಾರೆ.

ಇಂದು ನಿರಂತರ ಕಲೆಮನೆ ಉತ್ಸವ

ಮೈಸೂರು, ಡಿ. 27– ಮೈಸೂರಿನ ಕುಮಾರ್ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ವತಿಯಿಂದ ಡಿಸೆಂಬರ್ 28 ರಂದು ಮಧ್ಯಾಹ್ನ 2.30ಕ್ಕೆ ಕಲೆಮನೆ ಸಭಾಂಗಣದಲ್ಲಿ 67ನೇ ಅಂತರರಾಷ್ಟ್ರೀಯ ವಿಶೇಷ ನಿರಂತರ ಕಲೆಮನೆ ಉತ್ಸವ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್ ಪ್ರಿನ್ಸಿಪಾಲ್ ಶ್ರೀವತ್ಸ, ಕಲಾ ಪೋಷಕ ಆರ್.ಜ್ಞಾನೇಶ್ವರ್ ಸಿಂಗ್, ಕಲಾವಿದೆ ಡಾ.ಜಮುನಾ ರಾಣಿ ವಿ.ಮಿರ್ಲೆ ಆಗಮಿಸಲಿದ್ದಾರೆ. ಹಿರಿಯ ನೃತ್ಯ ಗುರುಗಳಾದ ಶ್ರೀಮತಿ ವಿಜಿ ಪ್ರಕಾಶ್, ನೃತ್ಯ ಸಂಸ್ಥೆಯಾದ ಶಕ್ತಿ ಸ್ಕೂಲ್ ಆಫ್ ಭರತನಾಟ್ಯ, ಲಾಸ್ ಏಂಜಲೀಸ್, ಯು.ಎಸ್.ಎ ಇವರ ವಿದ್ಯಾರ್ಥಿಗಳ ತಂಡದಿಂದ ಸಮರ್ಪಣ್ ವಿಶೇಷ ಭರತನಾಟ್ಯ ನೃತ್ಯ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಬೆಂಗಳೂರಿನ ಸೂತ್ರವೇಳ ಪಪೆಟ್ ಥಿಯೇಟರ್, ಕಲಾವಿದರ ತಂಡದಿಂದ ಸಲಾಕೆ ಸೂತ್ರದ ಬೊಂಬೆಯಾಟ" (ಕರ್ನಾಟಕದ ಪುರಾತನ ಹಾಗೂ ಅಪರೂಪದ ಜನಪದ ಕಲೆಗಳಲ್ಲೊಂದು) ಪ್ರದರ್ಶನ. ಮೈಸೂರಿನ ಶ್ರೀ ಗಣೇಶ ಸಂಗೀತ ನೃತ್ಯಾಲಯ ಚಾರಿಟಬಲ್ ಟ್ರಸ್ಟ್ ಗುರುಗಳಾದ ಶ್ರೀಮತಿ ಆರತಿ ಅರುಣ್ ಅವರ ಶಿಷ್ಯ ವೃಂದದಿಂದ ಭರತನಾಟ್ಯ ನೃತ್ಯ ಕಾರ್ಯಕ್ರಮ ಪ್ರಸ್ತುತಪಡಿಸಲಿದ್ದಾರೆ.

ಲಾಂಗ್ ಹಿಡಿದು ಸ್ಟಂಟ್ ಮಾಡಿ ಪೊಲೀಸರ ಅತಿಥಿಯಾದ!

ಮೈಸೂರು, ಡಿ.27– ಲಾಂಗ್ ಹಿಡಿದು ಸಾರ್ವಜನಿಕರನ್ನು ಬೆದರಿಸುತ್ತಿದ್ದ ಯುವಕನನ್ನು ಮೈಸೂರಿನ ಉದಯಗಿರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಗರದ ಕೆ.ಎನ್.ಪುರ ನಿವಾಸಿ ವಿನೋದ್ ಅಲಿಯಾಸ್ ಅಪ್ಪಿ(25) ಬಂಧಿತ. ಫ್ಲವರ್ ಡೆಕೊರೇಷನ್ ಕೆಲಸ ಮಾಡುವ ಈತ ಶುಕ್ರವಾರ ಕ್ಯಾತಮಾರನಹಳ್ಳಿ ನಿಂಬೆಹಣ್ಣು ವೃತ್ತದ ಬಳಿ ಲಾಂಗ್ ಹಿಡಿದು ಸಾರ್ವಜನಿಕರಿಗೆ ಬೆದರಿಸುತ್ತಿದ್ದ ಎನ್ನಲಾಗಿದೆ. ಈ ಬಗ್ಗೆ ಮಾಹಿತಿ ತಿಳಿದ ಗಸ್ತಿನಲ್ಲಿದ್ದ ಸಿಬ್ಬಂದಿ, ಸ್ಥಳಕ್ಕೆ ದೌಡಾಯಿಸಿದಾಗ ವಿನೋದ್, ಲಾಂಗ್ ಬಿಸಾಡಿ ಅಲ್ಲಿಂದ ಪರಾರಿಯಾಗಲು ಯತ್ನಿಸಿದ್ದಾನೆ. ಬೆನ್ನತ್ತಿ ಹಿಡಿದ ಪೊಲೀಸರು ಆತನನ್ನು ಠಾಣೆಗೆ ಕರೆತಂದು ಎಫ್ಐಆರ್ ದಾಖಲಿಸಿ, ಬಂಧಿಸಿದ್ದಾರೆ.

ನಾಳೆ 'ಉದ್ಯಮಿ ಆಗು ಉದ್ಯೋಗ ನೀಡು'

ಮೈಸೂರು, ಡಿ.27– ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಖಾದಿ ಗ್ರಾಮೋದ್ಯೋಗ ಇಲಾಖೆ, ಬೃಂದಾವನ ವೆಲ್‌ಫೇರ್ ಫೌಂಡೇಷನ್‌ನ ಸತ್ಯಶ್ರೀ ಬಿ. ಶ್ಯಾಮ್ ಮತ್ತು ಬಾಲಸುಬ್ರಮಣ್ಯ ಸ್ನೇಕ್‌ಶ್ಯಾಮ್ ಅವರ ಸಹಯೋಗದಲ್ಲಿ ಡಿ. 29ರ ಬೆಳಗ್ಗೆ 10.30ಕ್ಕೆ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಐಡಿಯಲ್ ಜಾವಾ ಶಾಲೆಯಲ್ಲಿ ನಿರುದ್ಯೋಗ ಯುವಕ–ಯುವತಿಯರಿಗೆ 'ಉದ್ಯಮಿ ಆಗು ಉದ್ಯೋಗ ನೀಡು' ವಿಷಯ ಕುರಿತು ಉದ್ಯಮ ಶೀಲತಾ ಅಭಿವೃದ್ಧಿ ಅರಿವು ಕಾರ್ಯಕ್ರಮ ನಡೆಯಲಿದೆ.

ಬೆಂಗಳೂರಿನ ಖಾದಿ ಗ್ರಾಮೋದ್ಯೋಗ ಆಯೋಗದ ರಾಜ್ಯ ನಿರ್ದೇಶಕ ಬಂಗಾರನಾಯಕ್ ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಯಾಗಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಕೆ. ನಾರಾಯಣಮೂರ್ತಿ, ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ಎನ್.ಪಿ. ಕೃಷ್ಣಮೂರ್ತಿ, ಖಾದಿ ಗ್ರಾಮೋದ್ಯೋಗ ಮಂಡಳಿಯ ಜಿಲ್ಲಾ ಅಧಿಕಾರಿ ಶರತ್‌ಚಂದ್ರ ಇತರರು ಉಪಸ್ಥಿತರಿರುವರು. ಮಾಹಿತಿಗಾಗಿ ಸತ್ಯಶ್ರೀ ಬಿ. ಶ್ಯಾಮ್, ಮೊ. 9620521799 ಸಂಪರ್ಕಿಸುವುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಲ್ಲಿ ನಡೆಯುತ್ತಿರುವ ಅಪರಾಧ ಕೃತ್ಯಗಳ
ಲಘುವಾಗಿ ಪರಿಗಣಿಸಿದರೆ ಅಪಾಯ ಕಾದಿದೆ...!

●ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಎಚ್ಚರಿಕೆ ●ಸ್ಫೋಟ ಪ್ರಕರಣದ ಬಗ್ಗೆ ಉಸ್ತುವಾರಿ ಸಚಿವರ ಹೇಳಿಕೆಗೆ ಆಕ್ಷೇಪ ●ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟವನ್ನು ಹಗುರವಾಗಿ ಪರಿಗಣಿಸಬೇಡಿ ●ಅರಮನೆಯಲ್ಲಿ ವೀಕ್ಷಕರ ತಪಾಸಣೆಗೆ ಆಧುನಿಕ ಸುರಕ್ಷತಾ ಉಪಕರಣಗಳಿಲ್ಲ ●ವಿದೇಶಗಳಂತೆ ಮೈಸೂರು ಅರಮನೆಗೆ ಪ್ರೇಕ್ಷಕರ ಪ್ರವೇಶ ನಿರ್ಬಂಧ ಒಳ್ಳೆಯದು ●ಲ್ಯಾನ್ಸ್‌ಡೌನ್ ಬಿಲ್ಡಿಂಗ್, ದೇವರಾಜ ಮಾರುಕಟ್ಟೆಗೆ ಆದ ಗತಿ ಅರಮನೆಗೆ ಬರಬಾರದು

ಮೈಸೂರು, ಡಿ.27(ಬಿಎಲ್‌ಯು)– ಮೈಸೂರು ಅರಮನೆಯ ಜಯ ಮಾರ್ತಾಂಡ ದ್ವಾರದ ಬಳಿ ಮೊನ್ನೆ ನಡೆದ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ಸೇರಿದಂತೆ ಇತರೆ ಅಪರಾಧ ಕೃತ್ಯಗಳನ್ನು ಸರ್ಕಾರ ಹಗುರವಾಗಿ ಪರಿಗಣಿಸಿದರೆ ಭವಿಷ್ಯದಲ್ಲಿ ದೊಡ್ಡ ಗಂಡಾಂತರ ಎದುರಾಗುವ ಆತಂಕವಿದೆ ಎಂದು ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಎಚ್ಚರಿಸಿದ್ದಾರೆ.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶನಿವಾರ ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ಮಾಜಿ ಶಾಸಕ ಹಾಗೂ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರು ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ಆಕಸ್ಮಿಕ ಎಂದು ಹೇಳುವ ಮೂಲಕ ಇಡೀ ಪ್ರಕರಣಕ್ಕೆ ತೇಪೆ ಹಚ್ಚಲು ಮುಂದಾಗಿದ್ದಾರೆ ಎಂದು ಕಿಡಿಕಾರಿದರು.

ಅನುಮಾನಕ್ಕೆ ಆಸ್ಪದ: ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ಸಾವನ್ನಪ್ಪಿದ ಸಲೀಂ ಹೊರ ರಾಜ್ಯದಿಂದ ಬಂದು ಇಲ್ಲಿ ಬಲೂನು ಮಾರಾಟ ಮಾಡುತ್ತಿದ್ದ. ಆತ ಲಾಡ್ಜ್‌ನಲ್ಲಿ ವಾಸ್ತವ್ಯ ಹೂಡಿದ್ದನ್ನು ಸೂಕ್ಷ್ಮವಾಗಿ ಗಮನಿಸಿದರೆ ಈ ಪ್ರಕರಣದ ಬಗ್ಗೆ ಹಲವು ಅನುಮಾನಗಳು ಎದುರಾಗುತ್ತವೆ. ಹೊರ ರಾಜ್ಯದಿಂದ ಬಂದ ಕೆಲವರು ಇಡೀ ಫುಟ್‌ಪಾತ್ ಅತಿಕ್ರಮಣ ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಯಾರ ಅಂಜಿಕೆ ಇವರಿಗಿಲ್ಲ. ಈ ಬಗ್ಗೆ ತನಿಖೆ ನಡೆಸುವಲ್ಲಿ ಪೊಲೀಸರು ವಿಫಲರಾಗಿದ್ದಾರೆ, ಗುಪ್ತಚರ ಇಲಾಖೆಯ ವೈಫಲ್ಯ ಎದ್ದು ಕಾಣುತ್ತಿದೆ ಎಂದು ರಘು ಕೌಟಿಲ್ಯ ಆರೋಪಿಸಿದರು.

ಅರಮನೆಯ ಪೂರ್ವ ದ್ವಾರದಲ್ಲಿ ಮೇಲಿಂದ ಮೇಲೆ ಒಂದೊಂದು ಅವಘಡಗಳು ಸಂಭವಿಸುತ್ತಲೇ ಇವೆ. ಇತ್ತೀಚಿಗೆ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ನಡೆಸಿ, ಹತ್ಯೆಗೈಯ್ಯಲಾಯಿತು. ಈಗ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟವಾಗಿದೆ ಇಂತಹ ಘಟನೆಗಳು ಆಗಾಗ್ಗೆ ನಡೆಯುತ್ತಿರುವುದನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದರು.

ಅರಮನೆಗೆ ವೀಕ್ಷಕರ ನಿರ್ಬಂಧಿಸಿ: ಲಂಡನ್‌ನ ಬಕಿಂಗ್‌ಹ್ಯಾಮ್ ಅರಮನೆ ಸೇರಿದಂತೆ ವಿಶ್ವದ ಹಲವು ರಾಷ್ಟ್ರಗಳಲ್ಲಿ ಪಾರಂಪರಿಕ ಅರಮನೆಗಳಿಗೆ ಪ್ರೇಕ್ಷಕರ ಪ್ರವೇಶ ನಿರ್ಬಂಧಿಸಲಾಗಿದೆ. ಆದರೆ ಮೈಸೂರು ಅರಮನೆ ಪ್ರವೇಶ ಶುಲ್ಕ ನಿಗದಿ ಮಾಡಿ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಅರಮನೆಯ ಆದಾಯದಿಂದ ಸರ್ಕಾರ ನಡೆಸುವ ಪರಿಸ್ಥಿತಿ ಬಂದಿದೆ. ಅರಮನೆಯನ್ನು ಸರ್ಕಾರ ಎಟಿಎಂ ಮಾಡಿಕೊಂಡಿದೆ ಎಂದು ಕಿಡಿಕಾರಿದ ರಘು ಕೌಟಿಲ್ಯ, ವಿದೇಶಿ ಮಾದರಿಯಲ್ಲಿ ಮೈಸೂರು ಅರಮನೆಗೆ ವೀಕ್ಷಕರ ಪ್ರವೇಶವನ್ನು ನಿರ್ಬಂಧಿಸಬೇಕು ಎಂದು ಆಗ್ರಹಿಸಿದರು.

ವಿಶ್ವದ ಜಾಗತಿಕ ಭೂಪಟದಲ್ಲಿ ತನ್ನ ಸೌಂದರ್ಯದಿಂದ ಮೈಸೂರು ಅರಮನೆ ಕಂಗೊಳಿಸುತ್ತಿದ್ದು, ದೇಶ–ವಿದೇಶದ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ರಾಜವಂಶಸ್ಥರ ಕೊಡುಗೆಯಾಗಿರುವ ಈ ಅರಮನೆಯ ಮಾದರಿ ಮತ್ತೊಂದು ಅರಮನೆ ನಿರ್ಮಿಸುವುದು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಇಂತಹ ಅದ್ಭುತ ಅರಮನೆಯನ್ನು ನಾವು ಉಳಿಸಿಕೊಳ್ಳಬೇಕು, ಇದಕ್ಕಾಗಿ ಸರ್ಕಾರ ಹಲವು ಕಠಿಣ ಕ್ರಮ ಕೈಗೊಳ್ಳಬೇಕಿದೆ ಎಂದು ಸಲಹೆ ನೀಡಿದರು.

ಕೇಂದ್ರೀಯ ಪಡೆ ನಿಯೋಜಿಸಿ: ಪ್ರಸ್ತುತ ಮೈಸೂರು ಅರಮನೆಗೆ ನೀಡಿರುವ ಸುರಕ್ಷತೆ ಏನೇನು ಸಾಲದಾಗಿದೆ. ಅರಮನೆಯ ಪ್ರವೇಶ ದ್ವಾರದಲ್ಲಿ ವೀಕ್ಷಕರ ತಪಾಸಣೆಗೆ ಆಧುನಿಕ ಉಪಕರಣಗಳನ್ನು ಅಳವಡಿಸಿಲ್ಲ. ಈ ಹಿನ್ನೆಲೆಯಲ್ಲಿ ಅರಮನೆಯ ಎಲ್ಲಾ ಪ್ರವೇಶ ದ್ವಾರದಲ್ಲಿ ಆಧುನಿಕ ಸುರಕ್ಷತಾ ಉಪಕರಣ ಅಳವಡಿಸಬೇಕು. ಜೊತೆಗೆ, ಭದ್ರತೆಗೆ ಸಿಆರ್‌ಪಿಎಫ್ ಮಾದರಿ ಕೇಂದ್ರೀಯ ಪಡೆಯನ್ನು ನಿಯೋಜಿಸಬೇಕು ಎಂದು ಒತ್ತಾಯಿಸಿದರು.

ಅರಮನೆಯ ಭದ್ರತೆಗೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದಿದ್ದರೆ ಮುಂದೆ ಗಂಡಾಂತರವಾದರೆ ಅದಕ್ಕೆ ರಾಜ್ಯ ಸರ್ಕಾರವೇ ನೇರ ಹೊಣೆಯಾಗುತ್ತದೆ ಎಂದು ಎಚ್ಚರಿಸಿದರು.

ಮೈಸೂರು ಅರಮನೆಯ ಕೆಲವು ಭಾಗ ಕುಸಿದು ಬೀಳುತ್ತಿದೆ. ಈ ಪಾರಂಪರಿಕ ಕಟ್ಟಡಕ್ಕೆ ಧಕ್ಕೆಯಾಗದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಹಾಗೂ ದೇವರಾಜ ಮಾರುಕಟ್ಟೆಗೆ ಆದ ಗತಿಯೇ ಮೈಸೂರು ಅರಮನೆಗೂ ಬರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಎಚ್ಚೆತ್ತುಕೊಂಡು ಅರಮನೆಯ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಫುಟ್‌ಪಾತ್ ಅತಿಕ್ರಮಣ: ಮೈಸೂರಿನ ಸಯ್ಯಾಜಿರಾವ್ ರಸ್ತೆ ಸೇರಿದಂತೆ ಇತರೆ ಫುಟ್‌ಪಾತ್ ಅತಿಕ್ರಮಣ ಮಾಡಿಕೊಂಡು ವ್ಯಾಪಾರ ಮಾಡಲಾಗುತ್ತಿದೆ. ಈ ಮೂಲಕ ಪಾದಚಾರಿಗಳ ಹಕ್ಕನ್ನು ಕಸಿದುಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಫುಟ್‌ಪಾತ್ ವ್ಯಾಪಾರವನ್ನು ತೆರವು ಮಾಡಬೇಕು, ವ್ಯಾಪಾರಸ್ಥರಿಗೆ ಪ್ರತ್ಯೇಕ ಸ್ಥಳ ನಿಗದಿ ಮಾಡಿ, ನೂತನ ಫುಟ್‌ಪಾತ್ ನೀತಿ ರೂಪಿಸಬೇಕು ಎಂದು ಹೇಳಿದರು.

ಚಾಮುಂಡಿಬೆಟ್ಟ ರಕ್ಷಿಸಿ: ಚಾಮುಂಡಿ ಬೆಟ್ಟದ ಸುತ್ತ ಮುತ್ತ ಅಕ್ರಮ, ಸಕ್ರಮ ಕಟ್ಟಡ ಹಾಗೂ ಬಡಾವಣೆಗಳು ತಲೆ ಎತ್ತುತ್ತಿವೆ. ಅಭಿವೃದ್ಧಿ ಹೆಸರಿನಲ್ಲಿ ಚಾಮುಂಡಿ ಬೆಟ್ಟದ ಪರಿಸರಕ್ಕೆ ಧಕ್ಕೆ ತರುತ್ತಿದ್ದಾರೆ. ನೈಸರ್ಗಿಕವಾಗಿ ಯಥಾಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕು ಎಂದು ಪ್ರತಿಪಾದಿಸಿದರು. ಮಾಜಿ ಮೇಯರ್ ಶಿವಕುಮಾರ್, ಬಿಜೆಪಿ ಪ್ರಧಾನ ಕಾರ್ಯದರ್ಶಿ ಮೈ.ಪು. ರಾಜೇಶ್, ಮಾಧ್ಯಮ ಸಂಚಾಲಕ ಮಹೇಶ್‌ರಾಜ್ ಅರಸ್, ಎಸ್.ಟಿ. ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ರಾಮಕೃಷ್ಣ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮುಂಬೈನಂತೆ ಮೈಸೂರಲ್ಲೂ ರೆಡ್ ಲೈಟ್ ಏರಿಯಾ ಇದೆ!

ಮೈಸೂರಿನಲ್ಲಿ ಕಾನೂನು ಮತ್ತು ಸುವ್ಯವಸ್ಥೆ ತೀರಾ ಹದಗೆಟ್ಟಿದ್ದು, ಅಕ್ರಮ ಹಾಗೂ ಅನೈತಿಕ ಚಟುವಟಿಕೆಗಳು ವ್ಯಾಪಕವಾಗಿ ನಡೆಯುತ್ತಿವೆ. ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದ ಹಿಂದೆ ಇರುವ ಹಳ್ಳದ ಕೇರಿ ಪ್ರದೇಶಕ್ಕೆ ರೆಡ್ ಲೈಟ್ ಏರಿಯಾ ಎಂದು ಗೂಗಲ್‌ನಲ್ಲಿ ವಿವರಣೆ ಇದೆ ಎಂದು ನಗರ ಬಿಜೆಪಿ ಅಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಕಾನೂನು ಮತ್ತು ಸುವ್ಯವಸ್ಥೆಯ ವೈಫಲ್ಯ ಸೇರಿದಂತೆ ಹಲವು ವಿಚಾರಗಳ ಬಗ್ಗೆ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರಿಗೆ ಖುದ್ದು ವಿವರಣೆ ನೀಡಿದ್ದೇನೆ. ಬಹಿರಂಗವಾಗಿ ಹೇಳಲಾಗದ ಕೆಲವು ವಿಚಾರಗಳನ್ನು ಅವರಿಗೆ ತಿಳಿಸಿದ್ದೇನೆ. ಈಗಲಾದರೂ ಮೈಸೂರಿನಲ್ಲಿ ಅನೈತಿಕ ಹಾಗೂ ಅಕ್ರಮ ಚಟುವಟಿಕೆ ನಡೆಯದಂತೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಮೈಸೂರಿಗೆ ಇದೂವರೆಗೆ ಬಾಹ್ಯವಾದ ಯಾವುದೇ ಬೆದರಿಕೆಗಳು ಇರಲಿಲ್ಲ. ಆದರೆ ಅಂತಹ ಪರಿಸ್ಥಿತಿ ಈಗ ಎದುರಾಗಿದೆ. ಇದಕ್ಕೆ ಕಡಿವಾಣ ಹಾಕಬೇಕು, ಇಲ್ಲದಿದ್ದರೆ ಮೈಸೂರಿಗೆ ಮುಂದೊಂದು ದಿನ ದೊಡ್ಡ ಅಪಾಯ ಎದುರಾಗಲಿದೆ ಎಂದು ಎಚ್ಚರಿಸಿದರು.

ನಗರದ ಸಯ್ಯಾಜಿರಾವ್ ರಸ್ತೆಯ ಫುಟ್‌ಪಾತ್‌ನಲ್ಲಿ ಓಡಾಡಲು ಸಾಧ್ಯವಾಗದ ಪರಿಸ್ಥಿತಿ ಇದೆ. ಇಡೀ ಫುಟ್‌ಪಾತ್ ಅನ್ನು ವ್ಯಾಪಾರಸ್ಥರು ಅತಿಕ್ರಮಿಸಿಕೊಂಡಿದ್ದಾರೆ. ಬಾಡಿಗೆ, ತೆರಿಗೆ ಸೇರಿದಂತೆ ಯಾವುದೇ ಖರ್ಚು–ವೆಚ್ಚವಿಲ್ಲದೆ ಸರ್ಕಾರಿ ಜಾಗದಲ್ಲಿ ರಾಜಾರೋಷವಾಗಿ ವ್ಯಾಪಾರ ಮಾಡುತ್ತಿದ್ದಾರೆ ಎಂದು ನಾಗೇಂದ್ರ ಆಪಾದಿಸಿದರು.

ಡಿ.30ರಂದು ವಿದ್ಯುತ್ ವ್ಯತ್ಯಯ

ಮೈಸೂರು,ಡಿ.27– ಆರ್.ಕೆ.ನಗರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಡಿ.30ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ತೊಣಚಿಕೊಪ್ಪಲು, ಹರಿಹರ ಹೋಟೆಲ್, ಅಮ್ಮ ಕಾಂಪ್ಲೆಕ್ಸ್, ನ್ಯೂ ಕಾಂತರಾಜ ಅರಸ್ ರಸ್ತೆ, ಆರ್.ಟಿ.ಟಿ.ಸಿ ಕಾಂಪ್ಲೆಕ್ಸ್, ಅರವಿಂದನಗರ, ಕುವೆಂಪುನಗರ ಎಂ–ಬ್ಲಾಕ್, ಎನ್–ಬ್ಲಾಕ್, ಕೆ ಬ್ಲಾಕ್, ಕುವೆಂಪುನಗರ ಕೆ.ಹೆಚ್.ಬಿ ಕಾಲೋನಿ, ಅನಿಕೇತನ ರಸ್ತೆ, ಪಡುವಣ ರಸ್ತೆ, ಸರಸ್ವತಿಪುರಂ 1 ರಿಂದ 4ನೇ ಮುಖ್ಯರಸ್ತೆ, ವಿಶ್ವಮಾನವ ಜೋಡಿ ರಸ್ತೆ, ಪಂಚಮಂತ್ರ ರಸ್ತೆ, ಎಂ ಬ್ಲಾಕ್ ಲೈಬ್ರರಿ, ಪಾಂಡುರಂಗ ದೇವಸ್ಥಾನ, ವಿವೇಕಾನಂದ ವೃತ್ತ, ವಿವೇಕಾನಂದನಗರ, ಇಡಬ್ಲೂಎಸ್ ಗಣಪತಿ ದೇವಸ್ಥಾನ, ಎಂ.ಎಲ್.ಎ ವಿಶ್ವನಾಥ್ ಮನೆ ಸುತ್ತಮುತ್ತ, ಕೆನರಾ ಬ್ಯಾಂಕ್, ಬಿ.ಜಿ.ಎಸ್ ಬಾಲ ಜಗನ್ನಾಥ ಶಾಲೆ, ಎಸ್‌ಬಿಎಂ ಕಾಲೋನಿ, ಶಿವ ಟೆಂಪಲ್, ಸೂರ್ಯ ಲೇಔಟ್, ನಿಮಿಷಾಂಬ ಲೇಔಟ್, ಕಂದಾಯ ನಗರ 3ನೇ ಹಂತ, ಗಿರಿಯಪ್ಪ ನಿಂಗೇಗೌಡ ಲೇಔಟ್, ಟೆಂಪಲ್ ಬೆಲ್ ಲೇಔಟ್, ಮಹಾಲಿಂಗೇಶ್ವರ ದೇವಸ್ಥಾನ, ಕಬಿನಿ ಲೇಔಟ್, ಎಸ್‌ಎಂಎಸ್ ಸ್ಕೂಲ್ ಲೇಔಟ್, ಕಂದಾಯ ಲೇಔಟ್, ಹಂಸ ಲೇಔಟ್ 1ನೇ ಹಂತ, ಗಗನ ಶೇಖರ ಲೇಔಟ್, ಹುಲಿನಾರಾಯಣಪ್ಪ ಲೇಔಟ್, ಭವ್ಯ ಭಾರತಿ ಲೇಔಟ್, ಎಂಡಿಸಿಸಿ ಬ್ಯಾಂಕ್ ಎಂಪ್ಲಾಯಿಸ್ ಲೇಔಟ್, ಟಿ.ಕೆ ಸ್ಟುಡಿಯೋ ಲೇಔಟ್, ಕಂದಾಯ ಲೇಔಟ್ 2ನೇ ಹಂತ, ತಪೋವನ, ಅನ್ನಪೂರ್ಣ ಲೇಔಟ್, ಎಂ.ಡಿ.ಸಿ.ಸಿ ಲೇಔಟ್, ಶ್ರೀರಾಂಪುರ, ಪ್ರೀತಿ ಲೇಔಟ್, ಡಿವಿಜಿ ಲೇಔಟ್, ಟಿ.ಕೆ.ರಾಮ್ ಲೇಔಟ್, ಚಿದಾನಂದ ಮತ್ತು ರಕ್ಷಾ ಲೇಔಟ್, ಆರ್.ಕೆ.ನಗರ ಕೆ ಬ್ಲಾಕ್, ವಾಸು ಲೇಔಟ್, ಮುಡಾ ಎಂಪ್ಲಾಯಿಸ್ ಲೇಔಟ್, ಮಾಧವ ಪಾರ್ಕ್, ಇ ಮತ್ತು ಎಫ್ ಬ್ಲಾಕ್, ಜನತಾನಗರ, ಶಾರದಾದೇವಿ ನಗರ, ನಿವೇದಿತಾನಗರ, ಬಸವೇಶ್ವರನಗರ, ಗಂಗೋತ್ರಿ ಹುಡ್ಕೋ ಲೇಔಟ್, ಸಬ್ ರಿಜಿಸ್ಟ್ರಾರ್ ಆಫೀಸ್ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಅಕ್ರಮ ನಿವೇಶನ ಹಂಚಿಕೆಯ ಕ್ರಯಪತ್ರವನ್ನು ಸಹಕಾರಿ ಸಂಘಗಳ ಹೆಚ್ಚುವರಿ ರಿಜಿಸ್ಟ್ರಾರ್ ರದ್ದುಪಡಿಸಬಹುದು

ಹೈಕೋರ್ಟ್ ಮಹತ್ವದ ತೀರ್ಪು

ಬೆಂಗಳೂರು: ಗೃಹ ನಿರ್ಮಾಣ ಸಹಕಾರ ಸಂಘ ನಿವೇಶನ ಹಂಚಿಕೆಯಲ್ಲಿ ಅಕ್ರಮವಾಗಿದ್ದ ಸಂದರ್ಭಗಳಲ್ಲಿ ಸಹಕಾರಿ ಸಂಘಗಳ ಹೆಚ್ಚುವರಿ ನಿಬಂಧಕರಿಗೆ ಅಕ್ರಮ ಹಂಚಿಕೆಯ ಕ್ರಯಪತ್ರ ರದ್ದುಗೊಳಿಸುವ ಅಧಿಕಾರವಿದೆ ಎಂದು ಹೈಕೋರ್ಟ್ ತೀರ್ಪು ನೀಡಿದೆ. ಬೆಂಗಳೂರು ದಕ್ಷಿಣದ ಚನ್ನಸಂದ್ರದಲ್ಲಿರುವ ಬಿಇಎಂಎಲ್ ಲೇಔಟ್ ವಸತಿ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಈ ಮಹತ್ವದ ತೀರ್ಪು ನೀಡಿದ್ದು, ನೂರಾರು ಗೃಹ ನಿರ್ಮಾಣ ಸಹಕಾರಿ ಸಂಘಗಳ ಪ್ರಕರಣಗಳ ಮೇಲೆ ಈ ತೀರ್ಪು ಗಂಭೀರ ಪರಿಣಾಮ ಬೀರಲಿದೆ.

ಮಾರಾಟ ಕ್ರಯಪತ್ರ (ಸೇಲ್ ಡೀಡ್) ಆದ ನಂತರ ರಿಜಿಸ್ಟ್ರಾರ್‌ಗೆ ಹಸ್ತಕ್ಷೇಪ ಮಾಡುವ ಯಾವುದೇ ಅಧಿಕಾರವಿಲ್ಲವೆಂದು ಆಕ್ಷೇಪಿಸಿ ನಗರದ ಸುರೇಶ್ ಎಂಬುವರು ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಆದೇಶ ಮಾಡಿದೆ.

ಸೇಲ್ ಡೀಡ್ ರದ್ದುಪಡಿಸುವ ಅಧಿಕಾರ ರಿಜಿಸ್ಟ್ರಾರ್‌ಗೆ ಇದೆ: ನಿವೇಶನ ಹಂಚಿಕೆ ಅಕ್ರಮವೆಂದು ಕಂಡುಬಂದರೆ ರಿಜಿಸ್ಟ್ರಾರ್ ಅಂತಹ ಹಂಚಿಕೆಯನ್ನು ರದ್ದುಗೊಳಿಸಬಹುದು ಮತ್ತು ಅನಂತರ ಆ ಮಾಹಿತಿಯನ್ನು ಮುಂದಿನ ಕ್ರಮಕ್ಕಾಗಿ ಸ್ಥಳೀಯ ಸಬ್ ರಿಜಿಸ್ಟ್ರಾರ್ ಜತೆ ಹಂಚಿಕೊಳ್ಳಬಹುದು. ಆದರೆ, ನಿಯಮಗಳನ್ನು ಪಾಲನೆ ಮಾಡಬೇಕಷ್ಟೇ ಎಂದು ಕೋರ್ಟ್ ಆದೇಶದಲ್ಲಿ ಸ್ಪಷ್ಟಪಡಿಸಿದೆ. ಅಕ್ರಮ ಹಂಚಿಕೆ ರದ್ದತಿಯ ನಂತರ ಅಗತ್ಯವಿರುವ ಮುಂದಿನ ಕ್ರಮ ಜರುಗಿಸಲು ಸಂಬಂಧಪಟ್ಟ ರಿಜಿಸ್ಟ್ರಾರ್, ಆಯಾ ಪ್ರದೇಶ ವ್ಯಾಪ್ತಿಯ ಸಬ್ ರಿಜಿಸ್ಟ್ರಾರ್‌ಗೆ ಅಗತ್ಯ ಸೂಚನೆಯನ್ನು ಕಳುಹಿಸಬಹುದು. ಹಾಗೆ ಮಾಡುವ ಮೊದಲು ಅಕ್ರಮ ಹಂಚಿಕೆಯನ್ನು ಯಾರ ಪರವಾಗಿ ಮಾಡಲಾಗಿದೆಯೋ ಅವರ ವಿಚಾರಣೆ ನಡೆಸಬೇಕಾಗುತ್ತದೆ. ಕರ್ನಾಟಕ ಸಹಕಾರಿ ಸಂಘಗಳ (ಕೆಸಿಎಸ್) ಕಾಯ್ದೆಯ ಸೆಕ್ಷನ್ 70ರ ಅಡಿಯಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರ್ ಅವರ ಅಧಿಕಾರ ಅಪರಿಮಿತವಾಗಿದೆ ಎಂದು ಹೈಕೋರ್ಟ್ ಹೇಳಿದೆ.

ಕೆಸಿಎಸ್ ಕಾಯ್ದೆ, ಕೆಸಿಎಸ್ ನಿಯಮಗಳು, ಸೊಸೈಟಿಯ ಬೈಲಾಗಳು ಅಥವಾ ಅಂಥದೇ ಉಲ್ಲಂಘನೆಯ ಆರೋಪವಿಲ್ಲದಿದ್ದಾಗ ಸದಸ್ಯರು ಮತ್ತು ಮೂರನೇ ವ್ಯಕ್ತಿಯ ನಡುವಿನ ವಹಿವಾಟು ಸಂಬಂಧ ಸೆಕ್ಷನ್ 70ರ ಅಡಿಯಲ್ಲಿ ನ್ಯಾಯವ್ಯಾಪ್ತಿಯನ್ನು ಪರಿಗಣಿಸಲಾಗುವುದಿಲ್ಲ ಎಂದಿದೆ.

ಡಿ.30ಕ್ಕೆ ಬೆಂಗಳೂರಿನ ಟಿಟಿಡಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ ಸಂಭ್ರಮ: ಭಕ್ತರಿಗೆ ವಿಶೇಷ ದರ್ಶನ ವ್ಯವಸ್ಥೆ



ಬೆಂಗಳೂರು, ಡಿ.27 –ಪವಿತ್ರ ವೈಕುಂಠ ಏಕಾದಶಿ ದಿನದ ಪ್ರಯುಕ್ತ ಬೆಂಗಳೂರಿನ ವೈಯ್ಯಾಲಿಕಾವಲ್‌ನ 16ನೇ ಕ್ರಾಸ್‌ನಲ್ಲಿರುವ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದ ಟಿಟಿಡಿ ಮಾಹಿತಿ ಕೇಂದ್ರದಲ್ಲಿ ಡಿ.30 ರಂದು ಭಕ್ತರಿಗೆ ಶ್ರೀವಾರಿ ದರ್ಶನಕ್ಕಾಗಿ ವಿಶೇಷ ವ್ಯವಸ್ಥೆ ಮಾಡಲಾಗಿದೆ.

ಸ್ಥಳೀಯ ದೇವಸ್ಥಾನದ ವ್ಯವಸ್ಥೆಗಳ ಬಗ್ಗೆ ಮಾಹಿತಿ ನೀಡಿದ ಟಿಟಿಡಿ ಬೆಂಗಳೂರು ಸ್ಥಳೀಯ ಸಲಹಾ ಸಮಿತಿ ಅಧ್ಯಕ್ಷ ಕೆ.ವೀರಾಂಜನೇಯಲು, ವೈಕುಂಠ ಏಕಾದಶಿಯಂದು ಭಕ್ತರಿಗೆ ಸುಗಮ ಮತ್ತು ಅನುಕೂಲಕರ ದರ್ಶನ ಕಲ್ಪಿಸುವ ನಿಟ್ಟಿನಲ್ಲಿ ಸಮಿತಿಯು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಅಂದು ಮಧ್ಯರಾತ್ರಿ 1.35ರಿಂದ ಮರುದಿನ ಬೆಳಗ್ಗೆ 11.45ರವರೆಗೆ ನಿರಂತರ ದರ್ಶನಕ್ಕೆ ಅವಕಾಶವಿರುತ್ತದೆ. ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಸರತಿ ಸಾಲಿನ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಪವಿತ್ರ ದಿನದಂದು ಆಗಮಿಸುವ ಭಕ್ತಾದಿಗಳಿಗೆ ನಿರಂತರ ಅನ್ನಪ್ರಸಾದ ವಿನಿಯೋಗವಿರುತ್ತದೆ ಎಂದರು.

ದೇವಸ್ಥಾನದ ಆವರಣದಲ್ಲಿ ಮುಂಜಾನೆ 2 ಗಂಟೆಯಿಂದ ಶ್ರೀವಾರಿ ಲಡ್ಡು ಪ್ರಸಾದ ಮಾರಾಟವನ್ನು (ಪ್ರತಿ ಲಡ್ಡುವಿಗೆ 50 ರೂ.) ಆಯೋಜಿಸಲಾಗಿದ್ದು, ದಾಸ್ತಾನು ಇರುವವರೆಗೂ ಇದು ಲಭ್ಯವಿರುತ್ತದೆ. ಭಕ್ತರ ಅನುಕೂಲಕ್ಕಾಗಿ 2026ರ ಟಿಟಿಡಿ ಡೈರಿಗಳು, ಕ್ಯಾಲೆಂಡರ್‌ಗಳು, ಅಗರಬತ್ತಿ ಮತ್ತು ಇತರೆ ಟಿಟಿಡಿ ಉತ್ಪನ್ನಗಳ ಮಾರಾಟ ಮಳಿಗೆಯನ್ನು ಸಹ ತೆರೆಯಲಾಗುವುದು. ಈ ಬಾರಿ 70 ಸಾವಿರ ಭಕ್ತರು ಆಗಮಿಸುವ ನಿರೀಕ್ಷೆಯಿದೆ. ತಿರುಮಲದ ಸಿದ್ಧತೆಗಳ ಕುರಿತು ಮಾತನಾಡಿದ ಟಿಟಿಡಿ ಮಂಡಳಿ ಸದಸ್ಯ ಎಸ್.ನರೇಶ್‌ಕುಮಾರ್, ತಿರುಮಲದಲ್ಲಿಯೂ ವೈಕುಂಠ ಏಕಾದಶಿಯ ಪ್ರಯುಕ್ತ ಬೃಹತ್ ಮಟ್ಟದ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಈ ಬಾರಿ ವೈಕುಂಠ ದ್ವಾರದ ಮೂಲಕ ಪ್ರತಿದಿನ ಸುಮಾರು 80,000 ಕ್ಕೂ ಹೆಚ್ಚು ಭಕ್ತರಿಗೆ ದರ್ಶನ ಭಾಗ್ಯವನ್ನು ಕಲ್ಪಿಸಲು ಟಿಟಿಡಿ ಆಡಳಿತ ಮಂಡಳಿ ಯೋಜಿಸಿದೆ. ಸಾಮಾನ್ಯ ಭಕ್ತರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಕಾಯುವ ಸಮಯದಲ್ಲಿ ಅನ್ನಪ್ರಸಾದ ಮತ್ತು ಪಾನೀಯಗಳ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ. ಭಕ್ತರ ಸುರಕ್ಷತೆ ಮತ್ತು ಸೌಕರ್ಯಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ವಿವರಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳು: ಬೆಂಗಳೂರಿನ ಹಿಂದೂ ಧರ್ಮ ಪರಿರಕ್ಷಣಾ ಟ್ರಸ್ಟ್ ವತಿಯಿಂದ ದಿನವಿಡೀ ದೇವಸ್ಥಾನದ ಆವರಣದಲ್ಲಿ ಭಕ್ತಿ ಸಂಗೀತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಬೆಂಗಳೂರಿನ ಸಮಸ್ತ ಭಕ್ತಾದಿಗಳು ಈ ವೈಕುಂಠ ಏಕಾದಶಿ ಆಚರಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀ ವೆಂಕಟೇಶ್ವರ ಸ್ವಾಮಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕೆಂದು ಟಿಟಿಡಿ ಅಧಿಕಾರಿಗಳು ಕೋರಿದ್ದಾರೆ.

ಉತ್ತರಪ್ರದೇಶದ ಸ್ವಗ್ರಾಮಕ್ಕೆ ಸಲೀಂ ದೇಹ ಕೊಂಡೊಯ್ದ ಕುಟುಂಬ



ಸಲೀಂ

ಮೈಸೂರು, ಡಿ.27(ಎಂಟಿವೈ)– ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ಮೃತಪಟ್ಟ ಬಲೂನ್ ವ್ಯಾಪಾರಿ ಸಲೀಂ ದೇಹವನ್ನು ಮರಣೋತ್ತರ ಪರೀಕ್ಷೆ ಬಳಿಕ ಶನಿವಾರ ಮಧ್ಯಾಹ್ನ ಕುಟುಂಬಸ್ಥರು ಪಡೆದು ಉತ್ತರ ಪ್ರದೇಶದ ಸ್ವಗ್ರಾಮಕ್ಕೆ ಕೊಂಡೊಯ್ದರು.

ಮೈಸೂರಲ್ಲಿ ಕಳೆದ ಹಲವು ತಿಂಗಳಿಂದ ಹೀಲಿಯಂ ಗ್ಯಾಸ್ ಬಲೂನು ಮಾರಾಟ ಮಾಡುತ್ತಿದ್ದ ಉತ್ತರ ಪ್ರದೇಶದ ಕನೋಜ್ ಜಿಲ್ಲೆಯ ಶುಕ್ಲನ್‌ಪೂರ್ವಾ ಗ್ರಾಮದ ಸಲೀಂ (40) ಗುರುವಾರ(ಡಿ.25) ರಾತ್ರಿ 8.30ರಲ್ಲಿ ಅರಮನೆಯ ಜಯ ಮಾರ್ತಾಂಡ ದ್ವಾರದ ಬಳಿ ಬಿ.ಎನ್. ರಸ್ತೆ ಬದಿ ಬಲೂನು ಮಾರಾಟ ಮಾಡುತ್ತಿದ್ದಾಗ ತನ್ನೊಂದಿಗೆ ಇಟ್ಟುಕೊಂಡಿದ್ದ ಹೀಲಿಯಂ ಸಿಲಿಂಡರ್ ಸ್ಫೋಟಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದರು. ಗುರುವಾರ ರಾತ್ರಿಯಿಂದ ಸಲೀಂ ದೇಹವನ್ನು ಮೈಸೂರು ಮೆಡಿಕಲ್ ಕಾಲೇಜಿನ ಶವಾಗಾರದಲ್ಲಿರಿಸಲಾಗಿತ್ತು. ಪ್ರಾಥಮಿಕ ತನಿಖೆ ಪೂರ್ಣಗೊಂಡ ಬಳಿಕ ಶನಿವಾರ ಸಲೀಂ ಮೃತದೇಹವನ್ನು ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಆಂಬುಲೆನ್ಸ್ ಮೂಲಕ ಶವವನ್ನು ಉತ್ತರ ಪ್ರದೇಶಕ್ಕೆ ಕೊಂಡೊಯ್ದರು.

ಸಲೀಂ ಜೊತೆ ಮೂವರಿದ್ದರು: ಸಲೀಂನೊಂದಿಗೆ ಸಂಬಂಧಿಗಳಾದ ನಿಜಾಂ, ರಿಜ್ವಾನ್ ಹಾಗೂ ಸ್ನೇಹಿತ ರಾಜು ಇದ್ದರು. ಈ ನಾಲ್ವರು ಉತ್ತರ ಪ್ರದೇಶದಿಂದ ಮೈಸೂರಿಗೆ ಬಂದು ವಿವಿಧೆಡೆ ಹೀಲಿಯಂ ಗ್ಯಾಸ್ ಬಲೂನು ಸೇರಿದಂತೆ ವಿವಿಧ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು. ಹೀಲಿಯಂ ಸಿಲಿಂಡರ್ ಸ್ಫೋಟದ ಬಳಿಕ ಮೂವರನ್ನು ವಶಕ್ಕೆ ಪಡೆದಿದ್ದ ಪೊಲೀಸರು ತೀವ್ರ ವಿಚಾರಣೆ ಗೊಳಪಡಿಸಿದ್ದರು. ಕೆಲ ಮಾಹಿತಿ ಪಡೆದ ಬಳಿಕ ಇಂದು ಸಲೀಂ ದೇಹವನ್ನು ಸ್ವಗ್ರಾಮಕ್ಕೆ ಕೊಂಡೊಯ್ಯಲು ಅವಕಾಶ ಮಾಡಿಕೊಟ್ಟರು. ಕೆಲವರು ಪೊಲೀಸರ ಅನುಮತಿ ಪಡೆದು ಸಲೀಂ ದೇಹ ಸಾಗಿಸಲು ಆಂಬುಲೆನ್ಸ್ ವ್ಯವಸ್ಥೆ ಮಾಡಿದ್ದಾರೆ ಎಂದು ತಿಳಿದು ಬಂದಿದೆ.

ಒಂದೇ ಕೊಠಡಿಯಲ್ಲಿ ವಾಸ್ತವ್ಯ: ಬಲೂನು ವ್ಯಾಪಾರಿ ಸಲೀಂ ಸುನ್ನಿ ಚೌಕದ ಲಾಡ್ಜ್‌ವೊಂದರಲ್ಲಿ ನಿಜಾಂ, ರಿಜ್ವಾನ್ ಮತ್ತು ರಾಜು ಜೊತೆ ನೆಲೆಸಿದ್ದು ಬೆಳಕಿಗೆ ಬಂದಿದೆ. ಪ್ರತಿ ದಿನ ಲಾಡ್ಜ್‌ನ ಕೊಠಡಿಗೆ 100 ರೂ. ಬಾಡಿಗೆ ನೀಡುತ್ತಿದ್ದ ಎಂದು ವಿಚಾರಣೆ ವೇಳೆ ತಿಳಿದು ಬಂದಿದೆ.

ವಿಬಿ–ಜಿ–ರಾಮ್–ಜಿ ಮಸೂದೆ ಜಾರಿ ಮೂಲಕ ಎನ್‌ಡಿಎ ಸರ್ಕಾರ
ಗ್ರಾಮೀಣರ ಜೀವನೋಪಾಯ ಗ್ಯಾರಂಟಿ ಕಸಿದುಕೊಂಡಿದೆ



●ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಆರೋಪ ●ಈ ಮಸೂದೆ ಮೂಲಕ ಅವರೇಳುವಂತೆ ಯಾವ ಸುಧಾರಣೆಯೂ ಆಗಿಲ್ಲ ●ರಾಜ್ಯಗಳಿಗೆ ಆರ್ಥಿಕ ಹೊರೆ ಜೊತೆಗೆ ಹತ್ತು–ಹಲವು ಅಡ್ಡಿ

ಬೆಂಗಳೂರು,ಡಿ.27(ಕೆಎಂಶಿ)–ಕೇಂದ್ರದ ಎನ್‌ಡಿಎ ಸರ್ಕಾರ ಸಂಸತ್‌ನಲ್ಲಿ ಯಾವುದೇ ಚರ್ಚೆ ಇಲ್ಲದೇ ವಿಬಿ–ಜಿ–ರಾಮ್–ಜಿ ಮಸೂದೆ ಅಂಗೀಕರಿಸಿದ್ದು, ಮನರೇಗಾ ಯೋಜನೆ ಕಾಯ್ದೆಯಲ್ಲಿ ಸುಧಾರಣೆಯನ್ನೇನೂ ಮಾಡಿಲ್ಲ, ಸರಳೀಕರಣವನ್ನೂ ಮಾಡಿಲ್ಲ ಎಂದು ಮಾಹಿತಿ ತಂತ್ರಜ್ಞಾನ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದ್ದಾರೆ.

ಕಳೆದ ಸುಮಾರು 20 ವರ್ಷಗಳಿಂದ ಉದ್ಯೋಗ ಖಾತರಿ ಯೋಜನೆಯು ಗ್ರಾಮೀಣ ಪ್ರದೇಶದಲ್ಲಿ ಜೀವನೋಪಾಯದ ಗ್ಯಾರಂಟಿ ನೀಡಿತ್ತು, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಈ ಗ್ಯಾರಂಟಿ ಕಸಿದುಕೊಂಡಿದೆ, ಈಗ ಇದು ಬೇಡಿಕೆ ಆಧಾರಿತ, ವಿತರಣೆ ಆಧಾರಿತ ಯೋಜನೆಯಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಕೇಂದ್ರ ಸರ್ಕಾರ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡಿತ್ತು, ಈಗ ಇದು ಕಾಯ್ದೆಯಾಗಿ ಉಳಿಯದೆ, ಇತರೆ ಸರ್ಕಾರಿ ಯೋಜನೆಗಳಲ್ಲಿ ಒಂದಾಗಿದೆ ಎಂದರು.

ಸಾಂವಿಧಾನಿಕ ಹಕ್ಕು ಮೊಟಕು: ವಿಬಿ–ಜಿ–ರಾಮ್–ಜಿ ಕಾಯಿದೆ ಸಂವಿಧಾನಿಕ ಹಕ್ಕು ಮೊಟಕುಗೊಳಿಸಿದೆ. ಜೀವನೋಪಾಯದ ಹಕ್ಕು, ಪಂಚಾಯತ್‌ಗಳ ಹಕ್ಕು ಕಸಿದಿದೆ, ರಾಜ್ಯ ಸರ್ಕಾರಗಳ ಮೇಲೆ ಆರ್ಥಿಕ ಹೊರೆ ಹಾಕಿದೆ. ಮನ್‌ರೇಗಾದಲ್ಲಿ ಉದ್ಯೋಗದ ಹಕ್ಕು ಎಂದು ಇತ್ತು. ಹೊಸ ಯೋಜನೆಯಲ್ಲಿ ಕೇಂದ್ರ ಸರ್ಕಾರ ಅನುಮತಿ ನೀಡಿದರೆ ಮಾತ್ರ ಉದ್ಯೋಗ ಎಂಬುದಾಗಿ ತಿದ್ದುಪಡಿ ಮಾಡಲಾಗಿದೆ, ಮಸೂದೆಯ ಸೆಕ್ಷನ್ 5ರ ಪ್ರಕಾರ ಕೇಂದ್ರ ಸರ್ಕಾರ, ರಾಜ್ಯಗಳಿಗೆ ನೀಡುವ ಅನುದಾನದ ಮೇಲೆ ಕೆಲಸ ಮಾಡಬೇಕಾಗುತ್ತದೆ. ಸೆಕ್ಷನ್ 5(1)ರಲ್ಲಿ ಕೇಂದ್ರ ಸರ್ಕಾರ ಅಧಿಸೂಚನೆಗೊಳಿಸಿದ ಪ್ರದೇಶಗಳಲ್ಲಿ ಕಾಮಗಾರಿಗೆ ಅನುದಾನ ನೀಡಲಿದ್ದು, ಆ ಭಾಗದ ಉದ್ಯೋಗ ಕಾರ್ಡ್ ಹೊಂದಿರುವವರು ಮಾತ್ರ ಕೆಲಸ ಮಾಡಬಹುದಾಗಿದೆ. ಈ ಮೊದಲು ಮನರೇಗಾ ಉದ್ಯೋಗ ಕಾರ್ಡ್ ಹೊಂದಿದ್ದವರು, ಎಲ್ಲಿಗಾದರೂ ಹೋಗಿ ಕೆಲಸ ಮಾಡುವ ಅವಕಾಶವಿತ್ತು, ಈಗ ಈ ಅವಕಾಶ ಕಸಿದುಕೊಳ್ಳಲಾಗಿದೆ.

ಅಂದಿನ ಉದ್ಯೋಗವಿಲ್ಲ!: ಮನ್‌ರೇಗಾ ಯೋಜನೆಯಲ್ಲಿ ವರ್ಷದ 365 ದಿನಗಳಲ್ಲಿ ಯಾವಾಗಲಾದರೂ ಉದ್ಯೋಗ ಮಾಡಬಹುದಾಗಿತ್ತು, ಈಗಿನ ಮಸೂದೆಯಲ್ಲಿ ಕೃಷಿ ಚಟುವಟಿಕೆ ಹೆಚ್ಚಾಗಿರುವ (ಕಟಾವು ವೇಳೆ) 60 ದಿನ ಈ ಯೋಜನೆಯಡಿ ಉದ್ಯೋಗ ಮಾಡುವಂತಿಲ್ಲ ಎಂದು ಸೆಕ್ಷನ್ 6 (1)ರಲ್ಲಿ ತಿಳಿಸಿದೆ. ಹೊಸ ಕಾಯ್ದೆಯಡಿ ಕಟಾವು ವೇಳೆ ಕೃಷಿ ಕಾರ್ಮಿಕರು, ಜಮೀನುದಾರರು ಕೊಟ್ಟಷ್ಟು ಕೂಲಿಗೆ ದುಡಿಯಬೇಕಾಗಿದೆ, ಕನಿಷ್ಠ ವೇತನದ ರಕ್ಷಣೆ ಇಲ್ಲ, ಕೃಷಿ ಕಾರ್ಮಿಕರು ಸಿಗುತ್ತಿಲ್ಲ ಎಂಬುದಕ್ಕೆ ಕೇಂದ್ರ ಸರ್ಕಾರದ ಬಳಿ ಯಾವ ದಾಖಲೆ, ಅಂಕಿ ಅಂಶಗಳಿವೆ ಎಂದು ಪ್ರಶ್ನಿಸಿದರು.

> ಕೇಂದ್ರ ಸರ್ಕಾರ ಮಹಾತ್ಮ ಗಾಂಧಿ ಹೆಸರು ತೆಗೆದಿದೆ ಎಂಬ ವಿಚಾರಕ್ಕೆ ಮಾತ್ರ ವಿರೋಧ ಮಾಡುತ್ತಿಲ್ಲ, ಗ್ರಾಮೀಣ ಮಟ್ಟದಲ್ಲಿ ಉದ್ಯೋಗ ಸೃಷ್ಟಿ ಮಾಡಿ, ಪಂಚಾಯತ್ ಮಟ್ಟ ಬಲಪಡಿಸಿ, ಗ್ರಾಮಗಳ ಆಸ್ತಿ ಸೃಜನೆ ಮಾಡಿ. ಕೃಷಿ ಕಾನೂನು ಹಿಂಪಡೆದ ರೀತಿ ಇದನ್ನೂ ಹಿಂಪಡೆಯಲಿದ್ದಾರೆ, ಹಳ್ಳಿಯಿಂದ ದಿಲ್ಲಿವರೆಗೆ ಜನ ಬೀದಿಗಿಳಿಯುತ್ತಾರೆ, ನಮ್ಮ ಸರ್ಕಾರ ಕೇಂದ್ರದ ಜನವಿರೋಧಿ ನೀತಿ ಖಂಡಿಸುತ್ತದೆ.
> –ಪ್ರಿಯಾಂಕ್ ಖರ್ಗೆ, ಸಚಿವ

ಅನುದಾನದಲ್ಲಿ ಕೇಂದ್ರ–ರಾಜ್ಯದ ಅನುಪಾತ 60:40 ಆಗಿದೆ, ಪಂಚಾಯತ್ ಅಧಿಸೂಚನೆ ನಂತರ ಕೇಂದ್ರ ಸರ್ಕಾರದ ಮಾನದಂಡಗಳ ಅನುಸಾರ ಕಾಮಗಾರಿ ನಡೆಯಬೇಕು. ಪಾರದರ್ಶಕತೆಗೆ ತಂತ್ರಜ್ಞಾನ ಅಳವಡಿಸಿಕೊಂಡಾಗ ಯೋಜನೆ ಸಶಕ್ತವಾಗಬೇಕು, ಆದರೆ, ಕೇಂದ್ರ ಸರ್ಕಾರ ಬಯೋಮೆಟ್ರಿಕ್, ಜಿಯೋ ಸ್ಪೆಷಲ್ ತಂತ್ರಜ್ಞಾನ, ಜಿಯೋ ಮ್ಯಾಪಿಂಗ್, ಎಐ ಸೇರಿದಂತೆ ಅನೇಕ ತಂತ್ರಜ್ಞಾನ ಅಳವಡಿಸಿದೆ. ತಂತ್ರಜ್ಞಾನ ಹೆಸರಿನಲ್ಲಿ ಜನರನ್ನು ಉದ್ಯೋಗದಿಂದ ದೂರ ಇಡುವ ಪ್ರಯತ್ನ ಇದಾಗಿದೆ, ಕೆಲವು ರಾಜ್ಯಗಳಲ್ಲಿ ಡಿಜಿಟಲ್ ಲಿಂಕ್ ಆಗಿಲ್ಲ ಕೆಲವು ರಾಜ್ಯಗಳಲ್ಲಿ 63% ಕಾರ್ಮಿಕರಿಗೆ ವೇತನವೇ ಸಿಕ್ಕಿಲ್ಲ, 16.6%ರಷ್ಟು ಬೇಡಿಕೆ ಕಡಿಮೆಯಾಗಿದೆ, ಇದು ಗ್ರಾಮೀಣ ಜನರ ಜೀವನೋಪಾಯ ಮಾದರಿಯೇ ಎಂದರು.

ಸೆಕ್ಷನ್ 21 (2)ರಲ್ಲಿ ಗುತ್ತಿಗೆದಾರರ ಬಳಸಿ ಕಾಮಗಾರಿಗೆ ಅವಕಾಶ ಕಲ್ಪಿಸಲಾಗಿದೆ, ಮನರೇಗಾ ಯೋಜನೆಯಲ್ಲಿ ಗುತ್ತಿಗೆದಾರ ಎಂಬ ಹೆಸರೇ ಇರಲಿಲ್ಲ. ಮನ್‌ರೇಗಾದಲ್ಲಿ ಎಲ್ಲಾ ಪಂಚಾಯತ್‌ಗೂ ಅನುದಾನ ಬರುತ್ತಿತ್ತು ವಿಬಿ–ಜಿ–ರಾಮ್–ಜಿ ಯೋಜನೆಯಡಿ ಅಧಿಸೂಚನೆಗೊಂಡ ಪಂಚಾಯತ್‌ಗಳಿಗೆ ಮಾತ್ರ ಅನುದಾನ ಬರುತ್ತದೆ. ಈ ವಿಚಾರದಲ್ಲಿ ಒಕ್ಕೂಟ ವ್ಯವಸ್ಥೆ ನಿಯಮ ಉಲ್ಲಂಘಿಸಿದೆ, ಕೇಂದ್ರ ಸರ್ಕಾರಕ್ಕೆ ಕನ್ನಡಿಗರ ದುಡಿಮೆ, ಬೆವರು, ತೆರಿಗೆ, ಸಾಮರ್ಥ್ಯ, ಪ್ರತಿಭೆ ಮಾತ್ರ ಬೇಕು, ವಿಕಸಿತ ಭಾರತದ ಕನಸನ್ನು ಕನ್ನಡಿಗರು ನನಸು ಮಾಡಬೇಕು, ನಮಗೆ ಪ್ರತಿಯಾಗಿ ಸಿಗುವುದು ಏನು ಎಂದರು. ಸಂವಿಧಾನದ ಆರ್ಟಿಕಲ್ 280 ಪ್ರಕಾರ ಹಣಕಾಸು ಆಯೋಗ ರಾಜ್ಯಗಳಿಂದ ಬಂದ ಆದಾಯವನ್ನು ವಿವಿಧ ರಾಜ್ಯಗಳಿಗೆ ಮರು ಹಂಚಿಕೆ ಮಾಡುತ್ತದೆ, ಪಂಚಾಯತ್, ಮುನ್ಸಿಪಲ್, ನಗರ ಸ್ಥಳೀಯ ಸಂಸ್ಥೆಗಳ ಬೇಡಿಕೆ ಅನುಸಾರ ಹಂಚಿಕೆ ಮಾಡುವ ಜವಾಬ್ದಾರಿ ಹೊಂದಿದೆ. ವಿಬಿ–ಜಿ–ರಾಮ್–ಜಿ ಯೋಜನೆಯಿಂದ ಗ್ರಾಮೀಣ ಭಾಗದಲ್ಲಿ ನಿರುದ್ಯೋಗ ಸಮಸ್ಯೆಯಾಗಲಿದೆ, ಕನಿಷ್ಠ ವೇತನ ಮರೆಮಾಚಿ ಶೋಷಣೆ ಆರಂಭವಾಗಲಿದೆ, ಈಗಿರುವ 58% ಮಹಿಳೆಯರ ಔದ್ಯೋಗಿಕ ಭಾಗವಹಿಸುವಿಕೆ ಕ್ರಮೇಣ ಕಡಿಮೆಯಾಗಲಿದೆ ಎಂದು ಹೇಳಿದರು.

> ಉದ್ಯೋಗ ಖಾತರಿ ಯೋಜನೆಯಡಿ ಪ್ರತಿ ವರ್ಷ ವೇತನ ಪರಿಷ್ಕರಣೆಯಾಗುತ್ತಿತ್ತು, ಹೊಸ ಯೋಜನೆಯಲ್ಲಿ ಇದನ್ನು ತೆಗೆದುಹಾಕಲಾಗಿದೆ. ಪಿಎಂ ಗತಿಶಕ್ತಿ ಮಾಸ್ಟರ್ ಪ್ಲಾನ್ ಜೊತೆ ಸೇರಿಸಿದ್ದು, ಇದು 500 ಕೋಟಿ ರೂ.ಗೂ ಹೆಚ್ಚು ಮೊತ್ತದ ಕೇಂದ್ರ ಸರ್ಕಾರ ಯೋಜನೆಗಳ ಮೇಲುಸ್ತುವಾರಿಯ ಪೋರ್ಟಲ್‌ನಲ್ಲಿ ನಿಮ್ಮ ಹೊಲದ ಕೆಲಸದ ಬಗ್ಗೆ ಮಾಹಿತಿ ಹಾಕಲು ಸಾಧ್ಯವೇ?.
> –ಪ್ರಿಯಾಂಕ್ ಖರ್ಗೆ, ಸಚಿವ

ಲಾಡ್ಜ್, ವಸತಿ ಗೃಹಗಳಲ್ಲಿ ವಾಸ್ತವ್ಯ ಹೂಡುವವರ ಮೇಲೆ ನಿಗಾ

ಮೈಸೂರು,ಡಿ.27(ಎಂಟಿವೈ)–ಮೈಸೂರು ಅರಮನೆಯ ಜಯ ಮಾರ್ತಾಂಡ ದ್ವಾರದ ಬಳಿ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ಪ್ರಕರಣದಿಂದ ಕೊನೆಗೂ ಎಚ್ಚೆತ್ತುಕೊಂಡಿರುವ ಪೊಲೀಸರು ಮೈಸೂರಿನ ವಿವಿಧ ವಸತಿಗೃಹಗಳಲ್ಲಿ ವಾಸ್ತವ್ಯ ಹೂಡಿರುವ ಹೊರ ರಾಜ್ಯದ ವ್ಯಾಪಾರಿಗಳ ಮಾಹಿತಿ ಸಂಗ್ರಹಕ್ಕೆ ಮುಂದಾಗಿದ್ದಾರೆ. ಅಲ್ಲದೆ, ಹೊಸ ವರ್ಷದ ಸಂಭ್ರಮಾಚರಣೆಗಾಗಿ ಬರುವ ಅನ್ಯರಾಜ್ಯದ ಪ್ರವಾಸಿಗರ ಸಮಗ್ರ ಮಾಹಿತಿ ಸಂಗ್ರಹಿಸುವಂತೆ ವಸತಿನಿಲಯಗಳು ಹಾಗೂ ಲಾಡ್ಜ್, ಹೋಟೆಲ್‌ಗಳ ಮಾಲೀಕರಿಗೆ ಸೂಚಿಸಿದ್ದಾರೆ.

ಕ್ರಿಸ್‌ಮಸ್ ದಿನ ಅರಮನೆಯ ಜಯಮಾರ್ತಾಂಡ ದ್ವಾರದ ಬಳಿ ಸ್ಫೋಟ ಸಂಭವಿಸಿ, ಮೂವರು ಮೃತಪಟ್ಟಿದ್ದರು. ಹಾಗಾಗಿ ಅನಧಿಕೃತವಾಗಿ ವ್ಯಾಪಾರ ಮಾಡಲು ಮೈಸೂರಿಗೆ ವಿವಿಧ ರಾಜ್ಯಗಳಿಂದ ಬಂದಿರುವವರ ಮಾಹಿತಿ ಕಲೆ ಹಾಕಲು ಮುಂದಾಗಿದ್ದಾರೆ. ಈಗಾಗಲೇ ಸಾವಿರಕ್ಕೂ ಹೆಚ್ಚು ಮಂದಿ ವಿವಿಧ ವಸ್ತುಗಳನ್ನು ರಸ್ತೆ ಬದಿ, ಸಿಗ್ನಲ್‌ಗಳಲ್ಲಿ ಮಾರಾಟ ಮಾಡುವವರ ಮಾಹಿತಿ ಲಭ್ಯವಾಗಿದ್ದು, ಅವರೆಲ್ಲಾ ವಸತಿಗೃಹಗಳು, ರಸ್ತೆ ಬದಿ ಟೆಂಟ್ ಹಾಕಿಕೊಂಡು ನೆಲೆಸಿದ್ದಾರೆ. ಇಂತಹ ವ್ಯಾಪಾರಿಗಳ ಪೂರ್ವಾಪರದೊಂದಿಗೆ ಅಗತ್ಯ ಮಾಹಿತಿ ಕಲೆ ಹಾಕಲು ಸೂಚನೆ ನೀಡಲಾಗಿದೆ. ಮೈಸೂರಿನ ಲಾಡ್ಜ್‌ಗಳ ಮೇಲೆ ಹದ್ದಿನ ಕಣ್ಣಿಟ್ಟಿದ್ದು, ಹೊರಗಡೆಯಿಂದ ಬಂದಿರುವ ವ್ಯಕ್ತಿಗಳ ಮಾಹಿತಿ ಪಡೆದು ರೂಮ್ ಕೊಡುವಂತೆ ಸೂಚನೆ ನೀಡಿದ್ದಾರೆ. ಆಧಾರ್ ಕಾರ್ಡ್, ಇನ್ನಿತರೆ ಗುರುತಿನ ಚೀಟಿ ಇಲ್ಲದೆ ರೂಮ್ ಕೊಡುವ ಲಾಡ್ಜ್‌ಗಳ ಮಾಹಿತಿ ಕಲೆ ಹಾಕುತ್ತಿದ್ದು, ಅಕ್ರಮವಾಗಿ ಉಳಿದುಕೊಂಡಿರುವವರ ಮೇಲೆ ನಿಗಾ ಜೊತೆಗೆ ಕಟ್ಟೆಚ್ಚರ ವಹಿಸಿದ್ದಾರೆ.

ಮೈಸೂರು ಮಿತ್ರ

ಭಾನುವಾರ 28 ಡಿಸೆಂಬರ್ 2025

ಪಾಂಡವಪುರ ಬಿಜಿಎಸ್ ಶಿಕ್ಷಣ ಸಂಸ್ಥೆಯಲ್ಲಿ ವಿನೂತನ ಕಾರ್ಯಕ್ರಮ

ವಿದ್ಯಾರ್ಥಿಗಳಿಂದ ಪೋಷಕರ ಪಾದಪೂಜೆ



ಪಾಂಡವಪುರ ಪಟ್ಟಣದ ಬಿಜಿಎಸ್ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಂದ ಪೋಷಕರಿಗೆ ಪಾದಪೂಜೆ ಮಾಡುವ ಮೂಲಕ ವಿಶಿಷ್ಟ ಹಾಗೂ ಸಂಸ್ಕಾರಭರಿತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಪಾಂಡವಪುರ, ಡಿ.27– ಪಟ್ಟಣದ ಬಿಜಿಎಸ್ ಶಿಕ್ಷಣ ಸಂಸ್ಥೆಯಲ್ಲಿ ಪ್ರಥಮ ಹಾಗೂ ದ್ವಿತೀಯ ವರ್ಷದ ಪಿಯುಸಿ ವಾಣಿಜ್ಯ ಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಂದ ಪೋಷಕರಿಗೆ ಪಾದಪೂಜೆ ಮಾಡುವ ಮೂಲಕ ವಿಶಿಷ್ಟ ಹಾಗೂ ಸಂಸ್ಕಾರ ಭರಿತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ವಿದ್ಯಾಭ್ಯಾಸದ ಜೊತೆಗೆ ಸಂಸ್ಕಾರಕ್ಕೂ ಆದ್ಯತೆ ನೀಡುವ ಉದ್ದೇಶದಿಂದ ನಾನಾ ವೇದ ಮಂತ್ರೋಚ್ಚಾರಣೆ, ಸಂಕಲ್ಪಗಳೊಂದಿಗೆ ಧಾರ್ಮಿಕವಾಗಿ ಈ ಕಾರ್ಯಕ್ರಮ ನಡೆಯಿತು.

ವಿದ್ಯಾರ್ಥಿಗಳು ತಮ್ಮ ತಮ್ಮ ತಂದೆ–ತಾಯಂದಿರಿಗೆ ಪಾದಪೂಜೆ ಸಲ್ಲಿಸುವ ಮೂಲಕ ಎಲ್ಲರ ಗಮನ ಸೆಳೆದರು.

ಕಾರ್ಯಕ್ರಮಕ್ಕೆ ಮುಂಚಿತವಾಗಿ ಜಗದ್ಗುರು ಪರಮಪೂಜ್ಯ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳ ಪುತ್ಥಳಿಗೆ ಪೂಜೆ ಸಲ್ಲಿಸಲಾಯಿತು. ಬಳಿಕ ಮಾತನಾಡಿದ ಹೇಮಗಿರಿ ಶಾಖಾ ಮಠದ ಗೌರವ ಕಾರ್ಯದರ್ಶಿ ಡಾ. ಜೆ.ಎನ್. ರಾಮಕೃಷ್ಣೇಗೌಡ ಅವರು, ಕಳೆದ 78 ವರ್ಷಗಳಿಂದ ಈ ಕಾರ್ಯಕ್ರಮವನ್ನು ನಿರಂತರವಾಗಿ ಆಯೋಜಿಸಿಕೊಂಡು ಬರುತ್ತಿದ್ದು, ಪೋಷಕರ ಸಹಕಾರವೂ ಅಪಾರವಾಗಿದೆ. ಮಕ್ಕಳಲ್ಲಿ ತಂದೆ–ತಾಯಿ, ಗುರುಗಳು ಹಾಗೂ ಹಿರಿಯರ ಬಗ್ಗೆ ಗೌರವ ಬೆಳೆಸುವ ನಿಟ್ಟಿನಲ್ಲಿ ಚಿಕ್ಕ ವಯಸ್ಸಿನಲ್ಲೇ ಉತ್ತಮ ಸಂಸ್ಕಾರಗಳನ್ನು ಬೆಳೆಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಇಂತಹ ಪಾದಪೂಜೆಗಳನ್ನು ಶೃಂಗೇರಿ, ವರನಾಡು ಮೊದಲಾದ ಪುಣ್ಯ ಕ್ಷೇತ್ರಗಳಲ್ಲಿ ಮಾಡಿಸಲು ಹೆಚ್ಚಿನ ವೆಚ್ಚ ಬೇಕಾಗುತ್ತದೆ. ಆದರೆ ನಮ್ಮ ಶಾಲೆಯಲ್ಲೇ ಈ ರೀತಿಯ ಸಂಸ್ಕಾರಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಮಕ್ಕಳನ್ನು ಮಾನಸಿಕವಾಗಿ ಸಿದ್ಧಗೊಳಿಸುವ ಕಾರ್ಯ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪತ್ರಕರ್ತರಾದ ಎಸ್.ನಾಗಸುಂದರ್, ಎಸ್.ರವಿಕುಮಾರ್, ಕೃಷ್ಣೇಗೌಡ ಸೇರಿದಂತೆ ಪೋಷಕರು, ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

ಬಿಜಿಎಸ್ ಶಾಲೆಯ ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಉತ್ತಮ ಸಂಸ್ಕಾರ, ಮೌಲ್ಯ ಹಾಗೂ ಸಂಪ್ರದಾಯಗಳ ಅರಿವು ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ ಎಂದು ಪೋಷಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಟಿಪ್ಪರ್ ಮಗುಚಿ ಚಾಲಕ ಜಲಸಮಾಧಿ

ನಾಗಮಂಗಲದ ಬಳಿ ಕಲ್ಲು ಕ್ವಾರೆಯಲ್ಲಿ ದುರಂತ

ನಾಗಮಂಗಲ, ಡಿ.27– ಸೈಜುಗಲ್ಲು ಸಾಗಿಸುತ್ತಿದ್ದ ಟಿಪ್ಪರ್ ಮಗುಚಿ ಬಿದ್ದ ಪರಿಣಾಮ ಚಾಲಕ ಜಲಸಮಾಧಿಯಾಗಿರುವ ಘಟನೆ ತಾಲೂಕಿನ ದೊಡ್ಡಜಟಕ ಒಡೆಯರಪುರದ ಬಳಿಯ ಕಲ್ಲು ಕ್ವಾರೆ ಮತ್ತು ಜಲ್ಲಿ ಕ್ರಸರ್‌ನಲ್ಲಿ ಸಂಭವಿಸಿದೆ.

ನಾಗಮಂಗಲ ತಾಲೂಕು ಬೆಳ್ಳೂರು ಹೋಬಳಿಯ ದುಮ್ಮಸಂದ್ರದ ನಿವಾಸಿ ಲಕ್ಷ್ಮಣ್ (33) ಜಲಸಮಾಧಿಯಾಗಿದ್ದು, ಇದುವರೆಗೂ ಮೃತದೇಹ ಸಿಕ್ಕಿಲ್ಲ. ವಡೆಯನಪುರ ಗ್ರಾಮದ ವ್ಯಾಪ್ತಿಯಲ್ಲಿ ಅಕ್ರಮವಾಗಿ ಕಲ್ಲು ಕ್ವಾರೆ ಮತ್ತು ಜಲ್ಲಿ ಕ್ರಸರ್ ನಡೆಸುತ್ತಿದ್ದು, ನೂರಾರು ಅಡಿ ಹಳ್ಳ ತೋಡಿದ್ದು, ಸುಮಾರು 30 ಅಡಿ ನೀರು ಸಂಗ್ರಹವಾಗಿ ಕೆರೆಯಂತಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಶುಕ್ರವಾರ ಮುಂಜಾನೆ ಲಕ್ಷ್ಮಣ ಹತ್ತು ಚಕ್ರದ ಟಿಪ್ಪರ್‌ನಲ್ಲಿ ಕ್ವಾರೆಯ ಕೆಳಭಾಗದಿಂದ ಸೈಜುಗಲ್ಲನ್ನು ತುಂಬಿಕೊಂಡು ಹೋಗುತ್ತಿದ್ದಾಗ, ತಿರುವಿನಲ್ಲಿ ನಿಯಂತ್ರಣ ತಪ್ಪಿ ಟಿಪ್ಪರ್ ಮಗುಚಿ ಬಿದ್ದಿದ್ದು. ಈ ದೃಶ್ಯ ಅಲ್ಲಿ ಅಳವಡಿಸಲಾಗಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ ಎಂದು ಹೇಳಲಾಗದೆ.

ವಿಷಯ ತಿಳಿದ ಪೊಲೀಸರು ಸ್ಥಳಕ್ಕೆ ನುರಿತ ಈಜುಗಾರರು, ಅಗ್ನಿಶಾಮಕ ದಳದೊಂದಿಗೆ ಭೇಟಿ ನೀಡಿ ಶೋಧ ಕಾರ್ಯ ನಡೆಸಿದರಾದರೂ ಮೃತ ದೇಹ ಪತ್ತೆಯಾಗಿಲ್ಲ. ಜಖಂಗೊಂಡಿರುವ ಟಿಪ್ಪರ್ ಸಿಕ್ಕಿದ್ದು, ಅದನ್ನು ಭಾರೀ ಗಾತ್ರದ ಕ್ರೇನ್ ಸಹಾಯದಿಂದ ಹೊರಗೆತೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.



ದುರಂತದ ಸ್ಥಳದಲ್ಲಿ ಜಮಾಯಿಸಿರುವ ಜನರು. ಮಾಜಿ ಶಾಸಕ ಸುರೇಶ್ ಇದ್ದಾರೆ.

ಮತ್ತೊಮ್ಮೆ ನುರಿತ ಈಜುಗಾರರು ನೀರಿಗಿಳಿದು ಶೋಧ ಕಾರ್ಯ ನಡೆಸಿದರಾದರೂ ಯಾವುದೇ ಪ್ರಯೋಜನವಾಗಲಿಲ್ಲ. ಮೃತದೇಹ ಬಂಡೆ ಸಂದಿಯಲ್ಲಿ ಸಿಲುಕಿರಬಹುದು ಎಂದು ಶಂಕಿಸಲಾಗಿದೆ. ರಾತ್ರಿ 8 ಗಂಟೆಯವರೆಗೂ ಶೋಧ ಕಾರ್ಯ ನಡೆಯಿತು. ನಂತರ ಕತ್ತಲಾದ ಕಾರಣ ಶೋಧ ಕಾರ್ಯ ಸ್ಥಗಿತಗೊಂಡಿತು.

ಸ್ಥಳಕ್ಕೆ ನೀರು ಎತ್ತಲು ಹತ್ತಾರು ಮೋಟಾರ್‌ಗಳನ್ನು ತರಿಸಲಾಗಿದ್ದು, ಅದರ ಸಹಾಯದಿಂದ ಭಾನುವಾರ (ಡಿ.28) ನೀರನ್ನು ಹೊರಕ್ಕೆ ಹಾಕಿ ಮೃತ ದೇಹವನ್ನು ಪತ್ತೆ ಹಚ್ಚಲು ನಿರ್ಧರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ತಹಸಿಲ್ದಾರ್ ಆದರ್ಶ್ ಮತ್ತು ಉಪ ವಿಭಾಗಾಧಿಕಾರಿ ಶ್ರೀನಿವಾಸ್ ಅವರು ಸ್ಥಳದಲ್ಲಿ ಮೊಕ್ಕಾಂ ಹೂಡಿ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದಾರೆ. ಬೆಳ್ಳೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಟಿಪ್ಪರ್ ನೀರಿಗೆ ಬಿದ್ದಿರುವ ದೃಶ್ಯ ಸ್ಪಷ್ಟವಾಗಿ ಸೆರೆಯಾಗಿದ್ದು, ಟಿಪ್ಪರ್‌ನಲ್ಲಿದ್ದ ಚಾಲಕ ಎದ್ದು ಹೊರಗೆ ಬಂದ ಅಥವಾ ತಪ್ಪಿಸಿಕೊಂಡ ಯಾವುದೇ ಕುರುಹುಗಳು ಲಭ್ಯವಾಗದ ಕಾರಣ ಚಾಲಕ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಾವಿನ ಭಾಗ್ಯ: ಸ್ಥಳಕ್ಕೆ ಭೇಟಿ ನೀಡಿ ಘಟನೆ ಬಗ್ಗೆ ಬೇಸರ ವ್ಯಕ್ತಪಡಿಸಿದ ಮಾಜಿ ಶಾಸಕ ಸುರೇಶ್ ಗೌಡ ಕಾಂಗ್ರೆಸ್ ಸರ್ಕಾರದ ಬಿಟ್ಟಿ ಭಾಗ್ಯಗಳಲ್ಲಿ ಸಾವು ಒಂದು ಬಿಟ್ಟಿ ಭಾಗ್ಯವಾಗಿದೆಯೇ ಎಂಬ ಅನುಮಾನ ಮೂಡಿದೆ ಎಂದರು.

ತಡ ರಾತ್ರಿ ಸುಮಾರು 3 ಗಂಟೆ ಸಂದರ್ಭದಲ್ಲಿ ದುಮ್ಮಸಂದ್ರ ಗ್ರಾಮದ ಲಕ್ಷ್ಮಣ್ ಟಿಪ್ಪರ್ ಮೂಲಕ ಕಲ್ಲು ಸಾಗಿಸುವ ಸಂದರ್ಭದಲ್ಲಿ ಆಯತಪ್ಪಿ ನೀರು ತುಂಬಿದ ಕ್ವಾರೆಯಲ್ಲಿ ಬಿದ್ದು ಸಾವನ್ನಪ್ಪಿ ಎರಡೂವರೆ ದಿನ ಕಳೆದರು ಕೂಡ ಒಬ್ಬ ಕೂಲಿ ಕಾರ್ಮಿಕನ ಮೃತ ದೇಹವನ್ನ ಪತ್ತೆ ಮಾಡುವಲ್ಲಿ ಸರ್ಕಾರ, ಜಿಲ್ಲಾಡಳಿತ ವಿಫಲವಾಗಿದೆ. ಜಿಲ್ಲಾಡಳಿತ ಸತ್ತು ಹೋಗಿದೆ ಎಂದರು.

ತಾಲೂಕು ಆಡಳಿತ ರಾಜಕಾರಣಿ ಹಿಡಿತದಲ್ಲಿ ಸಿಲುಕಿ ಅದ್ವಾನವಾಗಿದೆ. ಕಾಂಗ್ರೆಸ್ ಸರ್ಕಾರ ಮಾಡುತ್ತಿರುವ ಭ್ರಷ್ಟಾಚಾರದಲ್ಲಿ ಅಧಿಕಾರಿಗಳ ಪಾಲು ಕೂಡ ಇದ್ದಂತೆ ಕಾಣಿಸುತ್ತಿದೆ ಎಂದರು.

ನಿಗಮ ಮಂಡಳಿಯಲ್ಲಿ ಅಧಿಕಾರ ಪಡೆದ ಪರಿಶಿಷ್ಟ ಸಮುದಾಯದವರಿಗೆ ಇಂದು ಅಭಿನಂದನೆ

ಮಂಡ್ಯ: ಜಿಲ್ಲೆಯ ರಾಜಕೀಯ ಚರಿತ್ರೆಯಲ್ಲಿ ದಲಿತ ಸಮುದಾಯಕ್ಕೆ ವಿಪುಲ ಅವಕಾಶ ನೀಡಿದಂತ ಉದಾಹರಣೆ ಇಲ್ಲ. ಇದರ ಬಗ್ಗೆ ಹಲವು ಬಾರಿ ಚಳುವಳಿಗಾರರು ಅಸಮಾದಾನ ವ್ಯಕ್ತಪಡಿಸಿದ್ದೇವೆ. ಎಲ್ಲ ಅಧಿಕಾರವೂ ಒಂದೇ ಜಾತಿಗೆ ಸೀಮಿತ ಮಾಡಲಾಗಿದೆ ಎಂದು ವ್ಯಕ್ತಪಡಿಸಿದ್ದೆವು. ಕಾಂಗ್ರೆಸ್ ಸರ್ಕಾರದಲ್ಲಿ ಇದೇ ಪ್ರಥಮ ಬಾರಿಗೆ ದಲಿತರಿಗೆ ಅಧಿಕಾರ ನೀಡಿರುವುದು ಸಂತಸ ತಂದಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು ತಿಳಿಸಿದರು.

ರಾಜ್ಯಮಟ್ಟದ ಮೂರು ಹುದ್ದೆಗಳನ್ನು ದಲಿತರಿಗೆ ನೀಡಿದ್ದಾರೆ. 50 ವರ್ಷಗಳ ಇತಿಹಾಸವಿರುವ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರ ಚುಕ್ಕಾಣಿ ನೀಡಲಾಗಿದೆ. ಬಿ.ಪಿ.ಪ್ರಕಾಶ್ ಅವರನ್ನು ನೇಮಕ ಮಾಡಲಾಗಿದೆ. ಅದರಂತೆ ಜಿಲ್ಲೆಯ ನಾಲ್ವರಿಗೆ ಅಧಿಕಾರ ನೀಡಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಗುರುಪ್ರಸಾದ್ ಕೆರಗೋಡು ಮಾತನಾಡಿದರು.

ಈ ಹಿನ್ನೆಲೆಯಲ್ಲಿ ದಲಿತ ಸಮುದಾಯ ಸಂಘಟನೆಗಳ ಅಭಿನಂದನಾ ಸಮಿತಿ, ಪ್ರಗತಿಪರ ಸಂಘಟನೆಗಳು ಮತ್ತು ದಲಿತ ಸಂಘಟನೆಗಳ ವತಿಯಿಂದ ಕಾಂಗ್ರೆಸ್ ಸರ್ಕಾರದಲ್ಲಿ ವಿವಿಧ ನಿಗಮ ಮಂಡಳಿಗಳಲ್ಲಿ ಅಧಿಕಾರ ಪಡೆದ ದಲಿತ ಮುಖಂಡರಿಗೆ ಅಭಿನಂದನಾ ಸಮಾರಂಭ ಡಿ.28 ರಂದು ಬೆಳಿಗ್ಗೆ 11 ಕ್ಕೆ ನಗರದ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದರು.

ಕಾಂಗ್ರೆಸ್ ಸರ್ಕಾರದಲ್ಲಿ ಜಿಲ್ಲೆಯಲ್ಲಿ ಸಿಂಹ ಪಾಲು ಅಧಿಕಾರ ದಲಿತ ಸಮುದಾಯಕ್ಕೆ ಸಿಕ್ಕಿದ ಅಸಮಾಧಾನದ ಮಾತುಗಳು ಕೆಲವರಿಂದ ಕೇಳಿ ಬಂದಿವೆ. ಮನ್‌ಮುಲ್, ಡಿಸಿಸಿ ಬ್ಯಾಂಕ್, ಮೈಷುಗರ್ ಕಾರ್ಖಾನೆಗೂ ಎಲ್ಲ ಸ್ಥಳೀಯ ಸಂಸ್ಥೆಗಳಲ್ಲೂ ದಲಿತರಿಗೆ ಅಧಿಕಾರ ನೀಡಲಾಗಿದೆ ಎಂಬ ಮಾತುಗಳು ಕೇಳಿ ಬರುತ್ತಿದೆ. ಆದರೆ ಈ ಬಾರಿ ದಲಿತರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ಶಾಸಕ ಪಿ.ರವಿ ಕುಮಾರ್‌ಗೌಡ ಗಣಿಗ ಅವರು ಅವಕಾಶ ಕಲ್ಪಿಸಿದ್ದಾರೆ ಎಂದು ತಿಳಿಸಿದರು.

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ರಚನೆಯಾಗಿ ಇಂದಿಗೆ 50 ವರ್ಷ ಕಳೆದರೂ ಮಂಡ್ಯ ಕ್ಷೇತ್ರದ ಯಾವುದೇ ಪಕ್ಷದ ಶಾಸಕರು ದಲಿತ ಸಮುದಾಯದ ವ್ಯಕ್ತಿಯೊಬ್ಬರನ್ನು ಗುರುತಿಸಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಿಲ್ಲ. ರವಿಕುಮಾರ್ ಗಣಿಗ, ದಲಿತ ಸಮುದಾಯದ ಪತ್ರಕರ್ತ ಬಿ.ಪಿ.ಪ್ರಕಾಶ್ ಅವರನ್ನು ಗುರುತಿಸಿ ಮುಡಾ ಅಧ್ಯಕ್ಷರನ್ನಾಗಿ ನೇಮಕ ಮಾಡುವ ಮೂಲಕ ಸಾಮಾಜಿಕ ನ್ಯಾಯ ಎತ್ತಿ ಹಿಡಿದ ಮೊದಲಿಗರಾಗಿದ್ದಾರೆ ಎಂದರು.

ಮನ್ರೇಗಾ ಹೆಸರು ಬದಲಾವಣೆ ವಿರುದ್ಧ ಪ್ರತಿಭಟನೆ

ಭಾರತೀನಗರ,ಡಿ.27– ಮಹಾತ್ಮ ಗಾಂಧೀಜಿ ಹೆಸರಿನಲ್ಲಿದ್ದ ಉದ್ಯೋಗ ಖಾತ್ರಿ ಯೋಜನೆಯ ಹೆಸರು ಬದಲಾಯಿಸಿರುವುದನ್ನು ವಿರೋಧಿಸಿ ಇಲ್ಲಿಗೆ ಸಮೀಪದ ಕ್ಯಾತಘಟ್ಟ ಗ್ರಾಪಂನಲ್ಲಿ ಕಪ್ಪು ಬಾವುಟ ಪ್ರದರ್ಶಿಸುವ ಮೂಲಕ ಕೃಷಿ ಕೂಲಿಕಾರರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.



ಭಾರತೀನಗರ ಸಮೀಪದ ಕ್ಯಾತಘಟ್ಟ ಗ್ರಾಪಂ ಮುಂಭಾಗ ವಿಜಿ–ಜಿ– ರಾಮ್– ಜಿ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು.

ಕ್ಯಾತಘಟ್ಟ ಗ್ರಾಮದಲ್ಲಿ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ಎಂ.ಪುಟ್ಟಮಾದು ಅವರು ಮಾತನಾಡಿ, ರಾಜ್ಯಾದ್ಯಂತ ಗ್ರಾಪಂಗಳಲ್ಲಿ ಕಪ್ಪುಬಾವುಟ ಪ್ರದರ್ಶಿಸುವ ಮೂಲಕ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿ ಧಿಕ್ಕಾರ ಕೂಗಲಾಗುತ್ತದೆ ಎಂದರು.

ಡಿ.23 ರಂದು ರಾಷ್ಟ್ರಪತಿಗಳು ವಿಕಸಿತ ಭಾರತ ಜಿರಾಂಜಿ ಉದ್ಯೋಗ ಖಾತರಿ ಯೋಜನೆಗೆ ಅಂಕಿತ ಹಾಕಿದ್ದಾರೆ. ರಾಷ್ಟ್ರದ ರಕ್ಷಣೆಗಾಗಿ 32 ಕೋಟಿಗಿಂತ ಹೆಚ್ಚಿರುವ ಕೃಷಿಕೂಲಿಕಾರರ ರಕ್ಷಣೆ ಮಾಡುತ್ತಾರೆಂದು ನಿರೀಕ್ಷೆ ಇಟ್ಟಿದ್ದೆವು. ಆದರೆ ರಾಷ್ಟ್ರಪತಿಗಳು ಇದನ್ನು ಗಮನಿಸದೆ ಸಹಿ ಹಾಕಿದ್ದಾರೆ. ನಮ್ಮ ಜಿಲ್ಲೆಯ ಸಂಸದರು ಮಂಡ್ಯ ಜಿಲ್ಲೆಯ ರೈತರನ್ನು, ಕೂಲಿಕಾರರನ್ನು ಸಭೆ ಕರೆಯದೆ ಸಹಿ ಹಾಕಿರುತ್ತಾರೆ. ಇದು ನೋವಿನ ಸಂಗತಿ ಯಾಗಿದೆ ಎಂದರು.

ಇಂದಿನಿಂದ ಗೋ ಬ್ಯಾಕ್ ಜಿರಾಂಜಿ ಚಳುವಳಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ.ಪುಟ್ಟಮಾದು ತಿಳಿಸಿದರು. ಅಣ್ಣೂರು ವಲಯ ಸಮಿತಿ ಅಧ್ಯಕ್ಷೆ ಕ್ಯಾತಘಟ್ಟದ ಜಯಮ್ಮ, ಕಾಯಕ ಬಂಧುಗಳಾದ ಸುಧಾಮಣಿ, ಸತೀಶ್, ಮಲ್ಲೇಶ್, ಮುಖಂಡರಾದ ಮಂಗಳಮ್ಮ, ತಾಯಮ್ಮ, ವಿಮಲ, ಚಿಕ್ಕತಾಯಮ್ಮ ಸೇರಿದಂತೆ ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಹುಲಿ ದಾಳಿಗೆ ವಾಚರ್ ಬಲಿ

ಕಳ್ಳಬೇಟೆ ಶಿಬಿರಗಳಲ್ಲಿ ವಾಚರ್ ಆಗಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದ ಸಣ್ಣಹೈದ ಅವರು ಗಸ್ತಿನಲ್ಲಿದ್ದಾಗ ಹಾಗೂ ಹುಲಿಗಣತಿ ವೇಳೆ ಹಲವು ಬಾರಿ ಹುಲಿಗೆ ಮುಖಾಮುಖಿಯಾಗಿದ್ದರು. ಇಂತಹ ಸಮಯದಲ್ಲಿ ಜೊತೆಯಲ್ಲಿದ್ದವರಿಗೆ ಧೈರ್ಯ ತುಂಬುತ್ತಿದ್ದ ಸಣ್ಣಹೈದ ಇಂದು ಹುಲಿ ದಾಳಿಗೆ ಬಲಿಯಾಗಿದ್ದಾರೆ. ಪ್ರತಿದಿನ ಕಳ್ಳಬೇಟೆ ತಡೆ ಶಿಬಿರದಿಂದ ಕಾಲ್ನಡಿಗೆಯಲ್ಲಿ ಅರಣ್ಯ ರಸ್ತೆಯಲ್ಲಿ ಸುಮಾರು 5–8 ಕಿ.ಮೀ. ಗಸ್ತು ನಡೆಸುತ್ತಿದ್ದ ಸಣ್ಣಹೈದ, ಸೂಕ್ಷ್ಮಗ್ರಹಿಕೆಯ ವ್ಯಕ್ತಿಯಾಗಿದ್ದರು. ವಾಸನೆ ಗ್ರಹಿಸಿಯೇ ಸುತ್ತಮುತ್ತ ಪ್ರಾಣಿಗಳಿರುವುದನ್ನು ಪತ್ತೆ ಮಾಡುತ್ತಿದ್ದ ಚಾಣಾಕ್ಷ.

ಸುರಕ್ಷತಾ ಸಲಕರಣೆ ಕೊಡಿ: ಅರಣ್ಯ ಪ್ರದೇಶದಲ್ಲಿ ಕಾಲ್ನಡಿಗೆಯಲ್ಲಿ ಕಳ್ಳಬೇಟೆ ತಡೆಗೆ ಸಿಬ್ಬಂದಿ ಗಸ್ತು ನಡೆಸುತ್ತಿದ್ದು, ಅವರ ಸುರಕ್ಷತೆಗೆ ಯಾವುದೇ ಆಧುನಿಕ ಸಲಕರಣೆ ನೀಡಿಲ್ಲ. ಗಸ್ತು ಸಿಬ್ಬಂದಿಗೆ ಪಟಾಕಿ ಸೇರಿದಂತೆ ಅಗತ್ಯ ಸಲಕರಣೆ ನೀಡುವಂತೆ ಆದಿವಾಸಿ ಮುಖಂಡರು ಆಗ್ರಹಿಸಿದ್ದಾರೆ.

ಮರಣೋತ್ತರ ಪರೀಕ್ಷೆಗೆ ಚಾಮರಾಜನಗರಕ್ಕೆ ರವಾನೆ: ಗುಂಡ್ಲುಪೇಟೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲು ವೈದ್ಯರು ಲಭ್ಯವಿಲ್ಲದ ಕಾರಣ ವಾಚರ್ ಸಣ್ಣಹೈದ ಅವರ ದೇಹವನ್ನು ಚಾಮರಾಜನಗರದ ಸರ್ಕಾರಿ ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಸಂಜೆ ವೇಳೆಗೆ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ದೇಹವನ್ನು ಹಸ್ತಾಂತರಿಸಲಾಗಿದ್ದು, ಈಗ ಸ್ವಗ್ರಾಮಕ್ಕೆ ಕೊಂಡೊಯ್ಯಲಾಗಿದೆ. ನಾಳೆ ಅಂತ್ಯಕ್ರಿಯೆ ನಡೆಸಲು ಸಂಬಂಧಿಕರು ನಿರ್ಧರಿಸಿದ್ದಾರೆ.

ಕೋಟಿ ವಿಮಾ ಪರಿಹಾರ ಕಲ್ಪಿಸಿ, ಕುಟುಂಬದ ಸದಸ್ಯರೊಬ್ಬರಿಗೆ ಕೆಲಸ ಕೊಡಿ

ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಅವರು ಕರ್ತವ್ಯದಲ್ಲಿದ್ದಾಗ ಹುತಾತ್ಮರಾಗುವ ಅರಣ್ಯ ಸಿಬ್ಬಂದಿಗೆ 1 ಕೋಟಿ ರೂ. ವಿಮಾ ಪರಿಹಾರ ನೀಡುವುದಾಗಿ 3 ದಿನದ ಹಿಂದಷ್ಟೇ ಘೋಷಿಸಿದ್ದಾರೆ. ಹಾಗಾಗಿ ಸಣ್ಣಹೈದ ಅವರ ಕುಟುಂಬಕ್ಕೆ 1 ಕೋಟಿ ರೂ. ಪರಿಹಾರ ನೀಡಿ, ಅನುಕಂಪದ ಆಧಾರದಲ್ಲಿ ಕುಟುಂಬದ ಸದಸ್ಯರೊಬ್ಬರಿಗೆ ಉದ್ಯೋಗ ನೀಡಬೇಕು ಎಂದು ಆದಿವಾಸಿ ಮುಖಂಡರು ಆಗ್ರಹಿಸಿದ್ದಾರೆ.

ಈ ಸಾವಿಗೆ ಯಾರು ಹೊಣೆ

ಬಂಡೀಪುರ ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿ ಬಂದ್ ಹಾಗೂ ಲಂಟಾನ ತೆರವಿಗೆ ಹಿಟಾಚಿ ಬಳಸದಂತೆ ಕೆಲವರು ಹೋರಾಟ ನಡೆಸಿದ್ದರಿಂದ ನ.8ರಿಂದ ಸಫಾರಿ ಬಂದ್ ಆಗಿದೆ. ಸಫಾರಿ ವಾಹನಗಳ ಸಂಚಾರಕ್ಕೆ ಹೊಂದಿಕೊಂಡಿದ್ದ ವನ್ಯಜೀವಿಗಳ ವರ್ತನೆಯಲ್ಲಿ ಈ ಬದಲಾವಣೆ ಆಗಿರುವ ಸಾಧ್ಯತೆ ಇದೆ. ಗಸ್ತು ಸಿಬ್ಬಂದಿ ಮೇಲೆ ದಾಳಿಗೂ ಇದು ಒಂದು ರೀತಿ ಕಾರಣ ಇರಬಹುದು ಎಂದು ಸಿಬ್ಬಂದಿ ಅಭಿಪ್ರಾಯಪಟ್ಟಿದ್ದಾರೆ. ಈ ಘಟನೆಯಿಂದ ಕಳ್ಳಬೇಟೆ ತಡೆ ಶಿಬಿರದ ಸಿಬ್ಬಂದಿ ಹಾಗೂ ಬೇಸಿಗೆ ನಿರ್ವಹಣೆಗೆ ಅರಣ್ಯ ಪ್ರದೇಶದಲ್ಲಿ ಫೈರ್‌ಲೈನ್ ಮಾಡುವ ವಾಚರ್‌ಗಳಲ್ಲಿ ಆತಂಕ ಉಂಟಾಗಿದೆ. ಸಫಾರಿ ವಾಹನಗಳು ಸಂಚರಿಸುತ್ತಿದ್ದರೆ ಪ್ರಾಣಿಗಳು ಗಸ್ತು ಸಿಬ್ಬಂದಿ ಮೇಲೆ ದಾಳಿ ಮಾಡುತ್ತಿರಲಿಲ್ಲವೇನೋ ಎಂದು ಕೆಲ ಸಿಬ್ಬಂದಿ ಅಭಿಪ್ರಾಯಪಟ್ಟಿದ್ದಾರೆ.

ಹಿಂದೂ ಭಾವನೆಗೆ ಧಕ್ಕೆ

ಸದನ ನಡೆಯುವಾಗ ದ್ವೇಷ ಭಾಷಣ ಸಂಬಂಧಿ ಮಸೂದೆ ತಂದು ಚರ್ಚೆಗೂ ಅವಕಾಶ ಕೊಡದೆ ಮಂಜೂರು ಮಾಡಿದ್ದಾರೆ ಎಂದರು. ಕಾಂಗ್ರೆಸ್ ಸರ್ಕಾರ ತನ್ನ ವೈಫಲ್ಯ ಮುಚ್ಚಿಕೊಳ್ಳಲು ಬಿಜೆಪಿ, ಜೆಡಿಎಸ್, ಖಾಸಗಿ ವ್ಯಕ್ತಿಗಳು, ಮಾಧ್ಯಮದವರು ಟೀಕಿಸದಂತೆ ಮಸೂದೆ ತಂದಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಟೀಕಿಸಿದರೆ 9–10 ವರ್ಷ ಜೈಲಿಗೆ ಹಾಕುವ ಷಡ್ಯಂತ್ರ ಮಾಡಿದೆ. ಇದು ಪ್ರಜಾಪ್ರಭುತ್ವ ವಿರೋಧಿ ನಡೆ. ಇಂದಿರಾ ಗಾಂಧಿ 1975ರಲ್ಲಿ ತುರ್ತು ಪರಿಸ್ಥಿತಿ ಹೇರಿದ್ದರು, ಆ ಕರಾಳ ದಿನ ಮರುಕಳಿಸುವ ಕಾಯ್ದೆಯನ್ನು ರಾಜ್ಯ ಸರ್ಕಾರ ತಂದಿದೆ.

ಹಿಂದೂ ಭಾವನೆಗೆ ಧಕ್ಕೆ: ಗೋವುಗಳ ಅಕ್ರಮ ಸಾಗಣೆ ಮಾಡುವವರನ್ನು ಪೊಲೀಸರು ಬಂಧಿಸಿ, ವಾಹನ ವಶಕ್ಕೆ ಪಡೆದರೆ ಕೋರ್ಟ್‌ನಲ್ಲಿ ಜಾಮೀನು ಪಡೆಯಬೇಕಿತ್ತು, ಸಿದ್ದರಾಮಯ್ಯ ಸರ್ಕಾರ, ಪೊಲೀಸರೇ ಠಾಣೆಯಲ್ಲಿ ಜಾಮೀನು ಕೊಡುವಂತೆ, ಬಾಂಡ್ ನೀಡಿ ವಾಹನ ಬಿಡುಗಡೆ ಮಾಡುವಂತೆ ಮಾಡಲು ಸಿದ್ಧತೆ ನಡೆದಿತ್ತು, ಇದು ದೇಶದ್ರೋಹದ ಕೆಲಸವಲ್ಲವೇ, ಹಿಂದೂ ಭಾವನೆಗೆ ಧಕ್ಕೆ ತರುವ ಕೆಲಸವಲ್ಲವೇ ಎಂದರು.

ಅಲ್ಪಸಂಖ್ಯಾತರ ಓಲೈಕೆಗೆ ರಾಜ್ಯ ಸರ್ಕಾರ ಇಷ್ಟು ಕೀಳು ಮಟ್ಟಕ್ಕೆ ಇಳಿದಿರುವುದು ಅಕ್ಷಮ್ಯ ಅಪರಾಧ. ಚಿನ್ನಸ್ವಾಮಿ ಸ್ಟೇಡಿಯಂ ಕಾಲ್ತುಳಿತ ಪ್ರಕರಣ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ತಮ್ಮ ಪುಕ್ಕಟೆ ಪ್ರಚಾರಕ್ಕಾಗಿ ಎರಡೆರಡು ಕಡೆ ಕಾರ್ಯಕ್ರಮ, ಮೆರವಣಿಗೆ ನಡೆಸಿದ್ದು, 10ಕ್ಕೂ ಹೆಚ್ಚು ಯುವಜನರ ಮಾರಣಹೋಮಕ್ಕೆ ಕಾರಣವಾಯಿತು.

ಸಿಎಂ, ಡಿಸಿಎಂ ಆರೋಪಿ ಆಗಬೇಕಿತ್ತು!: ಇದರಲ್ಲಿ ಮುಖ್ಯಮಂತ್ರಿ ಆರೋಪಿ ನಂ.1, ಉಪಮುಖ್ಯಮಂತ್ರಿ 2ನೇ ಆರೋಪಿ ಆಗಬೇಕಿತ್ತು. ಎಲ್ಲವನ್ನೂ ಆರ್‌ಸಿಬಿ, ಡಿಎನ್‌ಎ ಸೇರಿದಂತೆ ಬೇರೆ ಏಜೆನ್ಸಿಗಳ ಮೇಲೆ ಆರೋಪ ಹೊರಿಸಿ ಕೈತೊಳೆದುಕೊಂಡರು.

ಕ್ರೀಡಾಂಗಣದ ಸ್ಮಶಾನ ಮೌನಕ್ಕೆ ರಾಜ್ಯ ಸರ್ಕಾರದ ಷಡ್ಯಂತ್ರ ಕಾರಣ, ವಿಜಯ್ ಹಜಾರೆ ಟ್ರೋಫಿ ಪಂದ್ಯಗಳಿಗೆ ಅನುಮತಿ ಕೊಡಲಿಲ್ಲ, ಇದು ಸರ್ಕಾರದ ಉದ್ಧಟತನ ಎಂದರು.

ರಾಜ್ಯ ಸರ್ಕಾರ ಗೃಹಲಕ್ಷ್ಮಿ ಗ್ಯಾರಂಟಿ ವಿಚಾರದಲ್ಲಿ ದ್ವಂದ್ವ ನಿಲುವು ಅನುಸರಿಸುತ್ತಿದೆ, ಒಂದೆಡೆ 2 ಸಾವಿರ ರೂ. ಕೊಡುವುದಾಗಿ ಹೇಳಿ ಮತ್ತೊಂದೆಡೆ ಅಬಕಾರಿ ಟಾರ್ಗೆಟ್ ವರ್ಷ ಜಾಸ್ತಿ ಮಾಡುತ್ತಿದೆ.

ಸಿದ್ದರಾಮಯ್ಯ ರಾಜ್ಯ ಖಜಾನೆ ತುಂಬಿಸಲು, ಗ್ಯಾರಂಟಿಗಳಿಗೆ ಹಣ ಕ್ರೋಢೀಕರಿಸಲು ಸಾಧ್ಯವಾಗದೇ ಅಬಕಾರಿ ಗುರಿಯನ್ನು ಶೇ.35ರಷ್ಟು ಹೆಚ್ಚಿಸಿದ್ದಾರೆ. ಮದ್ಯ ಮಾರಾಟ ಹೆಚ್ಚಿಸಲು ವ್ಯಾಪಾರಿಗಳ ಮೇಲೆ ಒತ್ತಡ ಹಾಕುತ್ತಾರೆ, ಕುಡುಕರ ಕಾಟದಿಂದ ಬಡ ಹೆಣ್ಣುಕ್ಕಳಿಗೆ ಅನ್ಯಾಯ ಆಗಲಿದೆ, ಇದರ ಕುರಿತು ಮುಖ್ಯಮಂತ್ರಿ ಯೋಚಿಸಿದ್ದಾರಾ ಎಂದರು.

ಒಂದು ಕೈಯಿಂದ 2 ಸಾವಿರ ಕೊಟ್ಟು ಮತ್ತೊಂದು ಕೈಯಿಂದ 20 ಸಾವಿರ ರೂ. ಕಿತ್ತುಕೊಳ್ಳುವ ನೀತಿ ಇವರದು.

ರಾಜ್ಯ ಸರ್ಕಾರವು ಎನ್‌ಇಪಿ (ರಾಷ್ಟ್ರೀಯ ಶಿಕ್ಷಣ ನೀತಿ) ರದ್ದು ಮಾಡಿ, ರಾಜ್ಯ ಶಿಕ್ಷಣ ನೀತಿ ತರಲು ಆಯೋಗ ರಚಿಸಿದೆ. ಮಹಾರಾಷ್ಟ್ರದ ಪ್ರೊ.ಸುಖದೇವ್ ಥೋರತ್ ಚೇರ್ಮನ್ ಆಗಿದ್ದು, ಕರ್ನಾಟಕದಲ್ಲಿ ತಜ್ಞರು ಸಿಗಲಿಲ್ಲವೇ, ಆಡಳಿತಕ್ಕೆ ಎರಡೂವರೆ ವರ್ಷವಾದರೂ ಸ್ಪಷ್ಟ ಶಿಕ್ಷಣ ನೀತಿ ಇಲ್ಲದೇ ವಿದ್ಯಾರ್ಥಿವೃಂದಕ್ಕೆ ಸರ್ಕಾರ ಅನ್ಯಾಯ ಮಾಡುತ್ತಿದೆ ಎಂದರು.

ಕಾಂಗ್ರೆಸ್ ಹೂಡಿಕೆ ವಿರೋಧಿ: ಕಳೆದ ಎರಡೂವರೆ ವರ್ಷಗಳಲ್ಲಿ ಹಲವು ಕೈಗಾರಿಕೆಗಳು ಬೇರೆ ರಾಜ್ಯಕ್ಕೆ ಹೋಗಿವೆ, ಟೊಯೊಟಾ, ಫಾಕ್ಸ್‌ಕಾನ್ ಎರಡನೇ ಯೂನಿಟ್ ಬೇರೆ ರಾಜ್ಯಕ್ಕೆ ಹೋಗಿದೆ, ಅನೇಕ ಉದ್ಯಮಿಗಳು ಕಾಂಗ್ರೆಸ್ಸಿನ ಹೂಡಿಕೆ ವಿರೋಧಿ ನೀತಿ ಧಿಕ್ಕರಿಸಿ ಬೇರೆ ರಾಜ್ಯಕ್ಕೆ ಹೋಗುತ್ತಿದ್ದಾರೆ.

ಡಿಸಿಎಂ ಧಮ್ಕಿ ಹಾಕ್ತಾರೆ: ಅಪಾರ್ಟ್‌ಮೆಂಟ್ ಅಸೋಸಿಯೇಶನ್‌ಗೆ ಉಪಮುಖ್ಯಮಂತ್ರಿ ಧಮ್ಕಿ ಹಾಕಿದ್ದಾರೆ, ರಾಜ್ಯ ಸರ್ಕಾರ ಗೂಂಡಾಗಿರಿಗೆ ಇಳಿದಂತಿದೆ, ಎಲ್ಲ ವಿಚಾರದಲ್ಲೂ ಸರ್ಕಾರ ಎಡವುತ್ತಿದೆ. ಸಚಿವ ಜಮೀರ್ ಅಹ್ಮದ್ ಆಪ್ತ ಸಹಾಯಕ ಸರ್ಫರಾಜ್ ಖಾನ್ ಮೇಲೆ ಲೋಕಾಯುಕ್ತ ದಾಳಿಯಲ್ಲಿ 14.35 ಕೋಟಿ ರೂ. ಅಕ್ರಮ ಸಂಪತ್ತು ವಶಕ್ಕೆ ಪಡೆಯಲಾಗಿದೆ, ಇದು ಭ್ರಷ್ಟಾಚಾರ ಅಲ್ಲವೇ. ಕಾಂಗ್ರೆಸ್ಸಿನ ಹಿರಿಯ ಶಾಸಕ ಬಿ.ಆರ್.ಪಾಟೀಲ್ ಒಂದು ವರ್ಷದ ಹಿಂದೆ ಸರ್ಫರಾಜ್ ಖಾನ್ ಲಂಚ ಕೇಳಿದ ಬಗ್ಗೆ ಆರೋಪಿಸಿದ್ದರು, ಆಡಿಯೋ ಟೇಪ್ ಲೀಕ್ ಆಗಿತ್ತು, ಮುಖ್ಯಮಂತ್ರಿ ಏನು ಕ್ರಮ ಕೈಗೊಂಡರು ಎಂದರು.

ನರೇಂದ್ರ ಮೋದಿ ಜನಪ್ರಿಯತೆ ಸಹಿಸಲ್ಲ: ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಂಡರೆ ರಾಹುಲ್ ಗಾಂಧಿ, ಸಿದ್ದರಾಮಯ್ಯ, ಕಾಂಗ್ರೆಸ್ಸಿನವರಿಗೆ ಆಗುವುದಿಲ್ಲ, ಅವರ ಜನಪ್ರಿಯತೆ ಸಹಿಸಲು ಆಗುತ್ತಿಲ್ಲ, ಮೋದಿ ಅವರನ್ನು ಟೀಕಿಸುವ ನೈತಿಕತೆ ಕಾಂಗ್ರೆಸ್ಸಿನವರಿಗೆ ಇಲ್ಲ ಎಂದು ವಿಜಯೇಂದ್ರ ಹೇಳಿದರು.

ಸಿಲ್ಕ್ ಶೋ ರೂಂ ಪಾಲಾದ ಎಂಡಿಎ ಕಟ್ಟಡ!

ಮೇಟಗಳ್ಳಿ ಪೋಸ್ಟ್ ಆಫೀಸ್‌ನಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಮೈಸೂರು, ಮಂಡ್ಯ, ಕೊಡಗು ಸೇರಿದಂತೆ ಇತರೆ ಜಿಲ್ಲೆಯ ಜನರು ಪಾಸ್‌ಪೋರ್ಟ್ ಮಾಡಿಸಲು ಇದನ್ನು ಅವಲಂಭಿಸಿದ್ದಾರೆ. ಆದರೆ ಈ ಕಚೇರಿ ದೂರ ಇದ್ದು, ವಿಳಾಸ ತಿಳಿಯಲು ಜನರು ಪರದಾಡುತ್ತಿದ್ದರು. ಅಲ್ಲದೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪಾಸ್‌ಪೋರ್ಟ್ ಕೇಂದ್ರದಲ್ಲಿ ಸ್ಥಳಾವಕಾಶ ಕಿರಿದಾಗಿರುವ ಹಿನ್ನೆಲೆಯಲ್ಲಿ ವಿಶಾಲವಾದ ಕಟ್ಟಡಕ್ಕಾಗಿ ಹುಡುಕಾಟ ಆರಂಭವಾಗಿತ್ತು.

ಮೈಸೂರಿನ ಲೋಕರಂಜನ್ ಮಹಲ್ ರಸ್ತೆಯಲ್ಲಿ ಮುಡಾ ನಿರ್ಮಾಣ ಮಾಡಿದ್ದ ಈ ನೂತನ ಕಟ್ಟಡ ಪಾಸ್ ಪೋರ್ಟ್ ಸೇವಾ ಕೇಂದ್ರಕ್ಕೆ ಸೂಕ್ತ ಜಾಗ ಎಂದು ಪರಿಗಣಿಸಲಾಗಿತ್ತು. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಖುದ್ದು ಭೇಟಿ ನೀಡಿ ಪರಿಶೀಲನೆ ಸಹ ನಡೆಸಿದ್ದರು.

ಪಾಸ್‌ಪೋರ್ಟ್ ಸೇವಾ ಕೇಂದ್ರ ಮಾತ್ರವಲ್ಲದೆ ನೂತನ ಕಟ್ಟಡದ ಮೊದಲ ಮಹಡಿಯಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಚೇರಿಯನ್ನು ಸ್ಥಳಾಂತರಿಸಲು ತೀರ್ಮಾನಿಸಲಾಗಿತ್ತು. ಪ್ರಸ್ತುತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕಚೇರಿ ರಾಮನಗರದಲ್ಲಿದೆ. ಆದರೆ ಮೈಸೂರು, ಮಂಡ್ಯ, ಕೊಡಗು ಜಿಲ್ಲೆಯಲ್ಲಿ ನಡೆ ಯುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಪರಿಶೀಲನೆ, ಭೂ ಸ್ವಾಧೀನ ಪ್ರಕ್ರಿಯೆ ಸೇರಿದಂತೆ ಇತರೆ ಕಾರ್ಯಕ್ಕಾಗಿ ಅಧಿಕಾರಿಗಳು ಹಾಗೂ ಜನಸಾಮಾನ್ಯರು ರಾಮನಗರಕ್ಕೆ ಹೋಗಬೇಕಿತ್ತು.

ಈ ಹಿನ್ನೆಲೆಯಲ್ಲಿ ಮೈಸೂರು ನಗರವನ್ನು ಕೇಂದ್ರವಾಗಿಟ್ಟುಕೊಂಡು ಕಾರ್ಯನಿರ್ವಹಿಸಲು ರಾಮನಗರದಲ್ಲಿನ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಚೇರಿಯನ್ನು ಇದೇ ಕಟ್ಟಡಕ್ಕೆ ಸ್ಥಳಾಂತರ ಮಾಡುವ ತೀರ್ಮಾನ ಮಾಡಲಾಗಿತ್ತು.

ಆದರೆ ಲೋಕರಂಜನ್ ಮಹಲ್ ರಸ್ತೆಯಲ್ಲಿ ಮುಡಾ ನಿರ್ಮಾಣ ಮಾಡಿರುವ ನೂತನ ಕಟ್ಟಡ ಇವೆರಡಕ್ಕೂ ದೊರೆಯಲಿಲ್ಲ. ಈಗ ಖಾಸಗಿಯವರ ಪಾಲಾಗಿದೆ. ಸರ್ಕಾರಕ್ಕೆ ಸೇರಿದ ಕಟ್ಟಡಗಳನ್ನು ಸರ್ಕಾರದ ಇತರೆ ಇಲಾಖೆಗಳಿಗೆ ನೀಡಬೇಕೆಂಬ ಸುತ್ತೋಲೆ ಇದೆ. ಆದರೆ, ಈ ಕಟ್ಟಡವನ್ನು ಖಾಸಗಿಯವರಿಗೆ ನೀಡುವ ಮೂಲಕ ಸರ್ಕಾರದ ಮೂಲ ನಿಯಮವನ್ನು ಉಲ್ಲಂಘನೆ ಮಾಡಿದಂತಾಗಿದೆ.

ಬಾಡಿಗೆ ಚೌಕಾಸಿಯೇ ಕೈತಪ್ಪಲು ಮೂಲ ಕಾರಣ

ಮೈಸೂರಿನ ಲೋಕರಂಜನ್ ಮಹಲ್ ರಸ್ತೆಯ ಮುಡಾದ ನೂತನ ಕಟ್ಟಡಕ್ಕೆ ಪಾಸ್‌ಪೋರ್ಟ್ ಸೇವಾ ಕೇಂದ್ರ ಹಾಗೂ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಚೇರಿ ಸ್ಥಳಾಂತರವಾಗಿದ್ದರೆ ಜನಸಾಮಾನ್ಯರಿಗೆ ಬಹಳ ಅನುಕೂಲವಾಗುತ್ತಿತ್ತು. ಅಲ್ಲಿ ಪಾರ್ಕಿಂಗ್ ಸೇರಿದಂತೆ ಇತರೆ ಸೌಲಭ್ಯವಿತ್ತು.

ಮೇಟಗಳ್ಳಿಯ ಪೋಸ್ಟ್ ಆಫೀಸ್‌ನಲ್ಲಿ ಈಗ ಕಾರ್ಯ ನಿರ್ವಹಿಸುತ್ತಿರುವ ಪಾಸ್‌ಪೋರ್ಟ್ ಸೇವಾ ಕೇಂದ್ರದ ಕಚೇರಿ ಕಿರಿದಾಗಿದೆ. ಈ ಮೊದಲು ದಿನಕ್ಕೆ 100 ಪಾಸ್‌ಪೋರ್ಟ್‌ಗಳನ್ನು ಮಾಡಲಾಗುತ್ತಿತ್ತು. ಆದರೆ ಈಗ ಬೇಡಿಕೆ ಹೆಚ್ಚಾಗಿರುವ ಹಿನ್ನೆಲೆ 200ಕ್ಕೂ ಹೆಚ್ಚು ಪಾಸ್‌ಪೋರ್ಟ್ ಮಾಡಲಾಗುತ್ತಿದೆ.

ನೂತನ ಕಟ್ಟಡದ ಬಾಡಿಗೆಯನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರ 1.25 ಲಕ್ಷ ರೂಪಾಯಿ ನಿಗದಿ ಮಾಡಿದೆ. ಆದರೆ 60 ಸಾವಿರ ರೂಪಾಯಿ ಬಾಡಿಗೆ ನೀಡಲು ಮಾತ್ರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ದರ ನಿಗದಿ ಮಾಡಲಾಗಿದೆ. ಪಾಸ್‌ಪೋರ್ಟ್ ಸೇವಾ ಕೇಂದ್ರದ ಪರಿಸ್ಥಿತಿ ಕೂಡ ಇದೇ ಆಗಿದೆ. ಹಾಗಾಗಿ ಇವೆರಡೂ ಕಚೇರಿ ಕಟ್ಟಡ ಲಭ್ಯವಾಗಿಲ್ಲ.

–ಪ್ರತಾಪ್ ಸಿಂಹ, ಮಾಜಿ ಸಂಸದ

ಕಾಂಗ್ರೆಸ್‌ನಿಂದ ನರೇಗಾ ಬಚಾವ್ರೋ ಅಭಿಯಾನ

ಪಕ್ಷವು ಸಾಮೂಹಿಕವಾಗಿ ಪ್ರಮಾಣ ವಚನ ಸ್ವೀಕರಿಸಿದೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೇಲಿನ ನಂಬಿಕೆಯೊಂದಿಗೆ ನಾವು ಮನ್ರೇಗಾ ಮತ್ತು ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಮತ್ತು ಪ್ರತಿ ಹಳ್ಳಿಯಲ್ಲಿ ನಮ್ಮ ಧ್ವನಿಯನ್ನು ಎತ್ತಲು ಪ್ರತಿಜ್ಞೆ ಮಾಡಿದ್ದೇವೆ. 'ಜೈ ಸಂವಿಧಾನ್' ಮತ್ತು 'ಜೈ ಹಿಂದ್' ಘೋಷಣೆಗಳೊಂದಿಗೆ ಚಳುವಳಿಯನ್ನು ಮುಂದುವರಿಸಲಾಗುವುದು ಎಂದು ಖರ್ಗೆ ಹೇಳಿದ್ದಾರೆ.

ಕೃಷಿ ಕಾನೂನುಗಳನ್ನು ಹಿಂದಕ್ಕೆ ಪಡೆಯಲಾಗುವುದು ಎಂದು ರಾಹುಲ್ ಗಾಂಧಿ ಬಹಳ ಹಿಂದೆಯೇ ಭವಿಷ್ಯ ನುಡಿದಿದ್ದರು. ಈಗ ಮನ್ರೇಗಾವನ್ನು ಮರಳಿ ತರಬೇಕಾಗುತ್ತದೆ. ಮನ್ರೇಗಾ ಕುರಿತು ನಿರ್ದಿಷ್ಟಯೋಜನೆಗಳನ್ನು ರೂಪಿಸುವುದು ಮತ್ತು ರಾಷ್ಟ್ರವ್ಯಾಪಿ ಸಾರ್ವಜನಿಕ ಅಭಿಯಾನವನ್ನು ಪ್ರಾರಂಭಿಸುವುದು ನಮ್ಮ ಸಾಮೂಹಿಕ ಜವಾಬ್ದಾರಿಯಾಗಿದೆ.

ಹಲವಾರು ರಾಜ್ಯಗಳಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ಪಕ್ಷದ ಟೀಕೆಯನ್ನು ಖರ್ಗೆ ಪುನರುಚ್ಚರಿಸಿದರು. ಇದನ್ನು ಚೆನ್ನಾಗಿ ಯೋಚಿಸಿದ ಪಿತೂರಿ ಎಂದು ಕರೆದ ಅವರು, ಈ ಚಟುವಟಿಕೆ ಪ್ರಜಾಪ್ರಭುತ್ವ ಹಕ್ಕುಗಳನ್ನು ನಿರ್ಬಂಧಿಸುವ ಗುರಿಯನ್ನು ಹೊಂದಿದೆ ಎಂದು ಆರೋಪಿಸಿದರು.

ಬಾಂಗ್ಲಾದೇಶದಲ್ಲಿ ಹಿಂದೂ ಅಲ್ಪಸಂಖ್ಯಾತರ ಮೇಲಿನ ದಾಳಿಗಳನ್ನು ಖರ್ಗೆ ಖಂಡಿಸಿದರು. ಇಡೀ ರಾಷ್ಟ್ರ ಅದರ ಬಗ್ಗೆ ಕಳವಳ ವ್ಯಕ್ತಪಡಿಸಿದೆ ಎಂದು ಹೇಳಿದರು. ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ಸಂಬಂಧಿಸಿದ ಸಂಘಟನೆಗಳು ಕ್ರಿಸ್‌ಮಸ್ ದಿನದ ಆಚರಣೆಯ ಮೇಲೆ ನಡೆಸಿದ ದಾಳಿಗಳು ಕೋಮು ಸಾಮರಸ್ಯವನ್ನು ಕದಡಿವೆ. ಜಾಗತಿಕವಾಗಿ ಭಾರತದ ಪ್ರತಿಷ್ಠೆಯನ್ನು ಕಳಂಕಿತಗೊಳಿಸಿವೆ ಎಂದು ಹೇಳಿದರು. ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಶಶಿ ತರೂರ್ ಸೇರಿದಂತೆ ಹಿರಿಯ ನಾಯಕರು ಭಾಗವಹಿಸಿದ್ದರು. ಕರ್ನಾಟಕ, ತೆಲಂಗಾಣ ಮತ್ತು ಹಿಮಾಚಲ ಪ್ರದೇಶದಂತಹ ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು, ಪ್ರದೇಶ ಕಾಂಗ್ರೆಸ್ ಸಮಿತಿ (ಪಿಸಿಸಿ) ಅಧ್ಯಕ್ಷರು ಸಹ ಹಾಜರಿದ್ದ ಸಭೆಯಲ್ಲಿ ಮುಂದಿನ ವರ್ಷ ಅಸ್ಸಾಂ, ಕೇರಳ, ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಪುದುಚೇರಿಯಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳಿಗೆ ಮುಂಚಿತವಾಗಿ ಪಕ್ಷದಲ್ಲಿ ಈ ಚರ್ಚೆಗಳು ನಡೆದಿದ್ದು, ಚುನಾವಣಾ ಕಾರ್ಯತಂತ್ರ, ಸಾಂಸ್ಥಿಕ ಸಿದ್ಧತೆ ಮತ್ತು ರಾಜಕೀಯ ಸಂದೇಶ ಕಳುಹಿಸುವಿಕೆಯ ಕುರಿತು ನಾಯಕರು ಚರ್ಚಿಸಿದ್ದಾರೆ.

ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರಿಗೆ ಬಡ್ತಿ ಭಾಗ್ಯ: ಜ.1ರಿಂದ ಕೌನ್ಸಿಲಿಂಗ್

ಬೆಂಗಳೂರು, ಡಿ.27– ಮೂರು ವರ್ಷಗಳಿಂದ ಬಡ್ತಿಗಾಗಿ ಕಾದು ಕುಳಿತಿದ್ದ ರಾಜ್ಯದ ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರಿಗೆ ಶಾಲಾ ಶಿಕ್ಷಣ ಇಲಾಖೆಯು ವರ್ಷಾಂತ್ಯದಲ್ಲಿ ಸಿಹಿಸುದ್ದಿ ನೀಡಿದೆ. ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರಿಗೆ 2025–26ನೇ ಸಾಲಿನಲ್ಲಿ ಹಿರಿಯ ಮುಖ್ಯ ಶಿಕ್ಷಕರ ಹುದ್ದೆಗೆ ಮುಂಬಡ್ತಿ ನೀಡಲು ಶಿಕ್ಷಣ ಇಲಾಖೆ ಅಧಿಸೂಚನೆ ಹೊರಡಿಸಿದೆ. ಮುಖ್ಯ ಶಿಕ್ಷಕರ ಜೇಷ್ಠತಾ ಪಟ್ಟಿ ಪ್ರಕಟಿಸಿದ ಬಳಿಕ ಜನವರಿ 1ರಿಂದ ಕೌನ್ಸಿಲಿಂಗ್ ನಡೆಸಲು ನಿರ್ಧರಿಸಲಾಗಿದೆ.

ಶಿಕ್ಷಣ ಇಲಾಖೆಯ ಈ ನಿರ್ಧಾರದಿಂದ ರಾಜ್ಯದ ಪ್ರಾಥಮಿಕ ಶಾಲೆಗಳ ಸುಮಾರು 2 ಸಾವಿರ ಮುಖ್ಯ ಶಿಕ್ಷಕರು ಹಿರಿಯ ಮುಖ್ಯ ಶಿಕ್ಷಕರಾಗಿ ಬಡ್ತಿ ಪಡೆಯಲಿದ್ದಾರೆ. ನಿಯಮಗಳ ಪ್ರಕಾರ 60ಕ್ಕಿಂತ ಹೆಚ್ಚು ಮಕ್ಕಳಿರುವ ಶಾಲೆಗಳಲ್ಲಿ ಮುಖ್ಯ ಶಿಕ್ಷಕರ ಹುದ್ದೆಗಳನ್ನು ಸೃಷ್ಟಿಸಲಾಗುತ್ತದೆ. 250ಕ್ಕಿಂತ ಹೆಚ್ಚು ಮಕ್ಕಳಿರುವ ಶಾಲೆಗಳಲ್ಲಿ ಹಿರಿಯ ಮುಖ್ಯ ಶಿಕ್ಷಕರ ಹುದ್ದೆಗೆ ನೇಮಕ ಮಾಡಲಾಗುತ್ತದೆ. ಈ ಹಿಂದೆ ಇದೇ ಪ್ರಕಾರವಾಗಿ ಅಧಿಸೂಚನೆ ಹೊರಡಿಸುವ ಮೂಲಕ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿತ್ತು. ಆದರೆ ಕಳೆದ ಮೂರು ವರ್ಷಗಳಿಂದ ಕಾನೂನು ತೊಡಕುಗಳ ನೆಪವೊಡ್ಡಿ ಬಡ್ತಿ ಪ್ರಕ್ರಿಯೆಗಳನ್ನು ಸ್ಥಗಿತ ಮಾಡಲಾಗಿತ್ತು. ಈ ಹಿಂದೆ 2024ರಲ್ಲಿ ಹೊರಡಿಸಿದ್ದ ಅಧಿಸೂಚನೆಯನ್ನು ಶಿಕ್ಷಣ ಇಲಾಖೆ ಹಿಂಪಡೆದಿತ್ತು. ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರಿಗೆ ಬಡ್ತಿ ನೀಡುವಂತೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ನಿರಂತರವಾಗಿ ಹೋರಾಟ ನಡೆಸುತ್ತಲೇ ಇತ್ತು.

ಶಬರಿಮಲೆ ಮಂಡಲ ಪೂಜೆಗೆ ಸಾಕ್ಷಿಯಾದ ಸಾವಿರಾರು ಭಕ್ತರು

ಶಬರಿಮಲೆ, ಡಿ.27– ಇಲ್ಲಿನ ಅಯ್ಯಪ್ಪ ದೇವಾಲಯದಲ್ಲಿ ಶನಿವಾರ ನಡೆದ ಮಂಡಲ ಪೂಜೆಗೆ ಸಾವಿರಾರು ಭಕ್ತರು ಸಾಕ್ಷಿಯಾದರು. ಈ ಮೂಲಕ 41 ದಿನಗಳಿಂದ ನಡೆದ ವಾರ್ಷಿಕ ತೀರ್ಥಯಾತ್ರೆ ಸಂಪನ್ನಗೊಂಡಿತು.



ಶುಕ್ರವಾರ ಸಂಜೆ ದೇವಾಲಯದ ಸಂಕೀರ್ಣಕ್ಕೆ ಮೆರವಣಿಗೆಯಲ್ಲಿ ತರಲಾದ ಸ್ವರ್ಣವಸ್ತ್ರವನ್ನು ಅಯ್ಯಪ್ಪ ದೇವರ ವಿಗ್ರಹಕ್ಕೆ ಅಲಂಕಾರ ಮಾಡಿ, ಮಂಡಲ ಪೂಜೆ ನೆರವೇರಿಸಲಾಯಿತು. ದೇವಾಲಯದ ತಂತ್ರಿ (ಮುಖ್ಯ ಅರ್ಚಕ) ಕಂಡರಾರು ಮಹೇಶ್ ಮೋಹನಾರು ಅವರ ನೇತೃತ್ವದಲ್ಲಿ ಶನಿವಾರ ಬೆಳಿಗ್ಗೆ 10.10ರಿಂದ 11.30ರವರೆಗೆ ವಿಧಿವಿಧಾನಗಳನ್ನು ನೆರವೇರಿಸಲಾಯಿತು ಎಂದು ತಿರುವಾಂಕೂರು ದೇವಸ್ವಂ ಮಂಡಳಿ ಅಧಿಕಾರಿಗಳು ತಿಳಿಸಿದ್ದಾರೆ. ರಾಜ್ಯ ಹಾಗೂ ಹೊರರಾಜ್ಯಗಳಿಂದ ಬಂದಿದ್ದ ಸಾವಿರಾರು ಭಕ್ತರು ಹಾಗೂ ಮಾಲೆ ಧರಿಸಿದವರು ಇರುಮುಡಿ ಹೊತ್ತು ದೇವರ ದರ್ಶನಕ್ಕಾಗಿ ಗಂಟೆಗಟ್ಟಲೆ ಸರದಿಯಲ್ಲಿ ನಿಂತಿದ್ದರು.

ರಾತ್ರಿ 10 ಗಂಟೆಗೆ ಹರಿವರಾಸನಂ ಪಠಣದ ನಂತರ ಮಂಡಲ ಪೂಜೆ ನೆರವೇರಿಸಲಾಯಿತು. ಬಳಿಕ ದೇವಾಲಯದ ಬಾಗಿಲು ಮುಚ್ಚಲಾಯಿತು. ಮಕರವಿಳಕ್ಕು ಹಬ್ಬಕ್ಕಾಗಿ ಡಿಸೆಂಬರ್ 30ರಂದು ಸಂಜೆ 5 ಗಂಟೆಗೆ ದೇವಾಲಯ ಮತ್ತೆ ತೆರೆಯಲಿದೆ.

ಮೈಸೂರು ಅರಮನೆ ಜಯಮಾರ್ತಾಂಡ ದ್ವಾರದ ಮುಂದೆಯೇ ನಡೆದ ಸ್ಫೋಟದ ದೃಶ್ಯ ಅಲ್ಲಿರುವ ಸಿಸಿ ಕ್ಯಾಮರಾದಲ್ಲೇ ಸೆರೆಯಾಗಿಲ್ಲ!



ಮೊಬೈಲ್ ಕಮಾಂಡ್ ಸೆಂಟರ್

ಮೈಸೂರು, ಡಿ.27 (ಆರ್‌ಕೆ)– ಕಳೆದ ಗುರುವಾರ ರಾತ್ರಿ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟದ ದೃಶ್ಯ ಅರಮನೆಯ ಜಯಮಾರ್ತಾಂಡ ದ್ವಾರದ ಬಳಿ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲೇ ಸೆರೆಯಾಗಿಲ್ಲ.

ಪೊಲೀಸರು ಸ್ಥಳದಲ್ಲಿ ಮಹಜರು ಮಾಡಿದಾಗ ಅಲ್ಲಿರುವ ಸಿಸಿ ಕ್ಯಾಮರ ದುರಂತ ನಡೆದ ವೇಳೆ ಬೇರೆಡೆ ತಿರುಗಿತ್ತು. ಒಂದು ವೇಳೆ ಅದೇ ದಿಕ್ಕಿಗೆ ಕ್ಯಾಮರಾ ಇದ್ದಿದ್ದರೂ ಸಹ ಅಲ್ಲಿ ಅಡ್ಡಲಾಗಿ ಅಳವಡಿಸಿರುವ ಫ್ಲೆಕ್ಸ್‌ನಿಂದಾಗಿ ಸ್ಫೋಟದ ದೃಶ್ಯ ಸೆರೆಯಾಗುತ್ತಿರಲಿಲ್ಲ ಎಂದು ತಿಳಿದು ಬಂದಿದೆ. ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿರುವ ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಮಣ್ಯ, ಅರಮನೆಯ ಪ್ರವೇಶ, ನಿರ್ಗಮನ, ಒಳ ಹಾಗೂ ಹೊರ ಆವರಣದಲ್ಲಿ ಒಟ್ಟು 150 ಸಿಸಿ ಟಿವಿ ಕ್ಯಾಮರಾಗಳಿದ್ದು ಎಲ್ಲವೂ ಸುಸ್ಥಿತಿಯಲ್ಲಿದ್ದು, ಕಾರ್ಯ ನಿರ್ವಹಿಸುತ್ತಿವೆ ಎಂದರು.

ಜಯಮಾರ್ತಾಂಡ ಗೇಟ್‌ನಲ್ಲಿರುವ ಕ್ಯಾಮರ 360 ಡಿಗ್ರಿಯಲ್ಲಿ ತಿರುಗುತ್ತಿದ್ದರಿಂದ ಘಟನೆ ನಡೆದಾಗ ಅದು ಬೇರೆ ದಿಕ್ಕಿನಲ್ಲಿರಬಹುದು. ಸುತ್ತ ರೊಟೇಟ್ ಆಗುತ್ತಿರುವುದರಿಂದ ಘಟನೆಯ ದೃಶ್ಯಾವಳಿ ಮಿಸ್ ಆಗಿದೆ. ಆದರೆ ಅಲ್ಲಿ ಫ್ಲೆಕ್ಸ್‌ವೊಂದನ್ನು ಅಳವಡಿಸಿರುವುದರಿಂದ ಕ್ಯಾಮರ ಕಣ್ಣಿಗೆ ಗೋಚರಿಸಿಲ್ಲ ಎಂದು ಅವರು ತಿಳಿಸಿದರು.

ಅರಮನೆ ಸುತ್ತ 250 ಅನಧಿಕೃತ ಅಂಗಡಿಗಳು: ನಿತ್ಯವೂ ಸಾವಿರಾರು ಪ್ರವಾಸಿಗರು ಬರುವ ಮೈಸೂರು ಅರಮನೆಯ ಸುತ್ತ ಸುಮಾರು 250 ಅನಧಿಕೃತ ಅಂಗಡಿಗಳು ನಾಯಿಕೊಡೆಗಳಂತೆ ತಲೆ ಎತ್ತಿವೆ. ಅವರೆಲ್ಲಾ ಯಾರು? ಎಲ್ಲಿಂದ ಬಂದರು? ಅವರ ಹಿನ್ನೆಲೆ ಏನು? ಅವರು ಏನೆಲ್ಲಾ ವ್ಯಾಪಾರ ಮಾಡುತ್ತಾರೆ? ಎಂಬುದು ಯಾರಿಗೂ ಗೊತ್ತಿಲ್ಲ. ಕೈಯ್ಯಲ್ಲಿ ಚೀಲ ಹಿಡಿದು ಬರುತ್ತಾರೆ. ಅದರಲ್ಲಿ ಏನಿದೆ ಎಂಬುದು ಗೊತ್ತಿಲ್ಲ. ಅಲ್ಲಿ ವ್ಯಾಪಾರ ಮಾಡುವವರ ಹೆಸರು, ವಿಳಾಸ, ಆಧಾರ್ ಕಾರ್ಡ್ ಇತ್ಯಾದಿಗಳನ್ನು ಪಡೆದು ಅವರು ಎಲ್ಲಿ ವಾಸಮಾಡುತ್ತಾರೆ ಎಂಬುದರ ಬಗ್ಗೆ ಪೊಲೀಸರು ಮಾಹಿತಿ ಪಡೆದುಕೊಳ್ಳಬೇಕು. ಅಹಿತಕರ ಘಟನೆ ಸಂಭವಿಸಿದಲ್ಲಿ ಅವರನ್ನು ಗುರುತಿಸಲು ಸಹಕಾರಿಯಾಗಲಿದೆ ಎಂಬುದು ಸಾರ್ವಜನಿಕರ ವಾದ.

ಅರಮನೆ ಸುತ್ತ ಅನಧಿಕೃತವಾಗಿ ರಸ್ತೆಬದಿ ವ್ಯಾಪಾರಿಗಳು ವ್ಯಾಪಾರ ಮಾಡುತ್ತಿರುವುದು ಹಲವು ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಮೈಸೂರು ಮಹಾನಗರ ಪಾಲಿಕೆ ಅಥವಾ ಪೊಲೀಸರು ಅವರನ್ನು ಅಲ್ಲಿಂದ ತೆರವುಗೊಳಿಸಿ ಪ್ರತ್ಯೇಕ ಸುರಕ್ಷಿತ ಜಾಗದಲ್ಲಿ ವ್ಯಾಪಾರಕ್ಕೆ ಅನುವು ಮಾಡಿಕೊಡಬೇಕು. ಇಲ್ಲದಿದ್ದರೆ ಹೊರಗಡೆಯಿಂದ ಬರುವ ಪ್ರವಾಸಿಗರಿಗೆ ವಸ್ತುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾರೆ. ಅಲ್ಲದೇ ಸುರಕ್ಷತೆಯೂ ಇಲ್ಲ ಎಂದು ನಾಗರಿಕರು ದೂರಿದ್ದಾರೆ.

ಹೀಲಿಯಂ ಪೌಡರ್ ವಶ: ಹೀಲಿಯಂ ಅನಿಲ ಸ್ಫೋಟಗೊಂಡ ಸ್ಥಳದಲ್ಲಿ ಪೊಲೀಸರಿಗೆ ಬಲೂನ್‌ಗೆ ಬಳಸುತ್ತಿದ್ದ ಗ್ಯಾಸ್ ತಯಾರಿಸುವ ಸುಮಾರು ಎರಡು ಕೆಜಿಯಷ್ಟು ಹೀಲಿಯಂ ಪೌಡರ್ ಪತ್ತೆಯಾಗಿದೆ. ದುರಂತದಲ್ಲಿ ಮೃತಪಟ್ಟ ಸಲೀಂನೊಂದಿಗೆ ವ್ಯಾಪಾರಕ್ಕೆಂದು ಮೈಸೂರಿಗೆ ಬಂದಿದ್ದ ಇತರ 4 ಮಂದಿ ಮಂಡಿ ಮೊಹಲ್ಲಾದ ಲಾಡ್ಜ್‌ವೊಂದರಲ್ಲಿ ಕಳೆದ 15 ದಿನಗಳಿಂದ ವಾಸ್ತವ್ಯ ಹೂಡಿದ್ದರು. ಅವರೆಲ್ಲರೂ ಸಂಬಂಧಿಕರೇ ಆಗಿದ್ದಾರೆ. ಇದೀಗ ಪೊಲೀಸರು ಅವರಿದ್ದ ಲಾಡ್ಜ್‌ನ ಕೊಠಡಿಯನ್ನು ಪರಿಶೀಲನೆ ನಡೆಸಿ, ಇಬ್ಬರನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆಂದು ಪೊಲೀಸ್ ಮೂಲಗಳು ತಿಳಿಸಿವೆ.

ಉದಯಗಿರಿ ಸರ್ಕಲ್‌ನಲ್ಲಿತ್ತು ಮೊಬೈಲ್ ಕಮಾಂಡ್ ಸೆಂಟರ್

ಅರಮನೆ ಜಯಮಾರ್ತಾಂಡ ಗೇಟ್ ಬಳಿ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು, ದುರಂತ ಸಂಭವಿಸಿದಾಗ ಮೈಸೂರು ನಗರ ಪೊಲೀಸ್ ಘಟಕದ ಮೊಬೈಲ್ ಕಮಾಂಡ್ ಸೆಂಟರ್ ಉದಯಗಿರಿ ಸರ್ಕಲ್‌ನಲ್ಲಿತ್ತು. ಗುರುವಾರ ರಾತ್ರಿ 8.30ರ ಬಳಿಕ ಆ ವಾಹನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸಿಎಆರ್ ಮೈದಾನದ ಕೇಂದ್ರ ಸ್ಥಾನ ತಲುಪಿತು. ಸಾಮಾನ್ಯವಾಗಿ ಹೆಚ್ಚು ಜನ ಸೇರುವ ಸ್ಥಳದಲ್ಲಿ ಅದು ನಿಂತಿದ್ದು, ಸುತ್ತಮುತ್ತಲ ಬೆಳವಣಿಗೆ ದೃಶ್ಯಾವಳಿಗಳನ್ನು ಸೆರೆ ಹಿಡಿದು, ಕಂಟ್ರೋಲ್ ರೂಂಗೆ ರವಾನಿಸುತ್ತದೆ. ಆದರೆ ಗುರುವಾರ ರಾತ್ರಿ ಮೊಬೈಲ್ ಕಮಾಂಡ್ ಸೆಂಟರ್ ವಾಹನವು ಅರಮನೆಯ ಜಯಮಾರ್ತಾಂಡ ಗೇಟ್ ಬಳಿ ಇರಲಿಲ್ಲ. ಡ್ರೋನ್, ಬಾಡಿವೊರ್ನ್ಸ್, ಸ್ಟಾಟಿಕ್, 360 ಡಿಗ್ರಿ ಸೇರಿದಂತೆ ಈ ವಾಹನದಲ್ಲಿ ಒಟ್ಟು 20 ಸಿಸಿ ಕ್ಯಾಮರಾಗಳು ಇರುತ್ತವೆ. ಈ ವಾಹನದ ಕಾರ್ಯಾಚರಣೆ ಉದ್ದೇಶ ಕಳೆದ ಗುರುವಾರ ಸಫಲವಾಗದಿರುವುದಕ್ಕೆ ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದ್ದಾರೆ.



ಜಯಮಾರ್ತಾಂಡ ದ್ವಾರದ ಬಳಿ ಅಳವಡಿಸಿರುವ ಸಿಸಿ ಕ್ಯಾಮರಾ.

ಡಾ.ಬಿ.ಆರ್.ಅಂಬೇಡ್ಕರ್ ಚಿತ್ರ, ಸಂದೇಶವಿರುವ ಕ್ಯಾಲೆಂಡರ್ ಬಿಡುಗಡೆ



ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗದ ನಗರ ಮತ್ತು ಗ್ರಾಮಾಂತರ ಘಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ನೌಕರರ ಸಂಘ ಹಾಗೂ ಅಧಿಕಾರಿಗಳು, ನೌಕರರ ಕ್ಷೇಮಾಭಿವೃದ್ಧಿ ಸಂಘದ ನೂತನ ವರ್ಷದ ಕ್ಯಾಲೆಂಡರನ್ನು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಣ್ಯರು ಬಿಡುಗಡೆಗೊಳಿಸಿದರು.

ಮೈಸೂರು, ಡಿ.27(ಜಿಎ)–ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮೈಸೂರು ವಿಭಾಗದ ನಗರ ಮತ್ತು ಗ್ರಾಮಾಂತರ ಘಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ನೌಕರರ ಸಂಘ ಹಾಗೂ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಹೊರ ತಂದಿರುವ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಚಿತ್ರ, ಸಂದೇಶವುಳ್ಳ ನೂತನ ವರ್ಷದ ಕ್ಯಾಲೆಂಡರನ್ನು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಣ್ಯರು ಬಿಡುಗಡೆಗೊಳಿಸಿದರು.

ಈ ವೇಳೆ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಇತಿಹಾಸ ಮರುಕಳಿಸುವಂತೆ ಮಾಡಲು ಹಾಗೂ ನಮ್ಮ ತಪ್ಪನ್ನು ತಿದ್ದಿಕೊಳ್ಳುವ ನಿಟ್ಟಿನಲ್ಲಿ ಚರಿತ್ರೆಕಾರರ ನೆನಪು ಅಗತ್ಯವಾಗಿದೆ. ಹೀಗಾಗಿ ಈ ಕ್ಯಾಲೆಂಡರ್‌ನಲ್ಲಿ ಬಸವಣ್ಣ, ಜ್ಯೋತಿಭಾಫುಲೆ, ನಾಲ್ವಡಿ ಅವರ ಸಂದೇಶಗಳೂ ಇವೆ. ಸಮ ಸಮಾಜ ಕಟ್ಟುವ ನಿಟ್ಟಿನಲ್ಲಿ ಅಂಬೇಡ್ಕರ್ ಸಾಕಷ್ಟು ಕೆಲಸ ಮಾಡಿದರು. ಅವರು ಕೇವಲ ಭಾರತಕ್ಕೆ ಮಾತ್ರ ಸೀಮಿತರಲ್ಲ. ಇಡೀ ವಿಶ್ವವೇ ಅವರನ್ನು ಅಪ್ಪಿಕೊಳ್ಳುತ್ತಿದೆ. ಕ್ಯಾಲೆಂಡರ್‌ಗೆ ಮಾತ್ರ ಸೀಮಿತರಾಗದೇ ಅವರ ಪುತ್ಥಳಿ, ಭಾಷಣ, ಆಡಿದ ಮಾತುಗಳು ವಿಶ್ವವ್ಯಾಪಿಯಾಗುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಇಡೀ ಸಮಾಜಕ್ಕೆ ಮಾನವೀಯತೆ ಅಗತ್ಯವಾಗಿದೆ. ಹೀಗಾಗಿ ಈ ಕ್ಯಾಲೆಂಡರ್‌ನಲ್ಲಿ ಮುದ್ರಿಸಿರುವ ಸಂದೇಶಗಳು ಪ್ರಸ್ತುತವಾಗಿವೆ. ದಲಿತ ಯುವಕನನ್ನು ವಿವಾಹವಾದಳು ಎಂಬ ಕಾರಣಕ್ಕೆ ಲಿಂಗಾಯತ ಸಮುದಾಯದ ಕುಟುಂಬವೊಂದು ಗರ್ಭಿಣಿ ಪುತ್ರಿಯನ್ನೇ ಮರ್ಯಾದಾ ಹತ್ಯೆ ಮಾಡಿದ ಘಟನೆಗಳೂ ನಡೆಯುತ್ತಿವೆ. ಹೀಗಾಗಿ ಇಂತಹ ಸಂದೇಶಗಳು ಹೆಚ್ಚು ಪ್ರಚಾರ ಪಡೆಯಬೇಕಾದ ಅಗತ್ಯವಿದೆ. ಪ್ರಧಾನಿ ಮೋದಿ ಕ್ರಿಸ್‌ಮಸ್ ಸಂದರ್ಭದಲ್ಲಿ ಚರ್ಚಿಗೆ ಹೋಗುತ್ತಾರೆ. ಆದರೆ ಹಿಂದೂ ಧರ್ಮ ಎಂದು ಹೇಳಿಕೊಂಡು ಚರ್ಚ್ ಮೇಲೆ ದಾಳಿ ನಡೆದಾಗ ಎಲ್ಲರೂ ಸುಮ್ಮನಿರುವುದು ಬೇಸರದ ಸಂಗತಿ ಎಂದರು.

ಕಾರ್ಯಕ್ರಮದಲ್ಲಿ ಸಾರಿಗೆ ಇಲಾಖೆ ಅಧಿಕಾರಿಗಳಾದ ಶ್ರೀನಿವಾಸ್, ವೀರೇಶ್, ಎಂ.ಕೆ.ರೇವಣ್ಣ, ರಶ್ಮಿ, ದಿನೇಶ್, ಹೇಮಂತ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಕೆಎಸ್‌ಆರ್‌ಟಿಸಿ ಕನ್ನಡ ಕ್ರಿಯಾ ಸಮಿತಿಯಿಂದ ನಾಳೆ ರಾಜ್ಯೋತ್ಸವ



ಮೈಸೂರು, ಡಿ.27(ಜಿಎ)–ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮೈಸೂರು ವಿಭಾಗದ ಕನ್ನಡ ಕ್ರಿಯಾ ಸಮಿತಿ ವತಿಯಿಂದ ಡಿ.29ರಂದು ಸಂಜೆ 5 ಗಂಟೆಗೆ ಕುವೆಂಪುನಗರದ ಬಸ್ ನಿಲ್ದಾಣದಲ್ಲಿ 70ನೇ ಕನ್ನಡ ರಾಜ್ಯೋತ್ಸವ ಹಾಗೂ ಕುವೆಂಪು ಜನ್ಮದಿನಾಚರಣೆ ಆಯೋಜಿಸಲಾಗಿದೆ ಎಂದು ಸಮಿತಿ ಅಧ್ಯಕ್ಷ ವೈ.ಈ. ಮಂಜುನಾಥ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಕಾರ್ಯಕ್ರಮವನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಆಗಮಿಸಲಿದ್ದಾರೆ. ಮುಖ್ಯ ಭಾಷಣವನ್ನು ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಮಾಡಲಿದ್ದಾರೆ ಎಂದು ತಿಳಿಸಿದರು.

ವಿಶೇಶ ಆಹ್ವಾನಿತರಾಗಿ ಉದ್ಯಮಿಗಳಾದ ಚಂದ್ರಹಾಸ್, ಹೆಚ್.ಆರ್.ಶ್ರೀನಿವಾಸ್, ಕೆಎಸ್‌ಆರ್‌ಟಿಸಿ ಮುಖ್ಯ ಯಾಂತ್ರಿಕ ಅಭಿಯಂತರ ಕೆ.ಹೆಚ್.ಶ್ರೀನಿವಾಸ್, ಮೈಸೂರು ನಗರ ವಿಭಾಗ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್, ಗ್ರಾಮಾಂತರ ನಿಯಂತ್ರಣಾಧಿಕಾರಿ ಬಿ.ಶ್ರೀನಿವಾಸ್, ಕೇಂದ್ರ ಕನ್ನಡ ಕ್ರಿಯಾ ಸಮಿತಿ ಗೌರವ ಅಧ್ಯಕ್ಷ ವ.ಚ.ಚನ್ನೇಗೌಡ, ರಾಜ್ಯಾಧ್ಯಕ್ಷ ಕೆ.ಎಸ್.ಪ್ರಭುಸ್ವಾಮಿ, ಕಾರ್ಯಾಧ್ಯಕ್ಷ ಕೆ.ಎಸ್.ಎಂ.ಹುಸೇನ್ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಿ.ಡಿ.ವಿಶ್ವನಾಥ್, ಶಿವಾನಂದ ದೇಸಾಯಿ, ಕೆ.ಮಹದೇವಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ವತಿಯಿಂದ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಸಾಧಕರಿಗೆ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.ಈ ಸಂದರ್ಭದಲ್ಲಿ ಉದ್ಯಮಿ ನಾರಾಯಣ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಎಲ್.ಸತೀಶ್, ಸಿದ್ದರಾಜು, ಮಂಜು, ಮಹಂತೇಶ್, ಸಿದ್ದೇಶ್, ನಾಗರಾಜು, ಮೂರ್ತಿ, ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟ ಸಂರಕ್ಷಣೆಗಾಗಿ 'ಪರಿಸರಕ್ಕಾಗಿ ನಾವು' ತಂಡದಿಂದ ಜ.4ರಂದು ನಡಿಗೆ

ಮೈಸೂರು, ಡಿ.27(ಜಿಎ)–ಪರಿಸರಕ್ಕಾಗಿ ನಾವು ತಂಡದಿಂದ ಚಾಮುಂಡಿಬೆಟ್ಟದ ಸಂರಕ್ಷಣೆಗಾಗಿ ನಡಿಗೆಯನ್ನು ಜ.4ರಂದು ಬೆಳಗ್ಗೆ 7.30ಕ್ಕೆ ಚಾಮುಂಡಿಬೆಟ್ಟದ ಪಾದದಿಂದ ಆಯೋಜಿಸಲಾಗಿದೆ. ನಡಿಗೆಯಲ್ಲಿ ಕಪ್ಪತ್ತಗುಡ್ಡ ನಂದಿವೇರಿ ಮಠದ ಸ್ವಾಮೀಜಿ, ನಿಡಸೋಸಿ ಮಠದ ಸ್ವಾಮೀಜಿ, ಕೆಸವತ್ತೂರು ಮಠದ ಸ್ವಾಮೀಜಿ, ತೊರೆನೂರು ಮಠದ ಸ್ವಾಮೀಜಿ, ಎ.ಟಿ.ರಾಮಸ್ವಾಮಿ, ಕೃಪಾಕರ ಸೇನಾನಿ, ಚಂದ್ರಕಾಂತ ವಡ್ಡು ಹೆಜ್ಜೆ ಹಾಕಲಿದ್ದಾರೆ. ತಿಂಡಿ, ನೀರು ನಿಮ್ಮ ಮನೆಯಿಂದ ತನ್ನಿ ಎಂದು ಪ್ರಕಟಣೆ ಮೂಲಕ ತಿಳಿಸಿದೆ.

ಹುಟ್ಟುಹಬ್ಬದ ಶುಭಾಶಯ...



ಶನಿವಾರ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರೂ ಆದ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಅವರಿಗೆ ಶುಭಾಶಯ ಕೋರಲಾಯಿತು. ಈ ವೇಳೆ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಸಿದ್ದರಾಮಯ್ಯಗೌಡ, ತಾಪಂ ಸದಸ್ಯ ಹೆಬ್ಬಾಳೇಗೌಡ, ಬಂಡಿಪಾಳ್ಯ ವಿಜಯ್‌ಕುಮಾರ್, ಯುವ ಮುಖಂಡರಾದ ಲೋಕೇಶ್‌ಕುಮಾರ್, ಕಡಕೋಳ ಶಿವಲಿಂಗ, ಮುಂಡಗಳ್ಳಿ ಮಂಜು, ರೇವಣ್ಣ, ಮನು, ಉಮೇಶ, ಜೀವನ್ ಇನ್ನಿತರರಿದ್ದರು.

ಕಲಾಮಂದಿರಲ್ಲಿ ಶಾರದೋತ್ಸವ ಆಚರಣೆ



ಮೈಸೂರಿನ ಶ್ರೀಜಯಚಾಮರಾಜೇಂದ್ರ ಪದವಿ ಪೂರ್ವ ಕಾಲೇಜು ವಾರ್ಷಿಕೋತ್ಸವವಾದ 'ಶಾರದೋತ್ಸವ' ಕಲಾಮಂದಿರದಲ್ಲಿ ನಡೆಯಿತು.

ಮೈಸೂರು, ಡಿ.27(ಜಿಎ)–ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಪದವಿ ಪೂರ್ವ ಕಾಲೇಜಿನ ವಾರ್ಷಿಕೋತ್ಸವವಾದ 'ಶಾರದೋತ್ಸವ'ವನ್ನು ಶನಿವಾರ ಕಲಾಮಂದಿರಲ್ಲಿ ಆಚರಿಸಲಾಯಿತು.

ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮತ್ತು ಹಿರಿಯ ವಕೀಲರಾದ ಕೆ.ಕೆ. ಅಮರನಾಥ್ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಸಂವಿಧಾನ ವಿವರಿಸಿರುವಂತೆ ವೈಜ್ಞಾನಿಕ ಮನೋಭಾವ, ಮಾನವತಾ ವಾದ ಮತ್ತು ಪ್ರಶ್ನಿಸುವ ಮನೋಭಾವನ್ನು ರೂಢಿಸಿಕೊಳ್ಳುವುದು ಸೇರಿದಂತೆ ಅವರ ಮೂಲಭೂತ ಕರ್ತವ್ಯಗಳನ್ನು ವಿದ್ಯಾರ್ಥಿಗಳಿಗೆ ನೆನಪಿಸಿದರು.

ವಿದ್ಯಾರ್ಥಿಗಳು ಯಕ್ಷಗಾನ, ಡೊಳ್ಳು ಕುಣಿತ, ಕೊಡವ ನೃತ್ಯ ಸೇರಿದಂತೆ ವಿವಿಧ ಭಾಷೆಗಳ ಹಾಡುಗಳಿಗೆ ನೃತ್ಯ ಪ್ರದರ್ಶಿಸುವ ಮೂಲಕ ಕರ್ನಾಟಕದ ವೈಭವ ಸೃಷ್ಟಿಸಿದರು. ಈ ಸಂದರ್ಭದಲ್ಲಿ 2024–25ರ ಅಗ್ರಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಅಧ್ಯಕ್ಷ ಎನ್.ಸಚ್ಚಿದಾನಂದ ಮೂರ್ತಿ, ಕಾರ್ಯದರ್ಶಿ ಆರ್.ಆನಂದ್, ಟ್ರಸ್ಟಿ ಎಂ.ಎ.ಜಯಶ್ರೀ, ಪ್ರಾಂಶುಪಾಲ ಸಾಗರ್ ಚಕ್ರವರ್ತಿ, ಉಪ ಪ್ರಾಂಶುಪಾಲ ಬಿ.ಹರ್ಷ, ಉಪನ್ಯಾಸಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ


ಮೈಸೂರು,ಡಿ.27–ಜ್ಯೋತಿನಗರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾರ್ಯ ನಿಮಿತ್ತ ಡಿ.29ರಂದು ಬೆಳಿಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ಆಲನಹಳ್ಳಿ, ಗಿರಿದರ್ಶಿನಿ ಬಡಾವಣೆ, ಪೊಲೀಸ್ ಬಡಾವಣೆ 1ನೇ ಮತ್ತು 2ನೇ ಹಂತ, ನೇತಾಜಿನಗರ, ಕೆ.ಎಸ್.ಆರ್.ಟಿ.ಸಿ. ಬಡಾವಣೆ, ನಂದಿನಿ ಬಡಾವಣೆ 1ನೇ ಮತ್ತು 2ನೇ ಹಂತ, ನೇತಾಜಿನಗರ, ಡಾಕ್ಟರ್ ಬಡಾವಣೆ, ಗಾಯತ್ರಿ ಬಡಾವಣೆ, ವಾಸವಿ ಶಾಂತಿಧಾಮ ಸುತ್ತಮುತ್ತ, ರುಕ್ಮಿಣಿ ಚೌಟ್ರಿ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಹಾಗೆಯೇ ವಿವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ ಸೌತ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಡಿ.29ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ಶ್ರೀರಾಂಪುರ 2ನೇ ಹಂತ, ರಮಾಭಾಯಿನಗರ, ಮಹದೇವಪುರ, ಜಯನಗರ 1ರಿಂದ 20ನೇ ಕ್ರಾಸ್, ಪರಸಯ್ಯನ ಹುಂಡಿ, ಶಿವಪುರ, ಕುವೆಂಪುನಗರ ಕೆ ಬ್ಲಾಕ್, ಅಪೋಲೊ ಆಸ್ಪತ್ರೆಯ ಸುತ್ತಮುತ್ತ, ಚಿಕ್ಕಹರದನಹಳ್ಳಿ, ಗೊರೂರು, ಕಳಲವಾಡಿ, ಕೋಟೆಹುಂಡಿ, ಯಡಹಳ್ಳಿ, ರಾಯನಕೆರೆ, ಸರಸ್ವತಿಪುರಂ 1ನೇ ಮುಖ್ಯರಸ್ತೆಯಿಂದ 6ನೇ ಮುಖ್ಯರಸ್ತೆ, ಭಾಗಶಃ ಕೆ.ಜಿ.ಕೊಪ್ಪಲು ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಡಾ.ಪುರುಷೋತ್ತಮ್ ಬಿಳಿಮಲೆ ಮೈಸೂರು ಜಿಲ್ಲಾ ಪ್ರವಾಸ



ಮೈಸೂರು,ಡಿ.27–ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಡಿ.30ರಂದು ಮೈಸೂರು ಜಿಲ್ಲಾ ಪ್ರವಾಸವನ್ನು ಕೈಗೊಂಡಿದ್ದಾರೆ. ಅಂದು ಬೆಳಗ್ಗೆ 10 ಗಂಟೆಗೆ ಮೈಸೂರಿಗೆ ಆಗಮಿಸಲಿದ್ದಾರೆ. ನಂತರ ಬೆಳಗ್ಗೆ 10.30 ಗಂಟೆಗೆ ಕಲಾಮಂದಿರದ ಪಕ್ಕದ ಕಿರುರಂಗಮಂದಿರದಲ್ಲಿ ಸಂತಕವಿ ಕನಕದಾಸ ಮತ್ತು ತತ್ವಪದಕಾರ ಅಧ್ಯಯನ ಕೇಂದ್ರ ಮತ್ತು ಪ್ರಜಾವಾಣಿ ಸಹಯೋಗದಲ್ಲಿ ಆಯೋಜಿಸಿರುವ ಮಾಧ್ಯಮದಲ್ಲಿ ಕನಕ ಪ್ರಜ್ಞೆ ವಿಚಾರಗೋಷ್ಠಿಯಲ್ಲಿ ಭಾಗವಹಿಸುವರು.


ಹೊಯ್ಸಳ ಕರ್ನಾಟಕ ಸಂಘದ 2026ರ ದಿನದರ್ಶಿಕೆ ಬಿಡುಗಡೆ



ಮೈಸೂರಿನ ಹೊಯ್ಸಳ ಕರ್ನಾಟಕ ಸಂಘದ ನೂತನ ದಿನದರ್ಶಿಕೆಯನ್ನು ಸಂಘದ ಧರ್ಮದರ್ಶಿಗಳಾಗಿದ್ದ ಪದ್ಮಭೂಷಣ ಪುರಸ್ಕೃತ ಡಾ.ಎಸ್.ಎಲ್.ಭೈರಪ್ಪನವರ ಧರ್ಮಪತ್ನಿ ಶ್ರೀಮತಿ ಸರಸ್ವತಿ ಭೈರಪ್ಪ, ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ ಬಿಡುಗಡೆ ಮಾಡಿದರು. ಸಂಘದ ಮಾಜಿ ಅಧ್ಯಕ್ಷ ಪಿ.ವಿ.ಭಾರದ್ವಜ, ಕಾರ್ಯದರ್ಶಿ ಎನ್.ಎಸ್.ಜಯಸಿಂಹ, ಖಜಾಂಚಿ ಸುಂದರಮೂರ್ತಿ, ಸಹ ಕಾರ್ಯದರ್ಶಿ ವಿಜಯ್‌ಕುಮಾರ್, ಕಾರ್ಯಕಾರಿ ಸಮಿತಿ ಸದಸ್ಯರಾದ ರಂಗನಾಥ್, ಪ್ರಶಾಂತ್, ಅನುಪಮಾ, ಶ್ರೀಲಕ್ಷ್ಮಿ, ಹಿರಿಯ ಸದಸ್ಯರಾದ ಗಿರಿಜಾ ಭಾರಧ್ವಾಜ, ವಿಜಯಾ ಪ್ರಸಾದ್, ನಾಗೇಶ್, ಕಶ್ಯಪ್ ಹಾಜರಿದ್ದರು.

ದೇಶ – ವಿದೇಶ

ಬಾಂಗ್ಲಾದಲ್ಲಿ ಗಾಯಕ ಜೇಮ್ಸ್ ಸಂಗೀತ ಕಚೇರಿ ಮೇಲೆ ದಾಳಿ; 25ಕ್ಕೂ ಹೆಚ್ಚು ಮಂದಿಗೆ ಗಾಯ



ಢಾಕಾ: ಬಾಂಗ್ಲಾದೇಶದಲ್ಲಿ ಜಿಹಾದಿಗಳು ಅಟ್ಟಹಾಸ ಮೆರೆಯುತ್ತಿದ್ದು, ಕಲಾವಿದರು, ಸಾಂಸ್ಕೃತಿಕ ಸಂಸ್ಥೆಗಳು ಮತ್ತು ಪ್ರಗತಿಪರ ಚಿಂತಕರ ಮೇಲೆ ನಡೆಯುತ್ತಿರುವ ಸರಣಿ ದಾಳಿಗಳು ಮುಂದುವರಿದಿದೆ. ಫರೀದ್‌ಪುರದಲ್ಲಿ ನಡೆಯಬೇಕಿದ್ದ ಜನಪ್ರಿಯ ಗಾಯಕ ಜೇಮ್ಸ್ ಅವರ ಸಂಗೀತ ಕಾರ್ಯಕ್ರಮದ ಮೇಲೆ ಗುಂಪೊಂದು ದಾಳಿ ನಡೆಸಿದ್ದು, ಇದೀಗ ಕಾರ್ಯಕ್ರಮವನ್ನೇ ರದ್ದುಗೊಳಿಸಲಾಗಿದೆ. ಫರೀದ್‌ಪುರ ಜಿಲ್ಲಾ ಶಾಲೆಯ 185 ನೇ ವಾರ್ಷಿಕೋತ್ಸವದ ಅಂಗವಾಗಿ ಸಂಗೀತ ಕಚೇರಿಯನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮ ಶುಕ್ರವಾರ ರಾತ್ರಿ 9.30 ಗಂಟೆ ಸುಮಾರಿಗೆ ನಡೆಯಬೇಕಿತ್ತು. ಈ ವೇಳೆ ಇದ್ದಕ್ಕಿದ್ದಂತೆ ಗುಂಪೊಂದು ಸ್ಥಳಕ್ಕೆ ನುಗ್ಗಿ ಕಚೇರಿಯಲ್ಲಿ ಭಾಗವಹಿಸುತ್ತಿದ್ದವರ ಮೇಲೆ ಕಲ್ಲು ಮತ್ತು ಇಟ್ಟಿಗೆಗಳನ್ನು ಎಸೆಯಲು ಪ್ರಾರಂಭಿಸಿದ್ದಾರೆ. ಇದರಿಂದಾಗಿ 25ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಘಟನೆ ಬಳಿಕ ಸಂಗೀತ ಕಚೇರಿಯನ್ನು ರದ್ದುಗೊಳಿಸಲಾಗಿದೆ.

ಸ್ವಯಂ ಘೋಷಿತ ದೇವಮಾನವನ ಪಾದಕ್ಕೆ ಎರಗಿದ ಪೊಲೀಸ್ ಅಧಿಕಾರಿ



ರಾಯಪುರ: ಮಧ್ಯಪ್ರದೇಶದ ಛತ್ತಾರ್ಪುರದ ಬಾಗೇಶ್ವರ ಧಾಮದ ಮುಖ್ಯಸ್ಥ, ಸ್ವಯಂಘೋಷಿತ ದೇವಮಾನವ ಪಂಡಿತ್ ಧೀರೇಂದ್ರ ಕೃಷ್ಣ ಶಾಸ್ತ್ರಿ ಅವರು ಸರ್ಕಾರಿ ವಿಮಾನವೊಂದರಲ್ಲಿ ಛತ್ತೀಸ್‌ಗಢಕ್ಕೆ ಬಂದಾಗ ಕರ್ತವ್ಯ ನಿರತ ಪೊಲೀಸ್ ಅಧಿಕಾರಿಯೊಬ್ಬರು ಅವರ ಪಾದಗಳಿಗೆ ಎರಗಿರುವ ವಿಡಿಯೋವೊಂದು ಸಾಮಾಜಿಕ ಜಾಲತಾಣಗಳಲ್ಲಿ ಸಖತ್ ವೈರಲ್ ಆಗುತ್ತಿದೆ. ಇದು ಪೊಲೀಸ್ ಅಧಿಕಾರಿಯ ವೈಯಕ್ತಿಕ ನಂಬಿಕೆ ಎಂದು ಬಿಜೆಪಿ ಸಮರ್ಥಿಸಿಕೊಂಡಿದ್ದರೆ, ಇದು ಸನಾತನ ಧರ್ಮಕ್ಕೆ ವಿರುದ್ಧವಾಗಿದೆ ಎಂದು ಪ್ರತಿಪಕ್ಷ ಆರೋಪಿಸಿದೆ. ಶಾಸ್ತ್ರಿ ಅವರು ರಾಜ್ಯ ಸಚಿವ ಗುರು ಖುಷ್ವಂತ್ ಸಾಹೇಬ್ ಅವರೊಂದಿಗೆ ಭಿಲಾಯ್ ಪಟ್ಟಣದಲ್ಲಿ ಆಯೋಜಿಸಿದ್ದ ಧಾರ್ಮಿಕ ಪ್ರವಚನ ಕಾರ್ಯಕ್ರಮಕ್ಕಾಗಿ ಗುರುವಾರ ರಾಯಪುರಕ್ಕೆ ಆಗಮಿಸಿದ್ದರು. ಶಾಸ್ತ್ರಿ ಮತ್ತು ಸಚಿವರು ವಿಮಾನದಿಂದ ಇಳಿದಾಗ ಸಮವಸ್ತ್ರದಲ್ಲಿರುವ ಪೊಲೀಸ್ ಅಧಿಕಾರಿ ಕ್ಯಾಪ್ ಮತ್ತು ಬೂಟುಗಳನ್ನು ತೆಗೆದು ಕೃಷ್ಣ ಶಾಸ್ತ್ರಿ ಪಾದಕ್ಕೆ ಎರಗುತ್ತಾರೆ.

ಚಳಿಗಾಲ, ಹಿಮಪಾತದ ಪ್ರಭಾವ: ಅಮೆರಿಕದಲ್ಲಿ 1000ಕ್ಕೂ ಹೆಚ್ಚು ವಿಮಾನಗಳು ರದ್ದು



ವಾಷಿಂಗ್ಟನ್: ಕ್ರಿಸ್‌ಮಸ್ ಪ್ರಯಾಣದ ಸಂದರ್ಭದಲ್ಲಿ ಅಮೆರಿಕಾದಲ್ಲಿ 1,000ಕ್ಕೂ ಹೆಚ್ಚು ವಿಮಾನಗಳು ರದ್ದಾಗಿವೆ. ಇದಕ್ಕೆ ಕಾರಣ ಮಧ್ಯಪಶ್ಚಿಮ ಮತ್ತು ಈಶಾನ್ಯ ಭಾಗಗಳಲ್ಲಿ ತೀವ್ರ ಚಳಿಗಾಲದ ಬಿರುಗಾಳಿ ಮತ್ತು ಭಾರೀ ಹಿಮಪಾತದ ಮುನ್ಸೂಚನೆ. ನ್ಯೂಯಾರ್ಕ್ ನಗರದಲ್ಲಿ ಸುಮಾರು 10 ಇಂಚುಗಳಷ್ಟು ಹಿಮ ಬೀಳುವ ನಿರೀಕ್ಷೆಯಿದೆ. ಶುಕ್ರವಾರ ಮಧ್ಯಾಹ್ನ 1 ಗಂಟೆಯವರೆಗೆ 1,191 ವಿಮಾನಗಳು ರದ್ದಾಗಿದ್ದು, 3,974 ವಿಮಾನಗಳು ವಿಳಂಬವಾಗಿವೆ ಎಂದು 'ಫ್ಲೈಟ್ ಅವೇರ್' ವೆಬ್‌ಸೈಟ್ ತಿಳಿಸಿದೆ. 'ನ್ಯಾಷನಲ್ ವೆದರ್ ಸರ್ವಿಸ್' (ಎನ್.ಡಬ್ಲ್ಯೂ.ಎಸ್.) ಪ್ರಕಾರ ಗ್ರೇಟ್ ಲೇಕ್ಸ್ ಪ್ರದೇಶದಲ್ಲಿ ಹಿಮಪಾತ ಮುಂದುವರೆಯಲಿದ್ದು, ಬಿರುಗಾಳಿ ಈಶಾನ್ಯದತ್ತ ಚಲಿಸಲಿದೆ. ರಜೆಯಿಂದ ಹಿಂದಿರುಗುವ ಪ್ರಯಾಣಿಕರಿಗೆ ರಸ್ತೆಗಳು ಅಪಾಯಕಾರಿಯಾಗಿರಲಿವೆ ಎಂದು ಎಚ್ಚರಿಕೆ ನೀಡಲಾಗಿದೆ.

ಜೀವ ಬೆದರಿಕೆಯಿದೆ ರಕ್ಷಣೆ ಕೊಡಿ: ಬಿಹಾರ ಸರ್ಕಾರಕ್ಕೆ ಲಾಲೂ ಪುತ್ರ ತೇಜ್ ಪ್ರತಾಪ್ ಪತ್ರ



ಪಾಟ್ನಾ: ತಮಗೆ ಜೀವ ಬೆದರಿಕೆ ಇದ್ದು ಕೂಡಲೇ ರಕ್ಷಣೆ ನೀಡಬೇಕು ಎಂದು ಬಿಹಾರ ಮಾಜಿ ಸಿಎಂ ಲಾಲೂ ಪ್ರಸಾದ್ ಯಾದವ್ ಪುತ್ರ ಹಾಗೂ ಜೆಜೆಡಿ ಮುಖ್ಯಸ್ಥ ತೇಜ್ ಪ್ರತಾಪ್ ಯಾದವ್ ಬಿಹಾರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ ಎಂದು ತಿಳಿದುಬಂದಿದೆ. ಜನಶಕ್ತಿ ಜನತಾ ದಳ (ಜೆಜೆಡಿ) ಮುಖ್ಯಸ್ಥ ತೇಜ್ ಪ್ರತಾಪ್ ಯಾದವ್ ಅವರು ತಮ್ಮ ಪಕ್ಷದ ಉಚ್ಚಾಟಿತ ರಾಷ್ಟ್ರೀಯ ವಕ್ತಾರ ಸಂತೋಷ್ ರೇಣು ಯಾದವ್ ನನ್ನನು ಕೊಲ್ಲುವುದಾಗಿ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ಪೊಲೀಸ್ ದೂರು ದಾಖಲಿಸಿದ್ದಾರೆ. ಈ ವರ್ಷದ ವಿಧಾನಸಭಾ ಚುನಾವಣೆಯಲ್ಲಿ ಮಹುವಾ ವಿಧಾನಸಭಾ ಸ್ಥಾನದಿಂದ ಚುನಾವಣೆಯಲ್ಲಿ ಸೋತ ಬಿಹಾರದ ಮಾಜಿ ಸಚಿವ ತೇಜ್ ಪ್ರತಾಪ್, ಹೆಚ್ಚಿನ ಭದ್ರತೆಯನ್ನು ಕೋರಿ ಉಪಮುಖ್ಯಮಂತ್ರಿ ಮತ್ತು ಗೃಹ ಸಚಿವ ಸಾಮ್ರಾಟ್ ಚೌಧರಿ ಅವರಿಗೆ ಪತ್ರ ಬರೆದಿದ್ದಾರೆ. ಈ ಕುರಿತು ಶನಿವಾರ ಸುದ್ದಿಸಂಸ್ಥೆ ಜೊತೆ ಮಾತನಾಡಿದ ಚೌಧರಿ, ಹೌದು, ನನಗೆ ಅವರ ಪತ್ರ ಬಂದಿದೆ. ಈ ವಿಷಯವನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದರು.

ಅಮೆರಿಕ–ಚೀನಾ ನಡುವೆ ಹೊಸ ಸಮರ; ಯುಎಸ್‌ನ 20 ರಕ್ಷಣಾ ಸಂಸ್ಥೆಗಳಿಗೆ ನಿರ್ಬಂಧ



ತೈವಾನ್: ತೈವಾನ್‌ಗೆ ದಾಖಲೆಯ 11.1 ಬಿಲಿಯನ್ ಶಸ್ತ್ರಾಸ್ತ್ರ ಮಾರಾಟ ಪ್ಯಾಕೇಜ್‌ಗೆ ಟ್ರಂಪ್ ಆಡಳಿತ ಅನುಮೋದನೆ ನೀಡಿದ್ದಕ್ಕೆ ಪ್ರತಿಕ್ರಿಯೆಯಾಗಿ ಚೀನಾ ಶುಕ್ರವಾರ ಅಮೆರಿಕದ 20 ರಕ್ಷಣಾ ಸಂಸ್ಥೆಗಳ ಮೇಲೆ ನಿರ್ಬಂಧಗಳನ್ನು ವಿಧಿಸಿದೆ. ತೈವಾನ್ ವಿಷಯದ ಕುರಿತು ಚೀನಾವನ್ನು ಕೆರಳಿಸುವ ಯಾವುದೇ ಪ್ರಯತ್ನಕ್ಕೆ ಕಠಿಣ ಪ್ರತಿಕ್ರಿಯೆ ನೀಡಲಾಗುವುದು ಎಂದು ಚೀನಾ ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ಎಚ್ಚರಿಸಿದೆ.

ತೈವಾನ್‌ಗೆ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರ ಮಾರಾಟದ ಬಗ್ಗೆ ಅಮೆರಿಕದ ಘೋಷಣೆಗೆ ಪ್ರತಿಕ್ರಿಯೆಯಾಗಿ ಇತ್ತೀಚಿನ ವರ್ಷಗಳಲ್ಲಿ ತೈವಾನ್‌ಗೆ ಶಸ್ತ್ರಾಸ್ತ್ರ ಒದಗಿಸುವಲ್ಲಿ ಭಾಗಿಯಾಗಿರುವ 20 ಅಮೇರಿಕನ್ ಮಿಲಿಟರಿ ಸಂಬಂಧಿತ ಸಂಸ್ಥೆಗಳು ಮತ್ತು 10 ಹಿರಿಯ ಕಾರ್ಯನಿರ್ವಾಹಕರ ವಿರುದ್ಧ ಪ್ರತಿಕ್ರಮಗಳನ್ನು ತೆಗೆದುಕೊಳ್ಳಲು ಬೀಜಿಂಗ್ ನಿರ್ಧರಿಸಿದೆ ಎಂದು ಸಚಿವಾಲಯ ತಿಳಿಸಿದೆ.

ಸ್ಪರ್ಧಾತ್ಮಕ ಯುಗದಲ್ಲಿ ಕಂಪ್ಯೂಟರ್ ಶಿಕ್ಷಣ ಅಗತ್ಯ

ಕುಶಾಲನಗರ, ಡಿ.27(ಆರ್‌ಹೆಚ್)– ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳಿಗೆ ಕಂಪ್ಯೂಟರ್ ಜ್ಞಾನವನ್ನು ಬೆಳೆಸುವ ಮೂಲಕ ಅವರಿಗೆ ಉತ್ತಮ ಭವಿಷ್ಯ ರೂಪಿಸುವಲ್ಲಿ ಪೋಷಕರು ಹಾಗೂ ಶಿಕ್ಷಕರು ಶ್ರಮಿಸಬೇಕು ಎಂದು ವಿರಾಜಪೇಟೆ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಾಂಶುಪಾಲೆ ಎನ್.ಕೆ.ಜ್ಯೋತಿ ಸಲಹೆ ನೀಡಿದ್ದಾರೆ.

ಸಮೀಪದ ಗುಡ್ಡೆಹೊಸೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಬೊಳ್ಳೂರಿನ ಐಶ್ವರ್ಯ ಪಬ್ಲಿಕ್ ಸ್ಕೂಲ್ ಮತ್ತು ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ನೃತ್ಯ ಕಲಾಂಜಲಿ ಮತ್ತು ಕಾಲೇಜು ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮನೆಯಲ್ಲಿ ಮಕ್ಕಳ ಕೈಗೆ ಮೊಬೈಲ್ ನೀಡಿ ನೀವು ಮನೆ ಕೆಲಸ ಮಾಡುವುದು ಹಾಗೂ ಟಿವಿ ನೋಡುವಂತ ತಪ್ಪು ಮಾಡಬೇಡಿ. ಮಕ್ಕಳ ಎದುರು ಟಿವಿ, ಮೊಬೈಲ್ ನೋಡ ಬೇಡಿ. ಮಕ್ಕಳ ಬಗ್ಗೆ ನಿರ್ಲಕ್ಷ್ಯ ಮಾಡಬೇಡಿ. ಇದರಿಂದ ಮಕ್ಕಳು



ಬೊಳ್ಳೂರಿನ ಐಶ್ವರ್ಯ ಪಬ್ಲಿಕ್ ಸ್ಕೂಲ್‌ನಲ್ಲಿ ವಿದ್ಯಾರ್ಥಿನಿಯರು ನಡೆಸಿದ ಸಾಂಸ್ಕೃತಿಕ ಕಾರ್ಯಕ್ರಮದ ಝಲಕ್

ತಪ್ಪು ದಾರಿ ತುಳಿಯುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇದು ಡಿಜಿಟಲ್ ಯುಗ ಮಕ್ಕಳಿಗೆ ಎಲ್ಲಾ ರೀತಿಯ ಜ್ಞಾನ ಇದೆ. ಮಕ್ಕಳು ತುಂಬ ಬುದ್ಧಿವಂತರಾಗಿದ್ದಾರೆ. ಇಂತಹ ಮಕ್ಕಳಿಗೆ ಮೊಬೈಲ್ ಬದಲು ಕಂಪ್ಯೂಟರ್ ಜ್ಞಾನ ಬೆಳೆಸಿ ಎಂದು ಕಿವಿಮಾತು ಹೇಳಿದರು.

ಕೂಡಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಹಂಡ್ರಂಗಿ ನಾಗರಾಜು ಮಾತನಾಡಿ, ಈ ವಿದ್ಯಾಸಂಸ್ಥೆ ಮಕ್ಕಳಿಗೆ ಉತ್ತಮ ಗುಣಾತ್ಮಕ ಶಿಕ್ಷಣದೊಂದಿಗೆ ಅವರಿಗೆ ಕೌಶಲಗಳನ್ನು ಕಲಿಸುತ್ತಿದೆ. ಈ ಸಂಸ್ಥೆ ಪ್ರತಿವರ್ಷ ಪಿಯುಸಿ ಪರೀಕ್ಷೆಯಲ್ಲಿ ಶೇ.ನೂರು ಫಲಿತಾಂಶ ತರುವ ಮೂಲಕ ಉತ್ತಮ ಸಾಧನೆ ಮಾಡುತ್ತಿದ್ದು, ಸಂಸ್ಥೆ ಅಧ್ಯಕ್ಷರು ಹಾಗೂ ಶಿಕ್ಷಕ ವರ್ಗದ ಕೊಡುಗೆ ಅಪಾರವಾಗಿದೆ ಎಂದರು. ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿ ಕಠಿಣ ಪರಿಶ್ರಮದೊಂದಿಗೆ ಚನ್ನಾಗಿ ಓದಿ ಪಿಯುಸಿಯಲ್ಲಿ ಹೆಚ್ಚಿನ ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಬೇಕು.ಜೊತೆಗೆ ಸಂಸ್ಥೆಗೂ ಹಾಗೂ ಪೋಷಕರಿಗೂ ಕೂಡ ಕೀರ್ತಿ ತರಬೇಕು ಎಂದು ಹೇಳಿದರು.

ಸಂಸ್ಥಾಪಕ ಅಧ್ಯಕ್ಷ ಪುಲಿಯಂಡ ರಾಮ್ ದೇವಯ್ಯ ಅಧ್ಯಕ್ಷತೆ ವಹಿಸಿದ್ದರು. ಪಿಯು ಕಾಲೇಜು ಪ್ರಾಂಶು ಪಾಲ ಅಮ್ಮತಾಂಡ ಜೋಯಪ್ಪ ಪಬ್ಲಿಕ್ ಸ್ಕೂಲ್ ಹಾಗೂ ಕಾಲೇಜಿನ ವರದಿ ವಾಚಿಸಿದರು. ವಿದ್ಯಾ ಸಂಸ್ಥೆ ಪ್ರಮುಖ ಪುಲಿಯಂಡ ಸುಬ್ಬಯ್ಯ, ಜಯಂತಿ ಸುಬ್ಬಯ್ಯ ಹಾಗೂ ಕಾವೇರಮ್ಮ ಪುಲಿಯಂಡರಾಮು, ಕಾಲೇಜಿನ ಉಪ ಪ್ರಾಂಶುಪಾಲ ಮದನ್ ಪಾಲ್ಗೊಂಡಿದ್ದರು. ಉಪನ್ಯಾಸಕಿ ರೇಷ್ಮನವೀನ ಸ್ವಾಗತಿಸಿದರು. ಹರ್ಷಿತದೇಚಮ್ಮ ವಂದಿಸಿದರು. ಶರ್ಲಿ ಸುಬ್ಬಯ್ಯ ನಿರೂಪಿಸಿದರು.

ಸಂಸದ ಯದುವೀರ್‌ಗೆ ಸೈನಿಕ ಶಾಲೆಯ ಬೆಳವಣಿಗೆ ಮಾಹಿತಿ ನೀಡಿದ ಕರ್ನಲ್

ಮಡಿಕೇರಿ, ಡಿ.27– ಕೂಡಿಗೆ ಸೈನಿಕ ಶಾಲೆಯ ಅಧಿಕಾರಿ ಕರ್ನಲ್ ಅಮರ್ ಜೀತ್ ಸಿಂಗ್ ಹಾಗೂ ಶಾಲೆಯ ಸ್ಥಳೀಯ ಆಡಳಿತ ಮಂಡಳಿ ಸದಸ್ಯರು ಕೊಡಗು–ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಭೇಟಿಯಾಗಿ ಶಾಲೆಯ ಸಾಧನೆಗಳು ಹಾಗೂ ಗಣನೀಯ ಬೆಳವಣಿಗೆಗಳ ಕುರಿತು ಮಾಹಿತಿ ನೀಡಿದರು.

ಶಾಲೆಯ ಪರಿಣಾಮಕಾರಿ ಕಾರ್ಯನಿರ್ವಹಣೆ, ರಾಷ್ಟ್ರೀಯ ರಕ್ಷಣಾ ಅಕಾಡೆಮಿ(ಎನ್‌ಡಿಎ) ಹಾಗೂ ನೌಕಾ ಅಕಾಡೆಮಿ (ಐಎನ್‌ಎ)ಗೆ ಸೇರ್ಪಡೆ ಯಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಏರಿಕೆ ಹಾಗೂ ನಾಗರಿಕ ಸೇವೆಗಳನ್ನೂ ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿ ರಾಷ್ಟ್ರಾದ್ಯಂತ ದೇಶ ಸೇವೆಯಲ್ಲಿ ತೊಡಗಿರುವ ಹಳೆಯ ವಿದ್ಯಾರ್ಥಿಗಳ ಸಾಧನೆಗಳನ್ನು ವಿವರಿಸಿದರು.

ಸಿಬಿಎಸ್‌ಸಿ ಬೋರ್ಡ್ ಪರೀಕ್ಷೆಗಳಲ್ಲಿ ಶಾಲೆಯ ನಿರಂತರ ಶೈಕ್ಷಣಿಕ ಸಾಧನೆ ಹಾಗೂ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ತೋರಿದ ಹಿರಿಮೆಯ ಮಾಹಿತಿ ಹಂಚಿಕೊಂಡರು. ಸೈನಿಕ ಶಾಲೆಯನ್ನು ಮತ್ತಷ್ಟು ಬಲಪಡಿಸಿ, ಅತ್ಯುನ್ನತ ಮಟ್ಟಕ್ಕೆ ಕೊಂಡೊಯ್ಯಲು ಸಂಪೂರ್ಣ ಬೆಂಬಲ ನೀಡುವುದಾಗಿ ಭರವಸೆ ನೀಡಿದರು.



ಕರ್ನಲ್ ಅಮರ್‌ಜೀತ್ ಸಿಂಗ್ ಸಂಸದ ಯದುವೀರ್‌ರನ್ನು ಭೇಟಿ ಮಾಡಿ ಶಾಲೆಯ ಬಗ್ಗೆ ಮಾಹಿತಿ ನೀಡಿದರು.

ಇಂದು ಪತ್ರಕರ್ತ ಅನಿಲ್‌ಗೆ ಗಾಂಧಿ ಪ್ರಿಯ ಪ್ರಶಸ್ತಿ ಪ್ರದಾನ



ಮಡಿಕೇರಿ: ಬೆಂಗಳೂರಿನ ಸಮರ್ಥ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ನೀಡುವ ವಾರ್ಷಿಕ ಪ್ರಶಸ್ತಿಗೆ ಪತ್ರಿಕೋದ್ಯಮ ಕ್ಷೇತ್ರದಿಂದ ಮಡಿ ಕೇರಿಯ ಹೆಚ್.ಟಿ.ಅನಿಲ್ ಆಯ್ಕೆಯಾಗಿದ್ದಾರೆ. ಸಮರ್ಥ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ವಾರ್ಷಿಕವಾಗಿ ಪತ್ರಿಕೋದ್ಯಮ, ಸಮಾಜ ಸೇವೆ, ಆರೋಗ್ಯ, ಶಿಕ್ಷಣ, ಸಾಹಿತ್ಯ, ಉದ್ಯಮ, ಸಂಗೀತ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ಸಾಧಕರನ್ನು ಗುರುತಿಸಿ ಗಾಂಧಿ ಪ್ರಿಯ ಹೆಸರಿನ ಪ್ರಶಸ್ತಿ ನೀಡುತ್ತಿದೆ. ಈ ವರ್ಷದ ಗಾಂಧಿ ಪ್ರಿಯ ಪ್ರಶಸ್ತಿಗೆ ಪತ್ರಿಕೋದ್ಯಮ ಕ್ಷೇತ್ರದಿಂದ ಹೆಚ್.ಟಿ.ಅನಿಲ್ ಆಯ್ಕೆಯಾಗಿದ್ದಾರೆ. ಪತ್ರಿಕೋದ್ಯಮ, ವಿದ್ಯುನ್ಮಾನ, ಬಾನುಲಿ ಮಾಧ್ಯಮಗಳಲ್ಲಿ ಹಾಗೂ ಸಾಮಾಜಿಕ ಸೇವೆಗಳಲ್ಲಿ ಅನಿಲ್‌ರ ಸಾಧನೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಎಸ್. ಆರ್. ವಿಜಯ ಸಮರ್ಥ ತಿಳಿಸಿದ್ದಾರೆ.

ಪ್ರಶಸ್ತಿ ಪ್ರದಾನ ಸಮಾರಂಭ ನಾಳೆ (ಭಾನುವಾರ) ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ಚಾಮರಾಜಪೇಟೆ ಕುವೆಂಪು ಸಭಾಂಗಣದಲ್ಲಿ ನಡೆಯಲಿರುವ ಸಮಾರಂಭದಲ್ಲಿ ವಿಶ್ರಾಂತ ನ್ಯಾಯಮೂರ್ತಿ ಪಾಲಾಕ್ಷಪ್ಪ ಪ್ರಶಸ್ತಿ ಪ್ರದಾನ ಮಾಡುವರು.

ಡಿ.31, ಮಧ್ಯವರ್ತಿಗಳ ಹಾವಳಿ ವಿರೋಧಿಸಿ ಪ್ರತಿಭಟನೆ

ವಿರಾಜಪೇಟೆ, ಡಿ.27– ತಾಲೂಕು ಕಛೇರಿ ಮತ್ತು ಸರ್ವೆಕಛೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದ್ದು ಸಾರ್ವಜನಿಕರ ಕಛೇರಿ ಕೆಲಸ ಕಾರ್ಯಗಳಿಗೆ ಸಮಸ್ಯೆ ಉಂಟಾಗಿರುವುದರಿಂದ ಡಿ.31ರ ಬುಧವಾರ ರೈತರು ಮತ್ತು ನಾಗರಿಕ ಸಮಿತಿ ಸಾಮಾಜಿಕ ಕಾರ್ಯಕರ್ತರ ಸಹಕಾರದೊಂದಿಗೆ ತಾಲೂಕು ಕಛೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ನಾಗರಿಕ ಸಮಿತಿಯ ಮುಖಂಡ ಡಾ. ಇ.ರಾ. ದುರ್ಗಪ್ರಸಾದ್ ತಿಳಿಸಿದ್ದಾರೆ.

ರೈತರು ಮತ್ತು ಸಾರ್ವಜನಿಕರು ತಾಲೂಕು ಕಚೇರಿ ಕೆಲಸ ಕಾರ್ಯಗಳು ನಡೆಯಬೇಕಾದರೆ ಏಜೆಂಟ್‌ಗಳದ್ದೇ ಹಾವಳಿ ಇಂಥ ಕೆಲಸಗಳಿಗೆ ಇಂತಿಷ್ಟು ಎಂದು ನಿಗಧಿ ಮಾಡಿಕೊಂಡಿದ್ದಾರೆ. ಈ ಏಜೆಂಟ್‌ಗಳು ರೈತರಿಗೂ ಮತ್ತು ಸಾರ್ವಜನಿಕರಿಗೆ ದೊಡ್ಡ ಪ್ರಮಾಣದಲ್ಲಿ ಜನರಿಂದ ಹಣಕ್ಕಾಗಿ ಹಿಂಸೆ ಮಾಡಿ ವಂಚಿಸುತ್ತಾರೆ ಇಂತಹವರು ತಾಲೂಕು ಕಛೇರಿ ಆವರಣದಲ್ಲಿಯೇ ಹೆಚ್ಚು ಕಾಲ ಕಳೆಯುತ್ತಿರುತ್ತಾರೆ ಎಂದು ಸಂಘದ ಕಛೇರಿಯಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಆರೋಪಿಸಿದರು.

ಸಂಘಟನೆಯ ಸದಸ್ಯ ಮಾಳೇಟಿರ ಕಾಳಯ್ಯ ಮಾತನಾಡಿ, ಬೀದಿಯಲ್ಲಿ ಅಲೆದಾಡುತ್ತಿದ್ದವರು ಇಂದು ಕಛೇರಿಗಳ ಮುಂದೆ ನಿಂತು ದಲ್ಲಾಳಿಗಳ ವ್ಯವಹಾರ ಮಾಡುತ್ತಿದ್ದು ಐಷಾರಾಮಿ ಬದುಕು ನಡೆಸುತ್ತಿದ್ದಾರೆ. ಸಾಕಷ್ಟು ಹಣ ಮಾಡುವ ಉದ್ದೇಶದಿಂದ ಕಛೇರಿಗಳಿಗೆ ಬರುವ ಜನರನ್ನು



ನಾಗರಿಕ ಸಮಿತಿಯ ಮುಖಂಡ ಡಾ. ಇ.ರಾ. ದುರ್ಗಪ್ರಸಾದ್ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದರು.

ದಾರಿ ತಪ್ಪಿಸುತಿದ್ದಾರೆ ಇವರ ಬಗ್ಗೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ಸಮಿತಿ ಸದಸ್ಯ ಪಿ.ಕೆ.ಅಬ್ದುಲ್ ರೆಹಮನ್ ಮಾತನಾಡಿ ತಹಶೀಲ್ದಾರ್ ಕಛೇರಿಯಲ್ಲಿ ಆಸ್ತಿ ವಿಚಾರ ಮತ್ತು ಇತರ ಕೆಲಸ ಕಾರ್ಯಗಳಿಗೆ ಜನರು ಬರುವುದನ್ನೆ ಕಾಯುತ್ತಿರುವ ಮಧ್ಯವರ್ತಿಗಳು ಅವರಿಂದ ದುಪ್ಪಟು ಹಣ ವಸೂಲಿ ಮಾಡಿ ಅಧಿಕಾರಿಗಳಿಗೆ ಹಂಚುತ್ತಾರೆ ಇದರ ಬಗ್ಗೆ ಸಂಬಂಧಪಟ್ಟವರು ಕ್ರಮ ಕೈಗೊಳ್ಳದಿದ್ದರೆ ಮುಂದೊಂದುದಿನ ಜನರೆ ಬುದ್ದಿ ಕಲಿಸುವ ಕಾಲ ಬರಲಿದೆ ಎಂದರು. ಸಮಿತಿ ಸದಸ್ಯ ಎನ್.ಕೆ. ಅಬ್ದುಲ್ ಶರೀಫ್ ಉಪಸ್ಥಿತರಿದ್ದರು.

ಭಾಗಮಂಡಲದಲ್ಲಿ ಶ್ರದ್ಧಾ ಭಕ್ತಿಯಿಂದ ನಡೆದ ಮಂಡಲ ಪೂಜೆ



ಭಾಗಮಂಡಲದಲ್ಲಿ ನಡೆದ ಶೋಭಾ ಯಾತ್ರೆಯಲ್ಲಿ ಕರಿಕೆ ಅಯ್ಯಂಗೇರಿ, ದೊಡ್ಡಪುಲಿಕೊಟ್ಟು, ನಾಪೋಕ್ಲು, ಬೆಟ್ಟಗೇರಿ, ಚೆರಂಬಾಣೆ ಮೊದಲಾದ ಊರುಗಳಿಂದ ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳು ಮತ್ತು ಭಕ್ತಾದಿಗಳು ಭಾಗವಹಿಸಿದ್ದರು.

ಇಂದು ಶಿವಕುಮಾರ್ ಸ್ವಾಮೀಜಿ ಮಂಟಪ ಉದ್ಘಾಟನೆ

ಕುಶಾಲನಗರ: ಡಾ.ಶಿವಕುಮಾರ್ ಮಹಾಸ್ವಾಮೀಜಿ ಮಂಟಪ, ನಾಮ ಫಲಕ ಉದ್ಘಾಟನೆ ಕಾರ್ಯಕ್ರಮ ಬಲಮುರಿ ಗಣಪತಿ ದೇವಾಲಯ ಬಳಿ ಡಿ.28ರ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಹೆಚ್.ವಿ.ಶಿವಪ್ಪ ತಿಳಿಸಿದ್ದಾರೆ.

ಪಟ್ಟಣದ ಶಿವರಾಮ ಕಾರಂತ್ ಬಡಾವಣೆಯಲ್ಲಿ 3 ಲಕ್ಷ ರೂ. ವೆಚ್ಚದಲ್ಲಿ ಮಂಟಪ ನಿರ್ಮಿಸಲಾಗಿದೆ. ಶಾಸಕ ಡಾ.ಮಂತರ್ ಗೌಡ ನೂತನ ಮಂಟಪ ಲೋಕಾರ್ಪಣೆಗೊಳಿಸಿದರೆ, ಮಾಜಿ ಶಾಸಕ ಅಪ್ಪಚ್ಚು ರಂಜನ್ ನಾಮಫಲಕ ಉದ್ಘಾಟಿಸುವರು.

ವಿವಿಧ ಮಠಗಳ ಮಠಾಧೀಶರು ದಿವ್ಯ ಸಾನಿಧ್ಯ ವಹಿಸುವರು ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮಹಾಸಭಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಾಂಭಶಿವಮೂರ್ತಿ ಮಾತನಾಡಿ, ಮಂಟಪ ನಿರ್ಮಾಣದಲ್ಲಿ ಪುರಸಭೆ ಹಿಂದಿನ ಆಡಳಿತ ಮಂಡಳಿ ಸದಸ್ಯರು ಮುಖ್ಯಾಧಿಕಾರಿಗಳ ಸಹಕಾರ ಪ್ರಮುಖವಾಗಿದೆ. ಪುರಸಭೆಯ ಆಯ್ದ ಕೆಲಮಂದಿಯನ್ನು ಕಾರ್ಯಕ್ರಮದಲ್ಲಿ ಗೌರವಿಸಲಾಗುವುದು ಎಂದರು.

ತಾಲೂಕು ಅಧ್ಯಕ್ಷ ಹೆಚ್.ಎಂ.ಮಧುಸೂದನ್, ಪುರಸಭೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಎಂ.ಬಿ.ಸುರೇಶ್, ಜಿಲ್ಲಾ ಕಾರ್ಯದರ್ಶಿ ಗಣೇಶ್, ತಾಲೂಕು ಕಾರ್ಯದರ್ಶಿ ಧರ್ಮೇಂದ್ರ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅಸಮರ್ಪಕ ಆಹಾರ ವಿತರಣೆ ಖಂಡಿಸಿ ವಿದ್ಯಾರ್ಥಿ ಪೋಷಕರ ಪ್ರತಿಭಟನೆ

ಗೋಣಿಕೊಪ್ಪ, ಡಿ.27–ಪೊನ್ನಂಪೇಟೆ ಕ್ರೀಡಾ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಅಸಮರ್ಪಕ ಆಹಾರ ನೀಡಲಾಗುತ್ತಿದೆ ಎಂದು ಆರೋಪಿಸಿ ವಿದ್ಯಾರ್ಥಿಮತ್ತು ಪೋಷಕರು ಪ್ರತಿಭಟನೆ ನಡೆಸಿದರು.

ಶುಕ್ರವಾರ ಸಂಜೆ ಕ್ರೀಡಾ ವಸತಿ ಶಾಲೆಗೆ ತೆರಳಿದ ವಿದ್ಯಾರ್ಥಿಗಳ ಪೋಷಕರು ಪ್ರತಿಭಟನೆ ನಡೆಸಿದರು, ಆಹಾರ ವಿತರಣೆಗೆ ಟೆಂಡರ್ ಪಡೆದಿದ್ದವರು ಮತ್ತು ಪೋಷಕರ ನಡುವೆ ಮಾತಿನ ಚಕಮಕಿ ನಡೆಯಿತು.

ರಾಜ್ಯ ಕ್ರೀಡಾಪ್ರಾಧಿಕಾರದ ಉಪಾಧ್ಯಕ್ಷ ಅರುಣ್ ಮಾಚಯ್ಯ ಮಾತನಾಡಿ ಪೋಷಕರ ಮತ್ತು ಅಧಿಕಾರಿಗಳ ಸಭೆ ಕರೆದು ಸಮಸ್ಯೆ ಬಗೆ ಹರಿಸುವ ಭರವಸೆ ನೀಡಿದರು. ತಾತ್ಕಾಲಿಕವಾಗಿ ಪ್ರತಿಭಟನೆಯನ್ನು ಪೋಷಕರು ಕೈಬಿಟ್ಟರು.

ಪಾರ್ವತಿ ನಿಧನ



ನಾಪೋಕ್ಲು, ಡಿ.27– ಇಲ್ಲಿಗೆ ಸಮೀಪದ ಬೇತು ಗ್ರಾಮದಲ್ಲಿ ವಾಸವಾಗಿದ್ದ ಚೆಟ್ಟಿಮಾನಿ ಕುಂದಚೇರಿ ಗ್ರಾಮದ ನಿವಾಸಿ ದಿವಂಗತ ಮುಕ್ಕಾಟಿ ಚಂಗಪ್ಪ ಅವರ ಧರ್ಮಪತ್ನಿ ಪಾರ್ವತಿ (ಬೇಬಿ, 90ವರ್ಷ) ಶನಿವಾರ ನಿಧನರಾದರು.


ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಬಂಧು ಬಾಂಧವರನ್ನು ಅಗಲಿದ್ದಾರೆ ಮೃತರ ಅಂತ್ಯಕ್ರಿಯೆಯು ಭಾನುವಾರ ಚೆಟ್ಟಿಮಾನಿ ಕುಂದಚೇರಿ ಗ್ರಾಮದಲ್ಲಿ ನಡೆಯಲಿದೆ.

ಭವಾನಿ



ನಾಪೋಕ್ಲು: ಇಲ್ಲಿಗೆ ಸಮೀಪದ ಬಲಮುರಿ ಗ್ರಾಮದ ನಿವಾಸಿ ಕೊಂಗೀರಂಡ ದಿವಂಗತ ದೇವಯ್ಯ (ಚಿಮ್ಮಣ) ಅವರ ಧರ್ಮಪತ್ನಿ ಭವಾನಿ (ಚಿಲ್ಲಿ) (70) ಶನಿವಾರ ನಿಧನರಾದರು. ಮೃತರು ಬಂಧು ಬಾಂಧವರನ್ನು ಅಗಲಿದ್ದಾರೆ ಮೃತರ ಅಂತ್ಯಕ್ರಿಯೆ ಭಾನುವಾರ ಮೃತರ ಸ್ವಗ್ರಾಮದಲ್ಲಿ ನಡೆಯಲಿದೆ

ಅಪ್ಪಾಜಿ



ನಾಪೋಕ್ಲು: ಇಲ್ಲಿಗೆ ಸಮೀಪದ ಭಾಗಮಂಡಲ ಅಯ್ಯಂಗೇರಿ ಗ್ರಾಮದ ನಿವಾಸಿ ಬಾಕಿಲನ ಅಪ್ಪಾಜಿ(73) ದೈವಾಧೀನರಾದರು. ಮೃತರು ಮೂವರು ಪುತ್ರರು ಸೇರಿದಂತೆ ಬಂಧು ಬಾಂಧವರನ್ನು ಅಗಲಿದ್ದಾರೆ ಮಾಜಿ ಸೈನಿಕ ಬಾಕಿಲನ ಅಪ್ಪಾಜಿ ಅವರ ಅಂತ್ಯಕ್ರಿಯೆ ಶುಕ್ರವಾರ ಸ್ವ ಗ್ರಾಮದ ಅಯ್ಯಂಗೇರಿದಲ್ಲಿ ನೆರವೇರಿಸಲಾಯಿತು.

ಟಿಟಿ ವಾಹನ–ಗೂಡ್ಸ್ ಆಟೋ ಡಿಕ್ಕಿ: ಆಟೊ ಚಾಲಕ ಸೇರಿ ಇಬ್ಬರಿಗೆ ತೀವ್ರ ಪೆಟ್ಟು



ಅಪಘಾತದಲ್ಲಿ ತೀವ್ರ ಹಾನಿಗೊಂಡಿರುವ ಆಟೊ

ಬೇಗೂರು, ಡಿ.27– ಟಿಟಿ ವಾಹನ ಮತ್ತು ಗೂಡ್ಸ್ ಆಟೋ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಆಟೊ ಚಾಲಕ ಸೇರಿದಂತೆ ಇಬ್ಬರು ತೀವ್ರ ಸ್ವರೂಪದಲ್ಲಿ ಗಾಯಗೊಂಡಿರುವ ಘಟನೆ ಗ್ರಾಮದ ಪೊಲೀಸ್ ಠಾಣೆಯ ಬಳಿ ನಡೆದಿದೆ

ಗುಂಡ್ಲುಪೇಟೆಯಿಂದ ಮೈಸೂರು ಕಡೆಗೆ ತೆರಳುತ್ತಿದ್ದ ಟಿಟಿ ವಾಹನ (ಕೆಎ41, ಬಿ–9696) ಮತ್ತು ಬೇಗೂರಿನ ಕಡೆಗೆ ಬರುತ್ತಿದ್ದ ಗೂಡ್ಸ್ ಆಟೋ (ಕೆಎ10, ಎ–5260)ನಡುವೆ ಮುಖಮುಖಿ ಡಿಕ್ಕಿ ಸಂಭವಿಸಿ ಆಟೋ ಚಾಲಕ ನವೀನ್‌ಕುಮಾರ್ (33) ತೀವ್ರ ಸ್ವರೂಪದಲ್ಲಿ ಗಾಯಗೊಂಡಿದ್ದರೆ, ರಸ್ತೆ ದಾಟುತ್ತಿದ್ದ ಸೋಮಹಳ್ಳಿ ಗ್ರಾಮದ ವೆಂಕಟನಾಯಕ (44) ಎಂಬುವರಿಗೂ ಗಾಯಗಳಾಗಿದ್ದು, ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲು ಮಾಡಲಾಗಿದೆ

ಡಿ.30, ವಿಷ್ಣು ನೆನಪಿನೋತ್ಸವ ಕಾರ್ಯಕ್ರಮ



ಕನ್ನಡ ನೆಲ ಜಲ ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಶನಿವಾರ ಸುದ್ಧಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಚಾಮರಾಜನಗರ, ಡಿ.27–ಸಾಹಸ ಸಿಂಹ ವಿಷ್ಣುವರ್ಧನ್ 16ನೇ ವರ್ಷದ ಪುಣ್ಯ ಸ್ಮರಣೆ ಅಂಗವಾಗಿ ರಾಜ್ಯ ಮಟ್ಟದ ವಿಷ್ಣು ಪದಬಂಧ ಸ್ಪರ್ಧೆ ಹಾಗೂ ವಿಷ್ಣು ನೆನಪಿನೋತ್ಸವ ಕಾರ್ಯಕ್ರಮವನ್ನು ಡಿ.30 ರಂದು ನಗರದಲ್ಲಿ ಆಯೋಜಿಸಲಾಗಿದೆ ಎಂದು ಕನ್ನಡ ನೆಲ ಜಲ ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ತಿಳಿಸಿದರು.

ಅಂದು ಬೆಳಿಗ್ಗೆ 11ಕ್ಕೆ ನಗರದ ಜೆ. ಎಚ್. ಪಟೇಲ್ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಡಿವೈಎಸ್ಪಿ ಸ್ನೇಹಾರಾಜ್ ಉದ್ಘಾಟಿಸಲಿದ್ದು, ವಿಷ್ಣು ಭಾವಚಿತ್ರಕ್ಕೆ ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ (ಮುನ್ನಾ) ಪುಷ್ಪಾರ್ಚನೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಬೇಂದ್ರಪ್ಪ, ಉದ್ಯಮಿ ಶ್ರೀನಿಧಿ ಕುದರ್ ಹಾಗೂ ಚಲನಚಿತ್ರ ರಂಗದ ಗಣ್ಯರು ಭಾಗವಹಿಸಲಿದ್ದಾರೆ. ಉಪನ್ಯಾಸಕ ಸುರೇಶ್ ಎನ್. ಋಗ್ವೇದಿ ನುಡಿನಮನ ಸಲ್ಲಿಸುವರು ಎಂದು ಸುದ್ಧಿಗೋಷ್ಠಿಯಲ್ಲಿ ಹೇಳಿದರು.

15 ವರ್ಷಗಳಿಂದ ನಿರಂತರವಾಗಿ ಡಾ. ವಿಷ್ಣುವರ್ಧನ್ ನೆನಪಿನೋತ್ಸವ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಿಕೊಂಡು ಬಂದಿದ್ದು, ಈ ಬಾರಿ ವಿಶೇಷವಾಗಿ ವಿಷ್ಣುವರ್ಧನ್ ನಟಿಸಿರುವ ಚಲನ ಚಿತ್ರಗಳನ್ನಾಧರಿಸಿ ರಾಜ್ಯ ಮಟ್ಟದ ಪದಬಂಧ ಸ್ಪರ್ಧೆಯನ್ನು ಆಯೋಜನೆ ಮಾಡಲಾಗಿದೆ. ವಿಷ್ಣು ಪದಬಂಧ ಸ್ಪರ್ಧೆಯಲ್ಲಿ 15 ಸಾವಿರ ರೂ. ಪ್ರಥಮ, 10 ಸಾವಿರ ರೂ. ದ್ವಿತೀಯ ಹಾಗೂ ಐದು ಸಾವಿರ ರೂ.ಗಳನ್ನು ತೃತೀಯ ಬಹುಮಾನವಾಗಿ ನೀಡಲಾಗುತ್ತದೆ.

ಐದು ಮಂದಿಗೆ ಸಮಾಧಾನಕರ ಬಹುಮಾನಗಳಿಗೆ ತಲಾ ಎರಡು ಸಾವಿರ ರೂ.ಗಳ ಬಹುಮಾನ, ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಲಾಗುವುದು.

ಆಸಕ್ತರು ನೂರು ರೂ.ಗಳ ಪ್ರವೇಶ ಶುಲ್ಕದೊಂದಿಗೆ ಹೆಸರನ್ನು ಡಿ. 29ರ ಸೋಮವಾರ ಸಂಜೆ 5 ಗಂಟೆಯೊಳಗೆ ನೋಂದಾಯಿಸಿಕೊಳ್ಳಬೇಕು ಎಂದು ಅವರು ತಿಳಿಸಿದರು.

ವೇದಿಕೆಯ ಸಂಚಾಲಕರಾದ ಆಲೂರು ಮಲ್ಲು, ಜ.ಸುರೇಶ್‌ನಾಗ್, ಕೂಸಣ್ಣ, ರಾಮಸಮುದ್ರ ವೇಣುಗೋಪಾಲ್, ವಕೀಲ ಮಲ್ಲು, ಅನಂದ ಭಗೀರಥ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಚಾ.ನಗರದಲ್ಲಿ ಹನುಮ ಜಯಂತಿ ಭವ್ಯ ಮೆರವಣಿಗೆ



ಚಾ.ನಗರದಲ್ಲಿ ಶನಿವಾರ ನಡೆದ ಹನುಮ ಜಯಂತಿ ಮೆರವಣಿಗೆಯ ವಿಹಂಗಮ ನೋಟ. ಮಾಜಿ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿ ಮಾತನಾಡಿದರು. ಜಿಲ್ಲಾ ಬಿಜೆಪಿ ಅಧ್ಯಕ್ಷ ನಿರಂಜನ ಕುಮಾರ್ ಉಪಸ್ಥಿತರಿದ್ದರು.

ಚಾಮರಾಜನಗರ, ಡಿ.27–ಹನುಮಂತೋತ್ಸವ ಸಮಿತಿ ನಗರದಲ್ಲಿ ಶನಿವಾರ ಆಯೋಜಿಸಿದ್ದ ಹನುಮ ಜಯಂತಿ ಮೆರವಣಿಗೆ ಶನಿವಾರ ಭವ್ಯವಾಗಿ ನಡೆ ಯಿತು

ನಾಲ್ಕನೇ ವರ್ಷದ ಮೆರವಣಿಗೆಯಲ್ಲಿ ಆಂಜನೇಯಸ್ವಾಮಿ ವೇಷಧಾರಿಗಳು ಗಮನ ಸೆಳೆದರು. ತಮಟೆ, ನಗಾರಿ, ವೀರಗಾಸೆ, ನಾದಸ್ವರ, ಚೆಂಡೆ ವಾದ್ಯ, ಡೊಳ್ಳುಕುಣಿತ ಕಲಾತಂಡಗಳು ಮೆರವಣಿಗೆಗೆ ಜಾನಪದ ಕಲಾ ಮೆರುಗು ನೀಡಿದವು. ಇದಕ್ಕೂ ಮೊದಲು ನಗರದ ಹಳೆ ಖಾಸಗಿ ಬಸ್ ನಿಲ್ದಾಣದಲ್ಲಿರುವ ಶ್ರೀ ಅಭಯ ಕಾರ್ಯಸಿದ್ಧಿ ಆಂಜನೇಯ ದೇವಸ್ಥಾನದಲ್ಲಿ ಬೆಳಗ್ಗೆಯಿಂದ ನವಗ್ರಹ ಹೋಮ, ರಾಮತಾರಕ ಹೋಮ, ಆಂಜನೇಯ ಹೋಮ, ಪಂಚಾಮೃತ ಅಭಿಷೇಕ, ವಿಶೇಷ ಪೂಜೆ ಹೋಮ–ಹವನ ನಡೆಯಿತು. ಮಧ್ಯಾಹ್ನ ಮಹಾಮಂಗಳಾರತಿ ನೆರವೇರಿತು. ತದನಂತರ ಪ್ರಸಾದ ವಿತರಿಸಲಾಯಿತು.

ಸಂಜೆ 4ಗಂಟೆಯಲ್ಲಿ ಹನುಮ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸುವ ಮೂಲಕ ಉತ್ಸವಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿ, ಪ್ರತಿಯೊಬ್ಬರೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅಭಿರುಚಿ ಬೆಳೆಸಿಕೊಳ್ಳಬೇಕು. ದೇವರ ಸ್ಮರಣೆಯಿಂದ ಸುಖ, ಶಾಂತಿ, ನೆಮ್ಮದಿ ದೊರೆಯಲಿದೆ. ಇಂಥ ಕಾರ್ಯಕ್ರಮಗಳು ಜಾತೀಯತೆಯನ್ನು ಮೀರಿ ನಿಲ್ಲುತ್ತದೆ. ಹಿಂದುಗಳು ಎಲ್ಲರೂ ಒಗ್ಗಟ್ಟಾಗಿ ಮುನ್ನಡೆದರೆ ಭವ್ಯ ಭಾರತ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.


ಬಿಜೆಪಿ ಜಿಲ್ಲಾಧ್ಯಕ್ಷ ನಿರಂಜನ್ ಕುಮಾರ್, ಜಿಪಂ ಮಾಜಿ ಅಧ್ಯಕ್ಷ ಎಂ ರಾಮಚಂದ್ರ, ನಗರಸಭೆ ಮಾಜಿ ಅಧ್ಯಕ್ಷ ಸುರೇಶನಾಯಕ್, ಮುಖಂಡರಾದ ಬಾಲಸುಬ್ರಮಣ್ಯಂ, ನೂರೊಂದುಶೆಟ್ಟಿ, ವಿರಾಟ್ ಶಿವು, ಬುಲೆಟ್ ಚಂದ್ರು, ಬಾಬು, ಮಂಜುನಾಥ ಪ್ರಸನ್ನ ಇತರರಿದ್ದರು.

ಕೇಸರಿಮಯ ಶೋಭಾಯಾತ್ರೆ : ಹನುಮಂತೋತ್ಸವದ ಶೋಭಾಯಾತ್ರೆ ಸಾಗುವ ಮಾರ್ಗ ಸಂಪೂರ್ಣ ಕೇಸರಿಮಯವಾಗಿತ್ತು. ಶ್ರೀಅಭಯ ಕಾರ್ಯಸಿದ್ಧಿ ಆಂಜನೇಯ ದೇವಸ್ಥಾನದ ಮುಂಭಾಗದಿಂದ ಹೊರಟ ಮೆರವಣಿಗೆ ತರಕಾರಿ ಮಾರು ಕಟ್ಟೆ ರಸ್ತೆ, ಚಿಕ್ಕಂಗಡಿ ಬೀದಿ, ಸಂತೇಮರ ಹಳ್ಳಿ ವೃತ್ತ, ಆದಿಶಕ್ತಿ ದೇವಸ್ಥಾನ ತಲುಪಿತು. ನಂತರ ಅಲ್ಲಿಂದ ಮತ್ತೆ ಆರಂಭವಾದ ಶೋಭಾಯಾತ್ರೆ ಸಂತೇಮರಹಳ್ಳಿ ವೃತ್ತ, ಡೀವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ರಸ್ತೆ, ವಾಣಿಯರ್ ರಸ್ತೆ, ಗುಂಡ್ಲುಪೇಟೆ ವೃತ್ತ, ದೊಡ್ಡಂಗಡಿ ಬೀದಿ, ವೀರಭದ್ರೇಶ್ವರ ಸ್ವಾಮಿ ದೇವ ಸ್ಥಾನ, ರಥದ ಬೀದಿ ಮಾರ್ಗವಾಗಿ ಆಂಜನೇಯ ಸ್ವಾಮಿ ದೇವಸ್ಥಾನ ಬಳಿ ಅಂತ್ಯವಾಯಿತು.

ಮೆರವಣಿಗೆ ಉದ್ದಕ್ಕೂ ಸಾವಿರಾರು ಕೇಸರಿ ರುಮಾಲು ಧಾರಿಗಳು ಹೆಜ್ಜೆ ಹಾಕಿ, ನೃತ್ಯ ಮಾಡಿದರು. ಬಂಟಿಂಗ್ಸ್, ಬ್ಯಾನರ್‌ಗಳು ರಾರಾಜಿಸಿದವು. ಅಬ್ಬರದ ಡಿಜೆ ಸದ್ದಿಗೆ ಯುವಕರು ದಾರಿಯುದ್ದಕ್ಕೂ ಕುಣಿದು ಕುಪ್ಪಳಿಸಿದರು. ಜೈ ಭಜರಂಗಿ, ಜೈ ಶ್ರೀರಾಮ್ ಘೋಷಣೆಗಳು ಮೊಳಗಿದವು. ಮೆರವಣಿಗೆಯಲ್ಲಿ ಈ ಬಾರಿ ಬಿಲ್ಲುಧಾರಿಯಾದ ಶ್ರೀರಾಮನ ಬೃಹತ್ ಮೂರ್ತಿಯು ಎಲ್ಲರ ಗಮನ ಸೆಳೆಯಿತು. ಯುವಕರು ಶ್ರೀರಾಮ ಹಾಗೂ ಹನುಮನ ಭಾವಚಿತ್ರವುಳ್ಳ ಬೃಹತ್ ಬಾವುಟಗಳನ್ನು ಹಾರಾಡಿಸುವ ಮೂಲಕ ಸಂಭ್ರಮಿಸಿದರು. ಸುಮಾರು 20 ಅಡಿ ಎತ್ತರದ ಶ್ರೀರಾಮನ ಮೂರ್ತಿ ಹಾಗೂ ಶ್ರೀ ಆಂಜನೇಯಸ್ವಾಮಿ ಮೂರ್ತಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಕಳೆದ ಬಾರಿಯಂತೆ ಈ ಬಾರಿಯೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಹಿಸಿದ್ದರು

ಪೊಲೀಸ್ ಬಂದೋಬಸ್ತ್: ಮೆರವಣಿಗೆ ಸಾಗುವ ಮಾರ್ಗದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಒದಗಿಸಿ ದ್ದರು. ಮೊಬೈಲ್ ಕಮಾಂಡ್ ಯೂನಿಟ್ ವಾಹನದ ಮೂಲಕ ಶೋಭಾ ಯಾತ್ರೆಗೆ ಯಾವುದೇ ಅಡ್ಡಿಪಡಿಸದಂತೆ ಕ್ಯಾಮರಾ ಕಣ್ಗಾವಲು ಇಡಲಾಗಿತ್ತು. ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿತ್ತು.

ಗುಂಡ್ಲುಪೇಟೆಯಲ್ಲಿ ಹನುಮಜಯಂತಿ ಮೆರವಣಿಗೆ



ಪಟ್ಟಣದಲ್ಲಿ ಹನುಮ ಜಯಂತಿ ಮೆರವಣಿಗೆ ವಿಜೃಂಭಣೆಯಿಂದ ಸಾಗಿತು.

ಗುಂಡ್ಲುಪೇಟೆ ಡಿ.27 (ಸೋಮ್.ಜಿ)–ಹಿಂದೂ ಸಂಘಟನೆಗಳು ಹಾಗೂ ಹನುಮ ಭಕ್ತರು ಪಟ್ಟಣದಲ್ಲಿ ಆಯೋಜಿಸಿದ್ದ ಹನುಮಜಯಂತಿ ಮೆರವಣಿಗೆ ವಿಜೃಂಭಣೆಯಿಂದ ಸಂಪನ್ನಗೊಂಡಿತು.

ಚಾಮರಾಜನಗರ ಜೋಡಿರಸ್ತೆಯ ಆಂಜನೇಯಸ್ವಾಮಿ ದೇವಸ್ಥಾನದಿಂದ ಬೆಳಿಗ್ಗೆ 9.30ಕ್ಕೆ ಗಂಟೆಗೆ ಹೊರಟ ಮೆರವಣಿಗೆ ಕೋಡಹಳ್ಳಿ ರಸ್ತೆ ಮೂಲಕ ಕೊತ್ವಾಲ್ ಛಾವಡಿ, ಕೆ.ಎಸ್.ಆರ್.ಟಿ. ಸಿ ರಸ್ತೆ, ಹಳೇ ಬಸ್ ನಿಲ್ದಾಣ, ರಾಷ್ಟ್ರೀಯ ಹೆದ್ದಾರಿ, ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ, ವೀರಮದಕರಿ ನಾಯಕ ವೃತ್ತದ ಮಾರ್ಗ ಅರಳಿಕಟ್ಟೆ, ಅಂಬೇಡ್ಕರ್ ಸರ್ಕಲ್‌ನಲ್ಲಿ ಸಾಗಿತು. ನಾಸಿಕ್ ಡೋಲ್, ಮಂಗಳ ವಾದ್ಯಗಳೊಂದಿಗೆ ಮಡಿಕೇರಿಯಿಂದ ತರಿಸಿದ ಮೂವತ್ತು ಅಡಿ ಎತ್ತರದ ಹನುಮ ಮೂರ್ತಿ, ಕೆ.ಆರ್.ನಗರದಿಂದ ತರಿಸಲಾಗಿದ್ದ ರಾಮನ ಮೂರ್ತಿಗಳನ್ನು ಸ್ಥಳೀಯ ಕಲಾತಂಡಗಳು, ವಿವಿಧ ಗ್ರಾಮಗಳಿಂದ ಸತ್ತಿಗೆ ಸುರಪಾನಿಯೊಂದಿಗೆ ಮೆರವಣಿಗೆ ಮಾಡಲಾಯಿತು. ಹನುಮೋತ್ಸವಕ್ಕೆ ಬಂದಿದ್ದ ಭಕ್ತಾದಿಗಳಿಗೆ ಪಟ್ಟಣದ ಸೋಮೇಶ್ವರ ಹಾಸ್ಟೆಲ್‌ನಲ್ಲಿ ಮಧ್ಯಾಹ್ನ ಉಪಹಾರ ವ್ಯವಸ್ಥೆ ಮಾಡಲಾಗಿತ್ತು.

ಡಿಜೆ ಅಬ್ಬರಕ್ಕೆ ಹೆಜ್ಜೆಹಾಕಿದ ಭಕ್ತರು: ಪಟ್ಟಣದ ಎಲ್ಲಾ ರಸ್ತೆಯಲ್ಲಿ ಕೇಸರಿ ಬೆಂಟಿಂಗ್ಸ್ ಕಟ್ಟಿದ್ದರಿಂದ ಇಡೀ ಪಟ್ಟಣ ಕೇಸರಿಮಯವಾಗಿತ್ತು. ಯುವ ಕರು ಮುಖಂಡರು ಡಿಜೆ ತಾಳಕ್ಕೆ ತಕ್ಕಂತೆ ಹೆಜ್ಜೆಹಾಕಿದರು. ಮೆರವಣಿಗೆ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಸ್ ಪಿ ಡಾ.ಕವಿತ ನೇತೃತ್ವದಲ್ಲಿ ಪೊಲೀಸರು ಬಿಗಿ ಬಂದೋಬಸ್ತ್ ಆಯೋಜಿಸಿದ್ದರು.

ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ನಾಗರಾಜು ಅವಿರೋಧ ಆಯ್ಕೆ

ಯಳಂದೂರು, ಡಿ.27–ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ವೈ.ಕೆ.ಮೋಳೆ ವಿ.ನಾಗರಾಜು, ಪ್ರಧಾನ ಕಾರ್ಯದರ್ಶಿಯಾಗಿ ಗುಂಬಳ್ಳಿ ಲೋಕೇಶ್ ಹಾಗೂ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾದರು.

ಪಟ್ಟಣದ ಪ್ರವಾಸಿಮಂದಿರದಲ್ಲಿ ನಡೆದ ಚುನಾವಣೆಯಲ್ಲಿ ಸಂಘದ ನೂತನ ಪದಾಧಿಕಾರಿಗಳ ಅವಿರೋಧ ಆಯ್ಕೆಯನ್ನು ಮುಖ್ಯ ಚುನಾವಣಾಧಿಕಾರಿ ಎಂ.ಇ.ಮಂಜುನಾಥ್ ಘೋಷಣೆ ಮಾಡಿದರು. ಸಹಾಯಕ ಚುನಾವಣಾಧಿಕಾರಿಗಳಾಗಿ ಸಿ. ಮಹೇಂದ್ರ, ವಿಜಯಕುಮಾರ್ ಕರ್ತವ್ಯ ನಿರ್ವಹಿಸಿದರು. ಆಯ್ಕೆಯಾದ ಪದಾಧಿಕಾರಿಗಳಿಗೆ ಚುನಾವಣಾಧಿಕಾರಿಗಳು ಪ್ರಮಾಣಪತ್ರ ವಿತರಣೆ ಮಾಡಿದರು.

ಸಂಘದ ಉಪಾಧ್ಯಕ್ಷರಾಗಿ ಗುಂಬಳ್ಳಿ ಸಿ.ನಾಗೇಂದ್ರ ಖಜಾಂಚಿಯಾಗಿ ಇರ್ಫಾನ್ ಅವಿರೋಧವಾಗಿ ಆಯ್ಕೆಯಾದರು. ನೂತನ ಪದಾಧಿಕಾರಿಗಳನ್ನು ಮಾಜಿ ಸಚಿವ ಎನ್. ಮಹೇಶ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್, ಕೊಳ್ಳೇಗಾಲ ತಾಲೂಕು ಅಧ್ಯಕ್ಷ ಚಿಕ್ಕಮಾಳಿಗೆ ಹಾಗೂ ಪದಾಧಿಕಾರಿಗಳು, ದಸಂಸ ಜಿಲ್ಲಾ ಸಂಚಾಲಕ ಯರಿಯೂರು ರಾಜಣ್ಣ, ಯಳಂದೂರು ಪತ್ರಕರ್ತರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಸನ್ಮಾನಿಸಿ ಅಭಿನಂದಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸಿದ್ದಲಿಂಗಸ್ವಾಮಿ ಮಾತನಾಡಿ, ನೂತನ ಪದಾಧಿಕಾರಿಗಳು ತಾಲೂಕು ಸಂಘದ ಅಭಿವೃದ್ಧಿಗೆ ಹಾಗೂ ಸದಸ್ಯರ ಶ್ರೇಯೋಭಿವೃದ್ಧಿಗೆ ಶ್ರಮಿಸಬೇಕು. ಅಲ್ಲದೆ ಸದಸ್ಯರ ಸಹಕಾರದಿಂದ ಸಂಘವನ್ನು ಮುನ್ನಡೆಸಿಕೊಂಡು ಹೋಗಬೇಕು. ಜೊತೆಗೆ ತಾಲೂಕು ಕೇಂದ್ರದಲ್ಲಿ ಪತ್ರಕರ್ತರ ಭವನ ನಿರ್ಮಾಣಕ್ಕೆ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ನೂತನ ಅಧ್ಯಕ್ಷ ವಿ. ನಾಗರಾಜು ಮಾತನಾಡಿ, ಅವಿರೋಧ ಆಯ್ಕೆಯಾಗಲು ಸಹಕರಿಸಿದ ಎಲ್ಲರಿಗೂ ಅಭಿನಂದನೆಗಳು. ಮುಂದಿನ ದಿನಗಳಲ್ಲಿ ಎಲ್ಲ ಸದಸ್ಯರ ಸಹಕಾರ ಪಡೆದು ಸಂಘವನ್ನು ಅಭಿವೃದ್ಧಿಪಡಿಸುವುದಾಗಿ ಆಶ್ವಾಸನೆ ನೀಡಿದರು.



ಅವಿರೋಧವಾಗಿ ಆಯ್ಕೆಯಾದ ಪತ್ರಕರ್ತರ ಸಂಘದ ಪದಾಧಿಕಾರಿಗಳನ್ನು ಜಿಲ್ಲಾಧ್ಯಕ್ಷ ಸಿದ್ಧಲಿಂಗಸ್ವಾಮಿ ಅಭಿನಂದಿಸಿದರು

ಸಂಘದ ಜಿಲ್ಲಾ ಕಾರ್ಯದರ್ಶಿ ಯರಿಯೂರು ನಾಗೇಂದ್ರ, ನಿರ್ದೇಶಕ ವೈ.ಎಂ. ಭಾನುಪ್ರಕಾಶ್, ವೈಕೆ. ಮೋಳೆ ಬಸವರಾಜು, ಬಿಳಿಗಿರಿ ಶ್ರೀನಿವಾಸ್, ಕೊಳ್ಳೇಗಾಲ ತಾಲೂಕು ಪ್ರಧಾನ ಕಾರ್ಯದರ್ಶಿ ನಟರಾಜು, ಪತ್ರಕರ್ತರಾದ ಕೆಸ್ತೂರು ಪ್ರಸನ್ನ, ಬೂದಂಬಳ್ಳಿ ಗಿರೀಶ್, ಮುಷರಫ್, ರಂಗಸ್ವಾಮಿ, ಗೂಳಿಪುರ ನಂದೀಶ್, ಕೊಮಾರನಪುರ ರಾಜಶೇಖರ್, ಮಂಜುಕುಮಾರ್, ಚರಣ್ ಬಿಳಿಗಿರಿ, ಜಗದೀಶ್, ಯಳಂದೂರು ಪಪಂ ನಾಮ ನಿರ್ದೇಶಿತ ಸದಸ್ಯ ಲಿಂಗರಾಜಮೂರ್ತಿ ಇತರರಿದ್ದರು.

ವಾರದ ಮಿತ್ರ ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 28–12–2025

ಮಹಾಕವಿ ಕುವೆಂಪು

ನಾಳೆ ಜನ್ಮದಿನಾಚರಣೆ

ಹೊಸಗನ್ನಡ ಸಾಹಿತ್ಯದ ದಿಗ್ಗಜರಲ್ಲೊಬ್ಬರಾದ ರಸಋಷಿ ಕುವೆಂಪು ಅವರ ಹುಟ್ಟು ಹೆಸರು ಕೆ.ವಿ.ಪುಟ್ಟಪ್ಪ ಬರೆಯುತ್ತಾ, ಬೆಳೆಯುತ್ತಾ 'ಕುವೆಂಪು' ಕಾವ್ಯನಾಮದಿಂದ ಪ್ರಸಿದ್ಧಿಯ ಹಿಮಾಚಲವಾಗಿ ರೂಪುಗೊಂಡ ಇವರು ತಮ್ಮ ಬರವಣಿಗೆಯ ಆರಂಭದ ದಿನಗಳಲ್ಲಿ 'ಕಿಶೋರಚಂದ್ರ' ಹೆಸರಿನಿಂದಲೂ ಸಾಹಿತ್ಯ ಕೃಷಿಯನ್ನು ಮಾಡಿದ್ದರು.

ಜೈಮಿನಿ ಭಾರತ, ತೊರವೆ ರಾಮಾಯಣಗಳ ವಾಚನ ಮತ್ತು ಅಕ್ಷರಾಭ್ಯಾಸದ ಮೂಲಕ ಬಾಲ್ಯದಲ್ಲೇ ಸಾಹಿತ್ಯ ಸಂಸ್ಕಾರ ಪಡೆದಿದ್ದ ಕುವೆಂಪು ಅವರು ತೀರ್ಥಹಳ್ಳಿ ಮತ್ತು ಮೈಸೂರಿನಲ್ಲಿ ಓದುತ್ತಿರುವಾಗಲೇ ಓದಿನ ಜೊತೆ ಜೊತೆಗೆ ಶೆಲ್ಲಿ, ವರ್ಡ್ಸ್‌ವರ್ತ್ ಕೀಟ್ಸ್ ಮುಂತಾದ ಆಂಗ್ಲ ಕವಿಗಳನ್ನು ಚೆನ್ನಾಗಿ ಓದಿಕೊಂಡಿದ್ದರು. ಪರಿಣಾಮ ಇವರೆಲ್ಲರ ಪ್ರಭಾವದಿಂದಾಗಿ ಇಂಗ್ಲೀಷ್ ಸಾಹಿತ್ಯದತ್ತ ಹೆಜ್ಜೆಯಿರಿಸಿದ ಇವರು 1922ರಲ್ಲಿ ತಮ್ಮ 18ನೇ ವಯಸ್ಸಿಗೇ 'ಬಿಗಿನರ್ಸ್ ಮ್ಯೂಸ್' ಎಂಬ ಇಂಗ್ಲೀಷ್ ಕವನ ಸಂಕಲನವನ್ನು ಪ್ರಕಟಿಸಿದ್ದರು. ಇದನ್ನು ಓದಿದ ಐರಿಸ್ ಕವಿ ಜೇಮ್ಸ್ ಕಸಿನ್ಸ್ ಅವರು ಕುವೆಂಪು ಅವರ ಪ್ರತಿಭೆಯನ್ನು ಮೆಚ್ಚಿ 'ಹುಟ್ಟಿನೊಡನೆ ಬಂದ ಭಾಷೆಯಲ್ಲಿ ಮಾತ್ರ ಸೃಜನಶೀಲ ಸಾಹಿತ್ಯ ಉತ್ತಮವಾಗಿ ಸೃಷ್ಟಿಯಾಗಬಲ್ಲದು' ಎಂದು ಕನ್ನಡದಲ್ಲೇ ಬರೆಯುವಂತೆ ಕುವೆಂಪು ಅವರಿಗೆ ಸಲಹೆ ನೀಡಿದ ಪರಿಣಾಮವಾಗಿ ಇವರು ಕನ್ನಡ ಸಾಹಿತ್ಯ ರಚನೆಯತ್ತ ಸಾಗಿದರು.

ಕುವೆಂಪು ಅವರು ಕನ್ನಡದಲ್ಲೇ ಬರೆಯಲು, ಕನ್ನಡದಲ್ಲೇ ಉಳಿಯಲು ಬಹುಮುಖ್ಯ ಕಾರಣ ಐರಿಸ್ ಕವಿ ಜೇಮ್ಸ್ ಕಸಿನ್ಸ್. ಹಾಗಾಗಿ ಕುವೆಂಪು ಅವರ ಕನ್ನಡ ಸಾಹಿತ್ಯದ ಕೀರ್ತಿಯ ಕ್ರೆಡಿಟ್ ಈ ಐರಿಸ್ ಕವಿಗೇ ಸಲ್ಲಬೇಕು. ಏಕೆಂದರೆ ಅಂದು ಅವರು ಕುವೆಂಪು ಅವರಿಗೆ ಮಾತೃಭಾಷೆಯ ಅಗಾಧ ಶಕ್ತಿ ಬಗ್ಗೆ ಮನವರಿಕೆ ಮಾಡಿಕೊಡದಿದ್ದರೆ ಕುವೆಂಪು ಅಂಥ ದೈತ್ಯಪ್ರತಿಭೆ ಕನ್ನಡಕ್ಕೆ ದಕ್ಕುತ್ತಿರಲಿಲ್ಲವೇನೊ.


ಐರಿಸ್ ಕವಿ ಜೇಮ್ಸ್‌ಕಸಿನ್ಸ್ ಅವರ ಪ್ರಭಾವದಿಂದ ಕನ್ನಡ ದೀಕ್ಷೆ ತೊಟ್ಟವರಂತೆ ಬರವಣಿಗೆಯಲ್ಲಿ ಕನ್ನಡ ಡಿಂಡಿಮ ಬಾರಿಸುತ್ತಾ ನಡೆದ ಕುವೆಂಪು ಅವರು ಮಕ್ಕಳಿಗಾಗಿ ಬರೆದ ಲಘು ಕಾಲ್ಪನಿಕ ಕಾವ್ಯ 'ಅಮಲನ ಕಥೆ' ಎಂಬ ಕೃತಿಯನ್ನು 1924 ರಲ್ಲಿ ಪ್ರಕಟಿಸಿದರು.ಇದು ಕುವೆಂಪು ಅವರ ಪ್ರಪ್ರಥಮ ಕನ್ನಡ ಪುಸ್ತಕ. ಅಲ್ಲಿಂದೀಚೆಗೆ' ದೀಕ್ಷೆಯತೊಡು ಇಂದೇ; ಕಂಕಣಕಟ್ಟಿಂದೇ; ಕನ್ನಡ ನಾಡೊಂದೇ....' ಎನ್ನುತ್ತಲೇ ಎಣೆಯಿಲ್ಲದ ಕನ್ನಡಾಭಿಮಾನವನ್ನು ಎದೆಯಲ್ಲಿ ತುಂಬಿಕೊಂಡು ತಮ್ಮ ಲೇಖನಿಯ ಮೂಲಕ ಕನ್ನಡ ಕೃತಿಗಳ ಮಾಲೆಯನ್ನೇ ಕಟ್ಟತೊಡಗಿದರು.

ಇಲ್ಲಿ ಪ್ರಕೃತಿಯ ಮಹತ್ತೆಲ್ಲವನ್ನೂ ತೆರೆದಿಡುವ ಕೊಳಲು, ಪಕ್ಷಿಕಾಶಿ, ನವಿಲು, ಕದರಡಕೆ, ಕಲಾಸುಂದರಿಯಂಥ ಕವನ ಸಂಕಲನಗಳಿವೆ. ಪ್ರೇಮ ಕಾಶ್ಮೀರ, ಚಂದ್ರಮಂಚಕೆ ಬಾ ಚಕೋರಿ, ಷೋಡಶಿ, ಜೇನಾಗುವ, ಅನುತ್ತರಾದಂತಹ ಹದಿಹರೆಯದವರೆದೆ ಅರಳಿಸುವ ಮಹದದ್ಭುತ ಪ್ರೇಮಗೀತಾ ಗುಚ್ಛಗಳಿವೆ. ಮೇಘಪುರ, ಮರಿವಿಜ್ಞಾನಿ, ನನ್ನ ಮನೆ ತರಹದ ಅರಿವಿನ ಬೆಳಕಿನ ಶಿಶುಗೀತಾ ಸಂಗ್ರಹಗಳಿವೆ.

ಪಾಂಚಜನ್ಯ, ಕ್ರಾಂತಿ ಕಹಳೆ, ಕೋಗಿಲೆ ಮತ್ತು ಸೋವಿಯತ್ ರಷ್ಯಾ ರೀತಿಯ ನಾಡಿಗೆ ಕ್ರಾಂತಿ ದೀವಿಗೆ ಹಚ್ಚುವ ಕ್ರಾಂತಿ ಕವಿತೆಗಳಿವೆ. ಚಿತ್ರಾಂಗದಾ, ಸಮುದ್ರ ಲಂಘನಾ, ಮಹಾದರ್ಶನ ಮತ್ತು ಪ್ರಾಯಶ್ಚಿತ್ತದಂಥ ಅಪೂರ್ವವಾದ ಸರಳ ರಗಳೆಯ ಖಂಡ ಕಾವ್ಯಗಳಿವೆ. ಬೊಮ್ಮನಹಳ್ಳಿಯ ಕಿಂದರಿಜೋಗಿ, ಶ್ರೀ ಸ್ವಾತಂತ್ರ್ಯೋದಯದಂತಹ ಮಹಾ ಪ್ರಗಾಥಗಳು ಹಾಗೂ ಕಿಂಕಿಣಿಯಂತಹ ಅತ್ಯಪೂರ್ವ ಧ್ವನಿಯುಳ್ಳ ಕಾವ್ಯ ಶಕ್ತಿಯ ವಚನಗಳಿವೆ.

ಹಾಗೆಯೇ ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಅಂತಹ ಮಹಾ ಕಾದಂಬರಿಗಳೂ ಇವೆ. ಶ್ರೀ ರಾಮಾಯಣದರ್ಶನಂನಂಥ ಮಹಾ ಕಾವ್ಯವೂ ಇದೆ. ಮಹಾಶಿವರಾತ್ರಿ, ಯಮನ ಸೋಲು, ಸ್ಮಶಾನ ಕುರುಕ್ಷೇತ್ರಂ, ಶೂದ್ರತಪಸ್ವಿಯಂತಹ ಉತ್ತಮೋತ್ತಮ ನಾಟಕಗಳಿವೆ. ಮೋಡಣ್ಣನ ತಮ್ಮ, ನನ್ನ ಗೋಪಾಲದಂತಹ ಚಿಣ್ಣರ ಸೆಳೆವ ಮಕ್ಕಳ ನಾಟಕಗಳಿವೆ. ಸನ್ಯಾಸಿ ಮತ್ತು ಇತರ ಕಥೆಗಳು, ನನ್ನದೇವರು ಮತ್ತು ಇತರ ಕಥೆಗಳು, ಕಥೆಗಳೊಡನೆ ಆರಂಭದಂತಹ ಶಕ್ತಿಪೂರ್ಣ ಕಥಾ ಸಂಕಲನಗಳಿವೆ. ಮಲೆನಾಡಿನ ಚಿತ್ರಗಳು ರೀತಿಯ ಸಶಕ್ತ ಗದ್ಯ ಚಿತ್ರಗಳ ಸಂಕಲನಗಳಿವೆ. ಕಾವ್ಯ ವಿಹಾರ, ವಿಭೂತಿ ಪೂಜೆ, ತಪೋನಂದನ, ದ್ರೌಪದಿಯ ಶ್ರೀಮುಡಿಯಂತಹ ಸಾಹಿತ್ಯ ವಿಮರ್ಶೆ ಮತ್ತುಕಾವ್ಯ ಮೀಮಾಂಸೆಗಳಿವೆ. ವಿಚಾರಕ್ರಾಂತಿಗೆ ಆಹ್ವಾನ, ಮನುಜ ಮತ ವಿಶ್ವಪಥ, ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿಯಂತಹ ಸಾರಸ್ವತ ಲೋಕದಲ್ಲಿ ವೈಚಾರಿಕ ಬೆಳಕು ಚೆಲ್ಲುವ ಭಾಷಣಗಳ ಸಂಗ್ರಹಗಳಿವೆ.

ಸ್ವಾಮಿ ವಿವೇಕಾನಂದ, ಶ್ರೀ ರಾಮಕೃಷ್ಣ ಪರಮ ಹಂಸರಂತಹ ಮಹನೀಯರ ಜೀವನ ಚರಿತ್ರೆಗಳಿವೆ. ಆತ್ಮಕಥೆ ಪ್ರಕಾರದಲ್ಲೇ ಅದ್ಭುತವೆನಿಸುವ ನೆನಪಿನ ದೋಣಿಯಂತಹ ಆತ್ಮಕಥೆಯೂ ಇದೆ. ಜನಪ್ರಿಯ ವಾಲ್ಮೀಕಿ ರಾಮಾಯಣ, ಗುರುವಿನೊಡನೆ ದೇವರಡಿಗೆ, ವಿವೇಕವಾಣಿ, ವೇದಾಂತದಂತಹ ಶ್ರೇಷ್ಠ ಅನುವಾದಿತ ಕೃತಿಗಳೂ ಇವೆ. ಕರ್ನಾಟಕ ಭಾರತ ಕಥಾಮಂಜರಿಯಂಥ ಅಗ್ರಮಾನ್ಯ ಸಂಪಾದಿತ ಗ್ರಂಥವೂ ಉಂಟು.



ಪ್ರಶಸ್ತಿ–ಪುರಸ್ಕಾರ, ಮಾನ–ಸನ್ಮಾನ, ಹೆಸರು–ಕೀರ್ತಿ, ಅಂತ ಕುವೆಂಪು ಅವರು ಎಂದೂ ಕೂಡ ಅವುಗಳ ಹಿಂದೆ ಬಿದ್ದವರಲ್ಲ. 'ಕೀರ್ತಿಶನಿ ತೊಲಗಾಚೆ' ಎಂದವರು ಅವರು. ಆದರೆ ಅವುಗಳೇ ಅವರನ್ನು ಬೆನ್ನತ್ತಿ ಬಂದು ಆಲಂಗಿಸಿಕೊಂಡವು. ಹಾಗಾಗಿ ತಮ್ಮ ಸಾಹಿತ್ಯ ಸಾಧನೆಯಿಂದ ಹಲವು ಮೊದಲುಗಳಿಗೆ ಮುನ್ನುಡಿ ಬರೆದ ಕುವೆಂಪು ಅವರು ತಮ್ಮ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯದ ಮೂಲಕ ರಾಷ್ಟ್ರದ ಪ್ರತಿಷ್ಠಿತ ಪ್ರಶಸ್ತಿಗಳಾದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಜ್ಞಾನಪೀಠ ಪ್ರಶಸ್ತಿ ಸೇರಿದಂತೆ ಹಲವು ಹತ್ತು ಪ್ರಶಸ್ತಿಗಳನ್ನು ಮೊಟ್ಟ ಮೊದಲಿಗೆ ಕನ್ನಡಕ್ಕೆ ತಂದು ಕೊಟ್ಟ ಕೀರ್ತಿಯೊಡನೆ ಕರ್ನಾಟಕ ಸರ್ಕಾರದ ಪ್ರಮುಖ ನಾಗರೀಕ ಪ್ರಶಸ್ತಿಗಳಾದ ಕರ್ನಾಟಕ ರತ್ನ ಪ್ರಶಸ್ತಿ ಮತ್ತು ಪಂಪ ಪ್ರಶಸ್ತಿ ಪಡೆದ ಮೊದಲಿಗರೆನಿಸಿದ್ದಾರೆ. ಹಾಗೆಯೇ ಕೇಂದ್ರ ಸರ್ಕಾರದಿಂದ ಪದ್ಮಭೂಷಣ ಪಡೆದ ಕನ್ನಡ ಭಾಷೆಯ ಮೊದಲ ಕವಿಯೂ ಆಗಿದ್ದಾರೆ.



ಹೀಗೆ ಅವರಿಂದ ಸೃಷ್ಟಿಯಾದ ಕನ್ನಡ ಸಾಹಿತ್ಯ ಕೃತಿ ಮಾಲೆಯಲ್ಲಿ ಕಾವ್ಯ, ಸಣ್ಣಕಥೆ, ಕಾದಂಬರಿ, ನಾಟಕ, ಜೀವನಚರಿತ್ರೆ, ಪ್ರಬಂಧ, ಖಂಡಕಾವ್ಯ, ಹರಟೆ, ಸಂಶೋಧನೆ, ವಿಮರ್ಶೆ, ನೀಳ್ಗವಿತೆ, ಹನಿಗವಿತೆ ಸೇರಿದಂತೆ ಮಕ್ಕಳ ಸಾಹಿತ್ಯದಿಂದ ಹಿಡಿದು ಮಹಾಕಾವ್ಯದವರೆಗೂ ಎಲ್ಲಾ ಬಗೆಯ ಸಾಹಿತ್ಯ ಪುಷ್ಪಗಳುಂಟು. ಸಂಖ್ಯೆಯ ದೃಷ್ಟಿಯಿಂದ ಕುವೆಂಪು ಅವರ ಕೃತಿಗಳು ಎಪ್ಪತ್ತೈದನ್ನೂ ದಾಟದಿದ್ದರೂ ಕೂಡ ಸತ್ವದದೃಷ್ಟಿಯಲ್ಲಿ ಇವರಿಂದ ರಚಿತವಾಗಿರುವ ಒಂದೊಂದು ಕೃತಿ ರತ್ನಗಳೂ ಸಾಹಿತ್ಯದ ಮಹತ್ವಗಳಾಗಿವೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಮತ್ತು ಭಾರತೀಯ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿರುವ ಇವರ 'ಶ್ರೀರಾಮಾಯಣ ದರ್ಶನಂ' ಮಹಾ ಕಾವ್ಯವೊಂದೇ ಸಾಕು ಕೋಟಿ ಕೃತಿಗಳನ್ನು ಮೀರಿಸೀತು! ಅದಕ್ಕೇ ವರಕವಿ ಬೇಂದ್ರೆಯವರು ಕುವೆಂಪು ಅವರನ್ನು 'ಯುಗದ ಕವಿ ಜಗದ ಕವಿ' ಎಂದು ಎದೆತುಂಬಿ ಹಾಡಿ ಹೊಗಳಿರುವುದು. .....

ಪ್ರಶಸ್ತಿ–ಪುರಸ್ಕಾರ, ಮಾನ–ಸನ್ಮಾನ, ಹೆಸರು–ಕೀರ್ತಿ, ಅಂತ ಕುವೆಂಪು ಅವರು ಎಂದೂ ಕೂಡ ಅವುಗಳ ಹಿಂದೆ ಬಿದ್ದವರಲ್ಲ. 'ಕೀರ್ತಿಶನಿ ತೊಲಗಾಚೆ' ಎಂದವರು ಅವರು. ಆದರೆ ಅವುಗಳೇ ಅವರನ್ನು ಬೆನ್ನತ್ತಿ ಬಂದು ಆಲಂಗಿಸಿಕೊಂಡವು. ಹಾಗಾಗಿ ತಮ್ಮ ಸಾಹಿತ್ಯ ಸಾಧನೆಯಿಂದ ಹಲವು ಮೊದಲುಗಳಿಗೆ ಮುನ್ನುಡಿ ಬರೆದ ಕುವೆಂಪು ಅವರುತಮ್ಮ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯದ ಮೂಲಕ ರಾಷ್ಟ್ರದ ಪ್ರತಿಷ್ಠಿತ ಪ್ರಶಸ್ತಿಗಳಾದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಜ್ಞಾನಪೀಠ ಪ್ರಶಸ್ತಿ ಸೇರಿದಂತೆ ಹಲವು ಹತ್ತು ಪ್ರಶಸ್ತಿಗಳನ್ನು ಮೊಟ್ಟ ಮೊದಲಿಗೆ ಕನ್ನಡಕ್ಕೆ ತಂದು ಕೊಟ್ಟ ಕೀರ್ತಿಯೊಡನೆ ಕರ್ನಾಟಕ ಸರ್ಕಾರದ ಪ್ರಮುಖ ನಾಗರೀಕ ಪ್ರಶಸ್ತಿಗಳಾದ ಕರ್ನಾಟಕರತ್ನ ಪ್ರಶಸ್ತಿ ಮತ್ತು ಪಂಪ ಪ್ರಶಸ್ತಿ ಪಡೆದ ಮೊದಲಿಗರೆನಿಸಿದ್ದಾರೆ. ಹಾಗೆಯೇ ಕೇಂದ್ರ ಸರ್ಕಾರದಿಂದ ಪದ್ಮಭೂಷಣ ಪಡೆದ ಕನ್ನಡ ಭಾಷೆಯ ಮೊದಲ ಕವಿಯೂ ಆಗಿದ್ದಾರೆ.

ಕುವೆಂಪು ಅವರ ವಿಶೇಷವೆಂದರೆ ಕನ್ನಡಕ್ಕೊಂದು ಓಜಸ್ವಿಯಾದ ಶೈಲಿಯನ್ನು ತಂದು ಕೊಟ್ಟದ್ದು. ಹಾಗೆಯೇ ಸಾಹಿತ್ಯದ ಮೂಲಕ ಕನ್ನಡ ಪ್ರಜ್ಞೆ, ವೈಜ್ಞಾನಿಕ ಪ್ರಜ್ಞೆ, ವೈಚಾರಿಕ ಪ್ರಜ್ಞೆ, ಭಾವೈಕ್ಯ ಪ್ರಜ್ಞೆ, ಮನುಜಮತ ಪ್ರಜ್ಞೆ, ವಿಶ್ವಪಥ ಪ್ರಜ್ಞೆ ಒಟ್ಟಾರೆ ವಿಶ್ವಮಾನವ ಪ್ರಜ್ಞೆ ಮೂಡಿಸಿದರು. ಸಾವಿರ ವರ್ಷಗಳ ಹಿಂದೆ ಆದಿಕವಿ ಪಂಪ ನುಡಿದ 'ಮನುಷ್ಯಜಾತಿತಾನೊಂದೆ ವಲಂ' ಎಂಬುದನ್ನು ತಮ್ಮ ಬದುಕಿನ ಧ್ಯೇಯ ವಾಕ್ಯವನ್ನಾಗಿಸಿಕೊಂಡು ಅದರಂತೆಯೇ ಬರೆದು ಬದುಕಿದವರು. 'ಗುಡಿಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ; ಬಡತನವ ಬುಡಮಟ್ಟ ಕೀಳಬನ್ನಿ; ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ; ವಿಜ್ಞಾನದೀವಿಗೆಯ ಹಿಡಿಯಬನ್ನಿ' ಎಂದವರು. ಅದರಲ್ಲೂ ಕುವೆಂಪು ಅವರು ತಮ್ಮ ಜೀವನ ಸಂಧ್ಯಾ ಕಾಲದಲ್ಲಿ ವಿಶ್ವಮಾನವತ್ವಕ್ಕೆ ಮಿಡಿದ ಬಗೆ ಇಡೀ ಮಾನವ ಕುಲಕ್ಕೆ ಮಾದರಿ. ತಮ್ಮ ಬದುಕಿನ ಕಟ್ಟಕಡೆಯ ಸಂದೇಶ ವಿಶ್ವಮಾನವ ಸಂದೇಶ ಎನ್ನುತ್ತಲೇ 1994ರ ನವೆಂಬರ್ 11 ರಂದು ನಿಸರ್ಗ ಲೀನರಾದ ಕುವೆಂಪು ಮಹಾ ಮಾನವತಾವಾದಿಯಾಗಿ ಬದುಕಿದವರು. ಅಂತೆಯೇ ಕನ್ನಡ ಸಾಹಿತ್ಯ ಮತ್ತು ಭಾರತೀಯ ಸಾಹಿತ್ಯಕ್ಕಷ್ಟೇ ಅಲ್ಲದೇ ವಿಶ್ವ ಸಾಹಿತ್ಯಕ್ಕೆ ವಿಚಾರಕ್ರಾಂತಿಯ ಮಹಾಬೆಳಕು ನೀಡಿದ ಯುಗಪುರುಷರು.


ಇಂಥ ವಿಶ್ವಮಾನವತ್ವದ ವಿಚಾರಕ್ರಾಂತಿಯ ರಥ ಎಳೆದ 'ಸರ್ವಜನಾಂಗದ ಶಾಂತಿಯ ತೋಟ' ಎಂದು ಹಾಡಿದ 'ನೂರುದೇವರನ್ನೆಲ್ಲಾ ನೂಕಾಚೆ ದೂರ ತಾಯಿ ಭಾರತಿಯ ಪೂಜಿಸುವ ಬಾರ' ಎಂದು ಎಲ್ಲರನ್ನೂ ಕೂಗಿ ಕರೆದ ಮಹಾ ಕವಿಯನ್ನು ಇಂದು ಒಂದು ಜಾತಿಗೆ ಸೀಮಿತವಾಗಿ ರಿಸಿಕೊಂಡು ತಮ್ಮ ಸ್ವಾರ್ಥಕ್ಕಾಗಿ ಅವರ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ಜಾತಿವಾದಿ ನೀಚರನ್ನು ನೋಡಿ ನಿಜಕ್ಕೂ ದೂರದಲ್ಲೆಲ್ಲೋ ಕುವೆಂಪು ಆತ್ಮ ನೊಂದುಕೊಳ್ಳುತ್ತಿದೆಯೇನೋ ಅನಿಸುತ್ತಿದೆ!




ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಮಕ್ಕಳ ಚಿತ್ರಕಥೆ: ನಾಲ್ವರು ಸ್ನೇಹಿತರು (ಕಳೆದ ವಾರದಿಂದ)


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಬೇಟೆಗಾರನು "ಇಂದು ನನ್ನ ಅದೃಷ್ಟ ಚೆನ್ನಾಗಿದೆ, ಅಲ್ಲಿ ಆಮೆಯೂ ಸಿಕ್ಕಿತು....ಇಲ್ಲಿ ಸತ್ತಂತಿರುವ ಜಿಂಕೆಯೂ ಸಿಕ್ಕಿತು. ಮನೆಯಲ್ಲಿ ಭರ್ಜರಿ ಮಾಂಸದ ಅಡುಗೆ ಮಾಡಿಸಬಹುದು, ಅಲ್ಲದೆ, ಜಿಂಕೆಯ ಚರ್ಮವನ್ನು ಮಾರುಕಟ್ಟೆಯಲ್ಲಿ ಮಾರಿದರೆ ಹೆಚ್ಚು ಹಣ ಕೂಡ ದೊರೆಯುವುದು."ಎಂದು ಮನದಲ್ಲೇ ಹಿಗ್ಗುತ್ತಿದ್ದನು.



ಸತ್ತ ಜಿಂಕೆಯನ್ನು ತೆಗೆದುಕೊಳ್ಳುವ ಮುನ್ನ ಆಮೆಯನ್ನು ಬಂಧಿಸಿಟ್ಟಿದ್ದ ಚೀಲವನ್ನು ಹಾದಿಯ ಬದಿಯಲ್ಲೇ ಇರಿಸಿ, ಜಿಂಕೆಯ ಕಡೆ ಓಡಿದ.




ಇದನ್ನು ಕಂಡ ಇಲಿಯು ಓಡಿಹೋಗಿ ಚೀಲವನ್ನು ಕಡಿದು–ಕಡಿದು ರಂಧ್ರ ಮಾಡಿ, ಆಮೆಯನ್ನು ಪಾರು ಮಾಡಿತು. ನಂತರ ಆಮೆಯು ತೆವಳುತ್ತಾ ಸರೋವರದಲ್ಲಿ ಮುಳುಗಿ ಮಾಯವಾಯಿತು. ಇಲಿಯು ಬಿಲ ಹೊಕ್ಕಿತು.



ಇತ್ತ, ಬೇಟೆಗಾರ ತನ್ನ ಬಳಿಗೆ ಬರುತ್ತಿವುದನ್ನು ಕಂಡು ಜಿಂಕೆಯು ಎದ್ದು ವೇಗವಾಗಿ ಓಡಿ ಆತನಿಂದ ತಪ್ಪಿಸಿಕೊಂಡಿತು. ಬೇಟೆಗಾರನಿಗೆ ಆಶ್ಚರ್ಯವಾಯಿತು. ನಂತರ ಆತ ತಾನು ಇರಿಸಿದ್ದ ಚೀಲದ ಬಳಿ ಬಂದನು. ಚೀಲ ಖಾಲಿಯಾಗಿತ್ತು ಆಮೆಯೂ ತಪ್ಪಿಸಿಕೊಂಡು ಹೋಗಿತ್ತು "ನಾನೆಂತಹ ದುರಾಸೆಗೆ ಒಳಗಾದೆ ಜಿಂಕೆಯನ್ನು ಪಡೆಯುವ ಭರದಲ್ಲಿ ಆಮೆಯನ್ನೂ ಕಳೆದುಕೊಂಡನಲ್ಲಾ.!" ಎಂದು ಬೇಟೆಗಾರನು ವ್ಯಥೆಪಟ್ಟನು.



ಬೇಟೆಗಾರ ಹೋದ ನಂತರ, ನಾಲ್ಕೂ ಪ್ರಾಣಿಗಳು ಒಂದೆಡೆ ಸೇರಿ ಇಲಿಯ ಜಾಣತನವನ್ನು ಪ್ರಶಂಸಿಸಿದವು.



ಆಮೆಯು ಸ್ನೇಹಿತರ ಮಾತು ಕೇಳದೆ ತಪ್ಪು ಮಾಡಿದ್ದಕ್ಕೆ ಕ್ಷಮೆಯಾಚಿಸಿತು. ಆ ನಂತರದ ದಿನಗಳಲ್ಲಿ ಈ ನಾಲ್ವರು ಸ್ನೇಹಿತರೂ ಒಟ್ಟಿಗೆ ಸುಖ–ಸಂತೋಷದಿಂದ ಇದ್ದವು. (ಮುಗಿಯಿತು)

ನೀತಿ:– ಒಗ್ಗಟ್ಟಿನಲ್ಲಿ ಬಲವಿದೆ.

ವಾರಭವಿಷ್ಯ

28.12.2025 ರಿಂದ 03.01.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಧನುಸ್ಸು, ಚಂದ್ರ–ಮೀನ, ಮೇಷ, ವೃಷಭ, ಮಿಥುನ, ಕುಜ–ಧನುಸ್ಸು, ಬುಧ–ವೃಶ್ಚಿಕ, ಗುರು–ಮಿಥುನ, ಶುಕ್ರ–ಧನುಸ್ಸು, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)
ವಾರದ ಆರಂಭಕ್ಕೆ ನಿಮ್ಮ ವೈಯಕ್ತಿಕ ಕಾರ್ಯ ಸಾಧನೆಗೆ ಇತರರನ್ನು ನಂಬಿದರೆ ಆಶಾಭಂಗವಾಗುವುದು. ಸಾರ್ವಜನಿಕ ರಂಗದಲ್ಲಿ ಶನಿದೇವ ನಿಮ್ಮ ಖ್ಯಾತಿ, ವ್ಯಕ್ತಿತ್ವಕ್ಕೆ ಭಂಗ ತರುವನು. ವಾರಮಧ್ಯೆ ಚಂದ್ರಗ್ರಹದ ಶುಭ ಸಂಚಾರ ಹಲವಾರು ವಿಷಯಗಳಲ್ಲಿ ನೆಮ್ಮದಿಯನ್ನು ತರಲಿದ್ದಾನೆ. ನೂತನ ವಸ್ತ್ರ, ವಾಹನ ಮನೆಗೆ ಬರುವ ಯೋಗವಿದೆ. ವರ್ಷಾಂತ್ಯದ ರಜೆಯ ಪ್ರವಾಸ ಮುದ ನೀಡಲಿದೆ.
ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–6

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ಶುಭ ಚಂದ್ರ ವಾರದ ಆದಿಗೆ ಧನ–ಧಾನ್ಯ ಲಾಭ, ಮಿತ್ರ ಜನರ ಮಿಲನದಿಂದ ಹರುಷವನ್ನು ನೀಡಲಿರುವನು. ಗೋಪಾಲಕರಿಗೆ ಸಂತಸದ ಸಮಯ, ಹೋಟೆಲ್, ಕೇಟರಿಂಗ್ ಉದ್ಯಮದವರಿಗೆ ದ್ವಿಗುಣ ಲಾಭವಾಗುವುದು. ಲಾಭಸ್ಥಾನ ಸ್ಥಿತ ಶನಿದೇವನ ಕೃಪೆಯಿಂದ ನ್ಯಾಯಾಲಯದ ವಿಚಾರಗಳು ನಿಮ್ಮ ಪರ ಇರುವುದು. ಅಡ್ಡದಾರಿ ಜನರ ಸಹವಾಸದಿಂದ ಸಂಕಷ್ಟಕ್ಕೆ ಗುರಿಯಾಗುವಿರಿ. ಸಹವಾಸಗಳು ನೆಟ್ಟಗಿರಲಿ.
ಶ್ರೀ ಚಾಮುಂಡೇಶ್ವರಿ ಪ್ರಾರ್ಥನೆ. ಶುಭ ಸಂಖ್ಯೆ–2

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ವಾರದ ಮೊದಲರ್ಧ ಅನಿರೀಕ್ಷಿತ ಖರ್ಚುಗಳು ಎದುರಾಗುವುದರಿಂದ ಪರ್ಸ್ ಖಾಲಿ. ಮನಸ್ಸು ಚಂಚಲವಾಗಿ ವರ್ತಿಸುವುದು. ಕುಟುಂಬದಲ್ಲಿ ಅಭಿಪ್ರಾಯ ಭೇದಗಳು ಉಂಟಾಗದಂತೆ ಎಚ್ಚರ ವಹಿಸಿ. ವಾರದ ಉತ್ತರಾರ್ಧಕ್ಕೆ ಚಂದ್ರ ಸಂಚಾರ ಶುಭವಿದ್ದು, ನಿಮ್ಮ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುವುದು. ನೆನೆಗುದಿಗೆ ಬಿದ್ದ ಕೆಲಸಗಳನ್ನು ಪೂರ್ಣಗೊಳಿಸುವಿರಿ. ಶ್ವಾಸ ಸಂಬಂಧಿ ತೊಂದರೆ ಎದುರಾಗಬಹುದು.
ಶ್ರೀ ಸುದರ್ಶನ ಮಿತ್ರ ಜಪಿಸಿ. ಶುಭ ಸಂಖ್ಯೆ–8

ಕಟಕ (ಹೊ,ಹು,ಹೆ,ಡ,ಡಿ,ಡು)
ನಿಮ್ಮ ರಾಶ್ಯಾಧಿಪತಿ ಚಂದ್ರ ವೃತ್ತಿ ಜೀವನದಲ್ಲಿ ನೂತನ ಬೆಳವಣಿಗೆಗಳಿಗೆ ಕಾರಣೀಭೂತನಾಗುತ್ತಾನೆ. ಪ್ರಮುಖ ವ್ಯಕ್ತಿಗಳ ಭೇಟಿಯಿಂದ ಗಂಭೀರ ಸಮಸ್ಯೆಗಳು ಬಗೆಹರಿಯವುದು. ಹಣಕಾಸಿನ ವಿಚಾರದಲ್ಲಿ ಸಾಧಾರಣ ಸುಧಾರಣೆಯನ್ನು ಕಾಣುವಿರಿ. ಕೃಷಿಕರಿಗೆ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲ. ಅಷ್ಟಮ ರಾಹು ಕಾರಣ ವೈದ್ಯರ ಭೇಟಿ ಅನಿವಾರ್ಯವಾದೀತು. ರಾತ್ರಿ ಪ್ರಯಾಣಗಳನ್ನು ಅವಾಯ್ಡ್ ಮಾಡಿ.
ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ–4

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ಗ್ರಹಗಳ ಒಲುಮೆ ಶುಭವಾಗಿದೆ. ಅಂದುಕೊಂಡ ಕೆಲಸ ಅಂದುಕೊಂಡ ಸಮಯಕ್ಕೆ ಕೈಗೂಡುವುದರಿಂದ ಸಂತೋಷ. ಆಸ್ತಿ, ಪಾಸ್ತಿಗಳನ್ನು ಹೊಂದಲು ಗುರುಕೃಪೆಯಿದೆ. ಪ್ರಯತ್ನ ಪುರುಷಾಧೀನ, ಫಲ ದೈವಾಧೀನ. ಶಿಕ್ಷಣಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು. ಸಾಲ–ಸೋಲಗಳನ್ನು ತೀರುವಳಿ ಮಾಡಿಕೊಳ್ಳಿ. ಗುರುಜನರ ಪ್ರೇರಣೆಯಿಂದ ಪುಣ್ಯ ಕಾರ್ಯಾಚರಣೆ. ಧನುರ್ಮಾಸ ಸ್ನಾನ.
ಶ್ರೀ ರವಿಸ್ತುತಿ. ಶುಭ ಸಂಖ್ಯೆ–9

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ಸಾಮಾಜಿಕ ಆಗು ಹೋಗುಗಳು ನಿವೇಶಿಸಿದಂತೆ ಸಾಗುತ್ತವೆ. ಆಕಸ್ಮಿಕ ಧನಪ್ರಾಪ್ತಿಯೂ ಆಗಬಹುದು. ಸಪ್ತಮ ಶನಿದೇವನಿಂದ ಸಮರಸವೇ ಜೀವನ ಎಂಬ ಅರಿವಾಗಲಿದೆ. ಧನ ಸಂಪಾದನೆಗೆ ಕೊರತೆ ಇರದು, ಅಪವ್ಯಯಕ್ಕೂ ದಾರಿ ಆಗುವುದು. ಬೆಟ್ಟಿಂಗ್‌ನಿಂದ ದೂರವಿದ್ದರೆ ಕ್ಷೇಮ. ಮನೆಯಲ್ಲಿ ಸಣ್ಣ ಮಕ್ಕಳ ಆರೋಗ್ಯಕ್ಕೆ ಕುಂದು ಉಂಟಾಗಬಹುದು. ವರ್ಷದ ಕಡೆಯಲ್ಲಿ ಅಸಂತೋಷ ನಡೆಯದಂತೆ ಎಚ್ಚರ ವಹಿಸಿ.
ಶ್ರೀ ವೆಂಕಟೇಶ್ವರ ಪೂಜಿಸಿ. ಶುಭ ಸಂಖ್ಯೆ–5

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ವಾರ ಪೂರ್ತಿ ಹಣಕಾಸಿನ ತಾಪತ್ರಯಗಳು ಎದುರಾದರೂ ಸಮಯಕ್ಕೆ ಸರಿಯಾಗಿ ಹಣ ಒದಗುತ್ತಾ ಹೋಗುತ್ತದೆ. ವಾರ ಮಧ್ಯೆ ಅತಿಥಿ ಅಭ್ಯಾಗತರ ಆಗಮನ, ಅವರ ಆದರೋಪಚಾರಕ್ಕೆ ಹಣವ್ಯಯ. ಭೂಮಿ, ಸೈಟ್ ಕ್ರಯ–ವಿಕ್ರಮಗಳಲ್ಲಿ ಸೂಕ್ಷ್ಮವಾಗಿ ಪರಿಶೀಲಿಸಿ ಮಾಡಿ. ಪಂಚಮ ರಾಹು ಮಕ್ಕಳ ವಿಷಯದಲ್ಲಿ ತಲೆ ಕೆಡಿಸಿಕೊಳ್ಳುವಂತೆ ಮಾಡಲಿರುವನು. ನಿಗಾ ಇರಲಿ.
ಶ್ರೀ ಸುಬ್ರಹ್ಮಣ್ಯ ದರ್ಶನ. ಶುಭ ಸಂಖ್ಯೆ–3

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)
ಗುರುಜನರ ಸಹಾಯದಿಂದ ಹಾಗೂ ನಿಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸುವುದರಿಂದ ತಲುಪಬೇಕಾದ ಗುರಿಯನ್ನು ತಲುಪುವಿರಿ. ನಿಮ್ಮ ಆರ್ಥಿಕ ಮುನ್ನಡೆಗೆ ಹಲವರ ಸಹಾಯ ಹಸ್ತ ದೊರಕುವುದು. ಸರ್ಕಾರಿ ನೌಕರರು ಅಡ್ಡ ದಾರಿಯ ಸಂಪಾದನೆಗೆ ಆಸೆ ಪಟ್ಟು ಸಂಕಷ್ಟಕ್ಕೆ ಗುರಿಯಾಗುವರು. ನಿಮ್ಮ ಬ್ಯಾಂಕ್ ವಿವರಗಳನ್ನು ಯಾರಲ್ಲಿಯೂ ಹಂಚಿಕೊಳ್ಳಬೇಡಿ. ನರ ಸಂಬಂಧಿ ತೊಂದರೆ.
ಶ್ರೀ ನೃಸಿಂಹಕರಾವಲಂಬನ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–7

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ವಾರದಾರಂಭಕ್ಕೆ ಶುಭ ಗುರು ನಿಮ್ಮ ಕಾರ್ಯ ಸಾಧನೆಗೆ ಪೂರಕ ಫಲವನ್ನು ನೀಡಲಿದ್ದಾನೆ. ಆದಾಯ ಚೆನ್ನಾಗಿರುತ್ತದೆ. ಈಗ ಉಳಿಸಿದ್ದು ಮುಂದಿನ ಗಳಿಕೆ ಎಂದು ತಿಳಿದುಕೊಳ್ಳಿ. ಪ್ರೀತಿ–ಪ್ರೇಮ ವಿಷಯಗಳು ಸಕಾರಾತ್ಮಕ ಫಲ ನೀಡಲಿದೆ. ಹೊಸ ಮಿತ್ರರ ಪರಿಚಯವಾಗುವುದು. ಚತುರ್ಥ ಶನಿಯಿಂದಾಗಿ ಕಬ್ಬಿಣ, ಸಿಮೆಂಟ್ ವ್ಯಾಪಾರ ಕುಂಠಿತವಾಗುವುದು. ಆರೋಗ್ಯ ಕಾಪಾಡಿಕೊಳ್ಳಿ.
ಶ್ರೀ ಎಳ್ಳೆಣ್ಣೆ ದೀಪ ಹಚ್ಚಿ. ಶುಭ ಸಂಖ್ಯೆ–1

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)
ಈ ವಾರದಲ್ಲಿ ನಿಮ್ಮ ಉದ್ಯೋಗ, ವ್ಯವಹಾರಗಳಲ್ಲಿ ಹೆಚ್ಚಿನ ಆಸಕ್ತಿ ತೋರುವುದರಿಂದ ಅಧಿಕ ಲಾಭ ಗಳಿಸುವಿರಿ. ಸನ್ನದುಗಾರರಿಗೆ ದೊಡ್ಡ ಫೈಲ್ ಸಿಗುವುದು. ನಿವೇಶನ, ಮನೆ ಮಾರಾಟ ವಿಚಾರಗಳು ನೀವಂದುಕೊಂಡಂತೆ ಸಾಗುವುದು. ಸರ್ಕಾರಿ ನೌಕರರು ಕಚೇರಿ ಜವಾಬ್ದಾರಿಗಳನ್ನು ಸರಿಯಾಗಿ ನಿಭಾಯಿಸಿ, ಅನ್ಯಥಾ ತೊಂದರೆಗೆ ಸಿಲುಕುವಿರಿ. ಅನ್ಯ ಸ್ತ್ರೀಯರನ್ನು ಗೌರವದಿಂದ ಕಾಣಿ.
ಶ್ರೀ ಮಾರುತಿ ಸೇವೆ. ಶುಭ ಸಂಖ್ಯೆ–5

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ಸಮಯ ಯಾವುದನ್ನೂ ಕಾಯದು. ಗಾಳಿ ಬಂದಾಗ ತೂರಿಕೋ ಎಂಬ ನಾಣ್ಣುಡಿಯಂತೆ ನಿಂತು ಹೋಗಿದ್ದ ಪ್ರಮುಖ ಕೆಲಸಗಳು ಬೃಹಸ್ಪತಿಯ ಅನುಗ್ರಹದಿಂದ ಸಫಲವಾಗಲಿದೆ. ವಾರ ಮಧ್ಯೆ ಉದ್ಯೋಗಾಕಾಂಕ್ಷಿಗಳಿಗೆ ಶುಭ ವಾರ್ತೆ ಬರುವುದು. ಮಕ್ಕಳ ಯಶಸ್ಸಿನಿಂದ ಹರುಷ. ಪಶು ಸಂಗೋಪರಿಗೆ ಹೆಚ್ಚಿನ ಕ್ಷೀರೋತ್ಪನ್ನದಿಂದ ಉತ್ತಮ ಆದಾಯವಾಗುವುದು. ಹೊಸ ವರ್ಷಾಚರಣೆ ಲಕ್ಷ್ಮಣ ರೇಖೆ ದಾಟದಿರಲಿ.
ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–6

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ಈ ವಾರದಲ್ಲಿ ಆದಾಯ–ವ್ಯಯಗಳು ಸಮನಾಗಿ ಸಾಗುವುದು. ಯಾವುದೇ ಮಹತ್ವದ ಯೋಜನೆಗಳನ್ನು ಸಂಪೂರ್ಣವಾಗಿ ಪರಾಮರ್ಶಿಸಿ ಕೈಗೊಳ್ಳಿ. ಸ್ಥಿರಾಸ್ತಿ ಮಾರಾಟದ ವಿಚಾರದಲ್ಲಿ ಅಡತಡೆಗಳು ಉಂಟಾಗುತ್ತವೆ. ನಿಮಗಾಗದವರು ನಿಮ್ಮ ಬೆನ್ನಿಗೇ ಇದ್ದಾರೆ ಎಂಬ ಅರಿವು ಇರಲಿ. ದೂರ ಪ್ರಯಾಣಗಳನ್ನು ತ್ಯಜಿಸಿ. ಹೊಸ ವರ್ಷಾಚರಣೆಯ ಮೋಜು–ಮಸ್ತಿಗಳು ಅನಿಷ್ಟಕ್ಕೆ ದಾರಿ ಆಗುವುದು.
ಶ್ರೀ ವೆಂಕಟೇಶ್ವರ ಉಪಾಸನೆ. ಶುಭ ಸಂಖ್ಯೆ–5

ಮೂಗೂರಲ್ಲಿ ಬಂಡಿ ಉತ್ಸವ



ಮೂಗೂರಿನ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ಚಿಗುರು ಕಡಿಯುವ ಕ್ಷೇತ್ರವಾದ ಹೊಸಹಳ್ಳಿ ಗ್ರಾಮದಲ್ಲಿ ಶನಿವಾರ ಬಂಡಿ ಉತ್ಸವ (ಓಟ) ಬಹಳ ಸಡಗರ ಸಂಭ್ರಮದಿಂದ ನಡೆಯಿತು. ಈ ಸಂದರ್ಭದಲ್ಲಿ ಹೊಸಹಳ್ಳಿ ಗ್ರಾಮದ ಗೌಡರು ಸಮುದಾಯದ ಎಲ್ಲಾ ಮುಖಂಡರು ಗ್ರಾಮಸ್ಥರು ಉಪಸ್ಥಿತರಿದ್ದರು.

ಸಸಿ ನೆಟ್ಟು ವಾಜಪೇಯಿ ಹುಟ್ಟುಹಬ್ಬ ಆಚರಣೆ

ಹುಣಸೂರು: ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಅವರ ಹುಟ್ಟುಹಬ್ಬದ ಪ್ರಯುಕ್ತ ಧರ್ಮಾಪುರ ಮಹಾಶಕ್ತಿ ಕೇಂದ್ರದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ವಿದ್ಯಾರ್ಥಿಗಳಿಂದ ಸಸಿ ನೆಡುವ ಕಾರ್ಯಕ್ರಮವನ್ನು ಭಾರತೀಯ ಜನತಾ ಪಾರ್ಟಿ ಹುಣಸೂರು ನಗರ ಮತ್ತು ಗ್ರಾಮಾಂತರ ಮಂಡಲದಿಂದ ನಡೆಸಲಾಯಿತು.

ಈ ಸಂದರ್ಭದಲ್ಲಿ ಅಧ್ಯಕ್ಷರುಗಳಾದ ಕಾಂತರಾಜು ಹಾಗೂ ನಾರಾಯಣ ಟಿ.ಡಿ., ಜಿಲ್ಲಾ ಉಪಾಧ್ಯಕ್ಷ ಗಣೇಶ್ ಕುಮಾರಸ್ವಾಮಿ, ತಾಲೂಕು ಪ್ರಧಾನ ಕಾರ್ಯದರ್ಶಿ ವೆಂಕಟೇಶ್, ಸುರೇಶ್, ನಿಕಟಪೂರ್ವ ಅಧ್ಯಕ್ಷ ಹನುಗೂಡು ಮಂಜುನಾಥ್ ಇದ್ದರು

ಬನ್ನೂರಿನಲ್ಲಿ ಅದ್ಧೂರಿ ಹನುಮ ಜಯಂತಿ

ಬನ್ನೂರು, ಡಿ.27– ಪಟ್ಟಣದಲ್ಲಿ ಖಾಸಗಿ ಬಸ್ ನಿಲ್ದಾಣದಲ್ಲಿರುವ ಅಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜಾಕಾರ್ಯ ನೆರವೇರಿಸಿ, ಹನುಮ ಜಯಂತಿ ಅಂಗವಾಗಿ ದಸರಾ ಮಾದರಿಯಲ್ಲಿ ವಿವಿಧ ಕಲಾ ಪ್ರಕಾರಗಳೊಂದಿಗೆ ಅದ್ಧೂರಿಯಾಗಿ ಹನುಮ ಉತ್ಸವ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದಲ್ಲಿ ಚಾಮುಂಡೇಶ್ವರಿ ಯುವಕರ ಸಂಘದ ವತಿಯಿಂದ ಬಸ್‌ನಿಲ್ದಾಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಬನ್ನೂರು ಹನುಮ ಹಬ್ಬದ ಉತ್ಸವದ ಕಾರ್ಯಕ್ರಮಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು. ಚಾಮುಂಡೇಶ್ವರಿ ಯುವಕರ ಬಳಗದ ಅಧ್ಯಕ್ಷ ಗುರುನಾಯಕ್, ಮೂರ್ತಿ, ಮಹೇಂದ್ರಸಿಂಗ್‌ಕಾಳಪ್ಪ ಸೇರಿದಂತೆ ಪ್ರಮುಖ ಈ ವೇಳೆ ಉಪಸ್ಥಿತರಿದ್ದರು.

ದಸರಾ ಮಾದರಿಯಲ್ಲಿ ನಡೆದ ಕಲಾ ತಂಡದ ಮೆರವಣಿಗೆಯಲ್ಲಿ ಬೀಡನಹಳ್ಳಿ ನಂದಿ ಬಸವೇಶ್ವ, ಡೋಲು ಕುಣಿತ, ಪೂಜಾ ಕುಣಿತ, ವೀರಗಾಸೆ ಕುಣಿತ, ಕಂಸಾಳೆ ನೃತ್ಯ, ಚಿಲಿಪಿಲಿ ಗೊಂಬೆಗಳು, ಯುವಕರ ನೃತ್ಯ, ತಮಟೆವಾದ್ಯ ನೋಡುಗರಿಗೆ ಬಹಳಷ್ಟು ಆಕರ್ಷಣೀಯವಾಗಿತ್ತು. ಈಶ್ವರ ಮಾದರಿ, ಹನುಮನ ಮೂರ್ತಿ, ಚಾಮುಂಡೇಶ್ವರಿ, ರಾಮ ದೇವರ ಉತ್ಸವ ಮೂರ್ತಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು.



ಹನುಮ ಜಯಂತಿ ಮೆರವಣಿಗೆಗೆ ಮಾಜಿ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು.



ಹನುಮ ಉತ್ಸವದಲ್ಲಿ ಪಾಲ್ಗೊಂಡ ಜಾನಪದ ಕಲಾ ತಂಡಗಳು.

ಬಸವೇಶ್ವರ ವೃತ್ತದ ಮೂಲಕ ಸಾಗಿದ ಹನುಮನ ಉತ್ಸವ ಮೈಸೂರು–ಮಳವಳ್ಳಿ ಮುಖ್ಯ ರಸ್ತೆಯ ಕಾವೇರಿ ವೃತ್ತದೊಂದಿಗೆ ಬನ್ನೂರಿನ ಪ್ರಮುಖ ಬೀದಿಗಳಲ್ಲಿ ಅದ್ಧೂರಿಯಾಗಿ ನಡೆಯಿತು. ಮೆರವಣಿಗೆಯಲ್ಲಿ ಅಹಿತಕರ ಘಟನೆಗಳು ನಡೆಯದಂತೆ ವೃತ್ತ ನಿರೀಕ್ಷಕರು, ಆರಕ್ಷಕ ನಿರೀಕ್ಷರು ಸೂಕ್ತ ಬಂದೋಬಸ್ತ್ ವ್ಯವಸ್ಥೆಯನ್ನು ಕಲ್ಪಿಸಿದ್ದರು.

> ಹನುಮ ಜಯಂತಿ ನಮ್ಮೆಲ್ಲರ ಭಾವನೆ ಮತ್ತು ಶಕ್ತಿಯ ಪ್ರತೀಕವಾಗಿದ್ದು ನಾವೆಲ್ಲರು ಒಗ್ಗಟ್ಟಿನಿಂದ ಕೂಡಿ ಮಾಡುವಂತ ಹಬ್ಬ ಇದಾಗಿದೆ. ಹನುಮ ಎಂದಾಗ ನಮ್ಮಲ್ಲಿ ಮೂಡುವುದು ಸತ್ಯ, ನಿಷ್ಠೆ, ಶಕ್ತಿಯ ಪ್ರತೀಕ ಎನ್ನುವಂತ ಮನೋಭಾವ. ಶ್ರೀ ರಾಮನ ಪರಮ ಭಕ್ತನಾಗಿ, ನಾಡಿನ ಶಕ್ತಿಯಾಗಿ, ನಮ್ಮೆಲ್ಲರ ಆರಾಧ್ಯ ದೈವವಾಗಿ, ಇಂದಿಗು ಅಜರಾಮರರಾಗಿದ್ದಾರೆ. ಇವರ ಹಬ್ಬವನ್ನು ನಾವೆಲ್ಲರು ವಿಜೃಂಭಣೆಯಿಂದ ಆಚರಣೆ ಮಾಡಿ ಸಾಮರಸ್ಯದ ಜೀವನ ನಡೆಸೋಣ.
> – ಪ್ರತಾಪ್ ಸಿಂಹ, ಮಾಜಿ ಸಂಸದ

ಪುರಸಭಾ ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಪುರಸಭಾ ಸದಸ್ಯ ಮೂರ್ತಿ, ಬಿಜೆಪಿ ಜಿಲ್ಲಾಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ, ಮೈಸೂರು ಗ್ರಾಮಾಂತರ ಜಿಲ್ಲೆ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್.ಎಂ.ರಾಮಚಂದ್ರ, ಪರಚಿತ ರಾಜ್ ಅರಸ್, ಜಿಲ್ಲಾ ಕಾರ್ಯದರ್ಶಿ ಸಾಮ್ರಾಟ್ ಸುಂದರೇಶನ್, ದಯಾನಂದ್ ಪಟೇಲ್, ತಾಲೂಕು ಒಕ್ಕಲಿಗ ಸಂಘದ ಅಧ್ಯಕ್ಷ ವೈ.ಎಸ್. ರಾಮಸ್ವಾಮಿ, ಸಮಾಜ ಸೇವಕ ಡಾ. ಮಹೇಂದ್ರಸಿಂಗ್‌ಕಾಳಪ್ಪ, ತಾಲೂಕು ಅಧ್ಯಕ್ಷ ಶಿವಕುಮಾರ್, ಪೈವೆಂಕಟೇಶ್, ರಾಜೇಗೌಡ, ಶಾಂತರಾಜು, ವೀರಶೈವ ಮುಖಂಡ ಎಸ್.ಎಂ ಪ್ರಕಾಶ್, ತಾಲೂಕು ಪ್ರಧಾನ ಕಾರ್ಯದರ್ಶಿ ಡಾ. ಮಲ್ಲಿಕಾರ್ಜುನ, ಚಂದ್ರಶೇಖರ್, ರಾಜಶೇಖರ್, ಗೋಪಿನಾಥ್, ಬನ್ನೂರು ಟೌನ್ ಅಧ್ಯಕ್ಷ ಕಾಳೇಗೌಡ, ಗಣೇಶ್, ಭವ್ಯ, ದಾಸಯ್ಯ ಸೇರಿದಂತೆ ಎಲ್ಲಾ ಮುಖಂಡರು, ಚಾಮುಂಡೇಶ್ವರಿ ಸಂಘದ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

ಮಕ್ಕಳಿಗೆ ವಿದ್ಯೆಯ ಜೊತೆಗೆ ಸಂಸ್ಕಾರ ಸಹ ಮುಖ್ಯ

ತಿ.ನರಸೀಪುರ ಡಿ.27– ಮಕ್ಕಳಿಗೆ ವಿದ್ಯೆಯ ಜೊತೆಗೆ ಸಂಸ್ಕಾರವು ಸಹ ಮುಖ್ಯ ಎಂದು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಹೇಳಿದರು.

ಪಟ್ಟಣದ ಹೌಸಿಂಗ್ ಬೋರ್ಡ್‌ನಲ್ಲಿರುವ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು ಮತ್ತು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಆಶೀರ್ವಾದಗಳೊಂದಿಗೆ ಮತ್ತು ಶ್ರೀ ಶ್ರೀ ಸೋಮೇಶ್ವರನಾಥ ಸ್ವಾಮೀಜಿಯವರ ಅಧ್ಯಕ್ಷತೆಯಲ್ಲಿ ಶಾಲೆಯ ಆದಿಚುಂಚನಗಿರಿ ಬಾಲಜಗತ್ ಪೂರ್ವ ಪ್ರಾಥಮಿಕ, ಹಿರಿಯ ಪ್ರಾಥಮಿಕ ಪ್ರೌಢಶಾಲೆಯಲ್ಲಿ ನಡೆದ 20ನೇ ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗ್ರಾಮೀಣ ಭಾಗದಿಂದ ಆಗಮಿಸುವ ಮಕ್ಕಳು ಹೆಚ್ಚು ಬುದ್ಧಿವಂತರಾಗಿದ್ದು, ಶ್ರೀ ಬಾಲಗಂಗಾ ಧರನಾಥ ಸ್ವಾಮೀಜಿಗಳ ದೂರದೃಷ್ಟಿ ಫಲವಾಗಿ ಇಂದು ನಮ್ಮ ಸಂಸ್ಥೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದರು.



ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸನ್ಮಾನಿಸಿದರು.


ವಿದ್ಯಾಸಂಸ್ಥೆಗಳಿಂದ ಮಾತ್ರ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲು ಸಾಧ್ಯ ಹೀಗಾಗಿ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಗಮನ ಹರಿಸಬೇಕು ಎಂದು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಶಿವಮೂರ್ತಿ. ಎಸ್.ಸಿ ಮಾತನಾಡಿ, ಶಿಕ್ಷಣ ಎಂಬುದು ಮಕ್ಕಳಿಗೆ ಮೂಲಭೂತ ಹಕ್ಕು ಮಕ್ಕಳಿಗೆ ಶಿಕ್ಷಣವನ್ನು ಕಡ್ಡಾಯವಾಗಿ ನೀಡಬೇಕು. ಮಕ್ಕಳು ವಿದ್ಯಾವಂತರಾಗಲೂ ಶಿಕ್ಷಣದ ಜೊತೆಗೆ ಶಿಕ್ಷಕರು ಸಹ ಮುಖ್ಯ ಪಾತ್ರ ವಹಿಸುತ್ತಾರೆ ಎಂದರು. ಶಿವಶಂಕರಮೂರ್ತಿ (ಕರ್ನಾಟಕ ಸ್ಟೇಟ್ ಲೇಬರ್ ಆರ್ಗನೈಸೇಷನ್) ಸಂಸ್ಥೆಯ ಬೆಳವಣಿಗೆಯ ಕುರಿತು ಮತ್ತು ಬಿಜಿಎಸ್ ಸಂಸ್ಥೆಯ ಬೆಳವಣಿಗೆಯಲ್ಲಿ ಸ್ವಾಮೀಜಿಯವರ ಪಾತ್ರ ಪ್ರಸ್ತುತ ಶಿಕ್ಷಣ ವ್ಯವಸ್ಥೆ ಕುರಿತು ತಿಳಿಸಿದರು.

ಬಿ.ಆರ್.ಸಿ.ನಾಗೇಶ್ ಗಂಗಾವಾಡಿ, ಸಿಆರ್‌ಪಿ ಭಾಸ್ಕರ್. ಸಿ, ಟಿಪಿಇಓ ಮರಿಸ್ವಾಮಿ ಕೆ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರಮೂರ್ತಿ ಎಂ., ವಿದ್ಯೋದಯ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಬಿ.ಸಿ.ಇಂದಿರಮ್ಮ, ಶಾಲಾ ವ್ಯವಸ್ಥಾಪಕರಾದ ಬಸವರಾಜು, ಸೋಮಣ್ಣ ಮುಖ್ಯ ಶಿಕ್ಷಕರಾದ ಪ್ರಶಾಂತ್ ಎಂ.ಬಿ., ಶಿಕ್ಷಕರಾದ ಶಾಂತಕುಮಾರ್, ಜಗದೀಶ್, ರವಿ, ಲಾವಣ್ಯ, ರಮ್ಯಶ್ರೀ, ಮಂಜುಶ್ರೀ, ವಿನೋದ್, ಸೌಮ್ಯ, ಚೈತ್ರ, ಅನಿತಾ, ಶಿಲ್ಪಶ್ರೀ, ನಾಗನಂದಿನಿ, ಜ್ಯೋತಿ, ಮಮತಾ, ದಿವ್ಯ, ಕಾವ್ಯಶ್ರೀ, ಪೂಜಶ್ರೀ, ಕಾವ್ಯ ಮತ್ತು ಆಯಾಗಳಾದ ಜ್ಯೋತಿ, ಗೀತಾ, ಅಶ್ವಿನಿ ಮತ್ತು ಮಠದ ಭಕ್ತರುಗಳು ಹಾಜರಿದ್ದರು.

ನಾಳೆ ಹುಣಸೂರಲ್ಲಿ ಕುವೆಂಪು ಜನ್ಮ ದಿನ ಆಚರಣೆ

ಹುಣಸೂರು.ಡಿ.27– ರಾಷ್ಟ್ರಕವಿ ಕುವೆಂಪು ಅವರ 121ನೇ ಜನ್ಮದಿನಾಚರಣೆಯನ್ನು ಹುಣಸೂರು ರೋಟರಿ ಸಂಸ್ಥೆ ವತಿಯಿಂದ ಡಿ.29ರಂದು 10.30ಕ್ಕೆ ಆಯೋಜಿಸಲಾಗಿದೆ ಎಂದು ರೋಟರಿ ಸಂಸ್ಥೆ ಹಾಗೂ ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣ ಕುಮಾರ್ ತಿಳಿಸಿದರು.



ರೋಟರಿ ಸಂಸ್ಥೆಯ ಆವರಣದಲ್ಲಿ ಆಯೋಜಿಸಿರುವ ಕುವೆಂಪು ಅವರ ಜನ್ಮದಿನದ ಕಾರ್ಯಕ್ರಮವನ್ನು ಸಹಾಯಕ ಗೌರ್ನರ್ ತಿರುಮಲಾಪುರ ರಾಜೇಗೌಡ ನೆರವೇರಿಸುವರು. ವಿಶ್ರಾಂತ ಪ್ರಾಂಶುಪಾಲ ಮೋದೂರು ಮಹೇಶಾರಾಧ್ಯ, ಕುವೆಂಪುರವರ ಜೀವನ ಹಾಗೂ ಸಾಧನೆ ಬಗ್ಗೆ ಮಾತನಾಡಲಿದ್ದಾರೆ. ಕುವೆಂಪು ಅವರ ಬಗ್ಗೆ 130 ಕವಿತೆಗಳನ್ನು ರಚಿಸಿ ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ತಾಲೂಕಿನ ಗ್ರಾಮೀಣ ಯುವ ಪ್ರತಿಭೆ ಕುಡಿನೀರು ಮುದ್ದನಹಳ್ಳಿ ರವಿಯವರನ್ನು ದಿನಾಚರಣೆ ಅಂಗವಾಗಿ ಸನ್ಮಾನಿಸಲಾಗುವುದು ಎಂದರು.

ಹೋಟೆಲ್ ಮಾಲೀಕರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ



ನಂಜನಗೂಡಿನ ಮಹದೇಶ್ವರ ಸಭಾಂಗಣದಲ್ಲಿ ನಂಜನಗೂಡು ಹೋಟೆಲ್ ಮಾಲೀಕರ ಸಂಘದ ನೂತನ ವರ್ಷದ ದಿನದರ್ಶಿಕೆಯನ್ನು ಸಂಘದ ಅಧ್ಯಕ್ಷ ಗುರುಪ್ರಸನ್ನ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಗೌರವಾಧ್ಯಕ್ಷ ರಾಮಕೃಷ್ಣ, ಎನ್. ರಾಜೇಂದ್ರ ಕುಮಾರ್, ಅನಿಲ್ ಕುಮಾರ್, ಸಂದೀಪ್, ಕೆ.ಜಿ.ಆನಂದ್ ಸೇರಿದಂತೆ ಹೋಟೆಲ್ ಮಾಲೀಕರ ಸಂಘದ ಸದಸ್ಯರು ಉಪಸ್ಥಿತರಿದ್ದರು.

ನಂ.ಗೂಡಲ್ಲಿ ರಾಷ್ಟ್ರ ಮಟ್ಟದ ಮುಕ್ತ ಕರಾಟೆ ಪಂದ್ಯಾವಳಿ

ಕರಾಟೆಯಿಂದ ದೈಹಿಕ, ಮಾನಸಿಕ ಶಕ್ತಿ, ಆತ್ಮವಿಶ್ವಾಸ ಹೆಚ್ಚುತ್ತದೆ



ರಾಷ್ಟ್ರಮಟ್ಟದ ಮುಕ್ತ ಕರಾಟೆ ಪಂದ್ಯಾವಳಿಯನ್ನು ವಿಶ್ವಕರ್ಮ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್ ಉದ್ಘಾಟಿಸಿದರು.

ನಂಜನಗೂಡು, ಡಿ.27– ಕರಾಟೆ ಒಂದು ಸಮರಕಲೆ, ಕರಾಟೆಯಲ್ಲಿ ತೊಡಗುವುದರಿಂದ ದೈಹಿಕ ಶಕ್ತಿ, ಏಕಾಗ್ರತೆ, ಶಿಸ್ತು, ಮತ್ತು ಆತ್ಮವಿಶ್ವಾಸ ಹೆಚ್ಚಿಸುತ್ತದೆ ಎಂದು ವಿಶ್ವಕರ್ಮ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್ ತಿಳಿಸಿದ್ದಾರೆ.

ನಗರದ ಕುಮಲಮ್ಮ ಗುರುಮಲ್ಲಪ್ಪ ಕಲ್ಯಾಣ ಮಂಟಪದಲ್ಲಿ ಓಕಿನೊವಾ ಕರಾಟೆ ಸಂಸ್ಥೆ ವತಿಯಿಂದ ಏರ್ಪಡಿಸಲಾಗಿದ್ದ ರಾಷ್ಟ್ರ ಮಟ್ಟದ ಮುಕ್ತ ಕರಾಟೆ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದರು.

ಕರಾಟೆ ತರಬೇತಿ ಪಡೆಯುವುದರಿಂದ ತುರ್ತು ಸಂದರ್ಭದಲ್ಲಿ ವ್ಯಕ್ತಿಯು ಸ್ವಯಂ ರಕ್ಷಣೆ ಪಡೆಯಲು ಸಹಾಯಕವಾಗಲಿದೆ, ಆದ್ದರಿಂದ ಗಂಡು–ಹೆಣ್ಣು ಎಂಬ ಭೇದ ಭಾವವಿಲ್ಲದೆ ಎಲ್ಲರೂ ಈ ಕಲೆಯನ್ನು ಕಲಿತುಕೊಳ್ಳಬೇಕು, ಕರಾಟೆ ತರಬೇತಿಯಿಂದ ನಮ್ಮ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಹೆಚ್ಚಿಸುವ ಜೊತೆಗೆ ವ್ಯಕ್ತಿಯಲ್ಲಿ ಶಕ್ತಿ, ಚುರುಕುತನ, ಮುಖ್ಯವಾಗಿ ಶಿಸ್ತು, ಏಕಾಗ್ರತೆಯನ್ನು ಹೆಚ್ಚಿಸಿ ವ್ಯಕ್ತಿಯಲ್ಲಿ ಆತ್ಮವಿಶ್ವಾಸ ಬೆಳೆಸುತ್ತದೆ, ಆದ್ದರಿಂದ ಪ್ರತಿಯೊಬ್ಬರೂ ಕರಾಟೆ ತರಬೇತಿ ಪಡೆಯಬೇಕು ಎಂದರು.

ಕರಾಟೆ ಪದ್ಯಾವಳಿಯು ಸ್ಪರ್ಧಿಗಳು ವೇಗ ಮತ್ತು ನಿಖರತೆಯಿಂದ ತಮ್ಮ ತಂತ್ರಗಳನ್ನು ಪ್ರದರ್ಶನ ಮಾಡಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಒಂದು ವೇದಿಕೆಯಾಗಿದೆ, ಅಲ್ಲದೆ ಕರಾಟೆ ಪಂದ್ಯಾವಳಿಯಲ್ಲಿ ಸ್ಪರ್ಧಿಸುವುದರಿಂದ ಸ್ಪರ್ಧಿಯು ವಿಶ್ವದ ವಿವಿಧ ದೇಶದ ಸ್ಪರ್ಧಿಗಳೊಂದಿಗೆ ಕಲಿಯಲು ಅವಕಾಶವಿದೆ, ಆದ್ದರಿಂದ ಎಲ್ಲಾ ಸ್ಪರ್ಧಿಗಳು ಸೋಲು–ಗೆಲುವನ್ನು ಲೆಕ್ಕಿಸದೆ ಕ್ರೀಡಾ ಮನೋಭಾವನೆಯಿಂದ ಕ್ರೀಡೆಯಲ್ಲಿ ತೊಡಗಬೇಕು, ಪೋಷಕರು ಸಹ ತಮ್ಮ ಮಕ್ಕಳಲ್ಲಿ ಇರುವ ಪ್ರತಿಭೆಯನ್ನು ಪ್ರೋತ್ಸಾಹಿಸಿ ಪ್ರತಿಭೆ ಪ್ರದರ್ಶಿಸಲು ಅವಕಾಶ ಕಲ್ಪಿಸಬೇಕು ಎಂದು ಹೇಳಿದರು.

ಸಮಾರಂಭದಲ್ಲಿ ವನ್ಯ ಜೀವಿ ಸಂರಕ್ಷಕ ಸ್ನೇಕ್ ಬಸವರಾಜು, ಎಸ್. ಸುನಿಲ್ ಕುಮಾರ್, ಕರಾಟೆ ಪಂದ್ಯಾವಳಿ ಆಯೋಜಕರಾದ ಬಿ. ಕುಮಾರಸ್ವಾಮಿ, ಬಿ.ರಾಜೇಶ್, ರೆನ್ಸಿ ಪಿ.ಭರತೇಶ್, ರಾಜೇಂದ್ರ, ಜಿ.ಡಿ. ಶರ್ಮ, ಶಿವರಾಜ್, ಸಂತೋಷ್ ಶರ್ಮಾ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಡಿ.29 ಕುವೆಂಪು, ಜ.1 ಅಮರಶಿಲ್ಪ ಜಕಣಾಚಾರಿ ಜಯಂತಿ ಆಚರಣೆ

ಸರಗೂರು: ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಆಡಳಿತದ ವತಿಯಿಂದ ಡಿ.29 ವಿಶ್ವಮಾನವ ಜಯಂತಿ ಹಾಗೂ ಜ.1 ರಂದು ನಡೆಯುವ ಶ್ರೀ ಅಮರಶಿಲ್ಪಿ ಜಕಣಚಾರಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಯಿತು. ತಹಸೀಲ್ದಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಈ ಕುರಿತು ಚರ್ಚಿಸಲಾಯಿತು.

ಜಯಂತಿ ದಿನದಂದು ವಿಶ್ವಮಾನವ ಕುವೆಂಪು ಹಾಗೂ ಶ್ರೀ ಅಮರಶಿಲ್ಪಿ ಜಕಣಾಚಾರಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಬೇಕು. ಶಿಷ್ಟಾಚಾರದಂತೆ ಗಣ್ಯರನ್ನು, ಉಪನ್ಯಾಸಕರನ್ನು ಆಹ್ವಾನಿಸಿ ಉಪಾನ್ಯಾಸ ನೀಡುವ ವ್ಯವಸ್ಥೆ ಮಾಡಬೇಕು. ಹಿರಿಯ ನಾಗರಿಕರಿಗೆ ಗೌರವ ಸಮರ್ಪಣೆ ನಡೆಸುವ ಮೂಲಕ ಶ್ರೀ ಅಮರಶಿಲ್ಪಿ ಜಕಣಾಚಾರಿ ಹಾಗೂ ವಿಶ್ವಮಾನವ ಕುವೆಂಪು ಅವರ ಜಯಂತಿ ಆಚರಿಸಲು ತೀರ್ಮಾನಿಸಿತು.

ಚುಂಚನಕಟ್ಟೆ ಜಾನುವಾರು ಜಾತ್ರೆಗೆ ದಿನಗಣನೆ

ಈ ಬಾರಿ 30ರಿಂದ 38 ಸಾವಿರ ರಾಸುಗಳು ಭಾಗವಹಿಸುವ ನಿರೀಕ್ಷೆ

ಚುಂಚನಕಟ್ಟೆ, ಡಿ.27–ದಕ್ಷಿಣ ಭಾರತದಲ್ಲಿಯೇ ಹೆಸರುವಾಸಿಯಾಗಿರುವ ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಜಾನುವಾರು ಜಾತ್ರೆಗೆ ದಿನಗಣನೆ ಆರಂಭವಾಗಿದ್ದು ಈ ಬಾರಿಯ ಜಾತ್ರೆಯಲ್ಲಿ 30ರಿಂದ 38 ಸಾವಿರಕ್ಕೂ ಅಧಿಕ ರಾಸುಗಳು ಭಾಗವಹಿಸುವ ನಿರೀಕ್ಷೆ ಇದೆ.

ಜ.1ರಿಂದ ಆರಂಭವಾಗುವ ಈ ಜಾನುವಾರು ಜಾತ್ರೆಯಲ್ಲಿ ರೈತರು ತಮ್ಮ ರಾಸುಗಳನ್ನು ಕಟ್ಟಲು ದವಣಿ (ಜೋಡೆತ್ತು ಕಟ್ಟುವ ಸ್ಥಳ) ಮಾಡಿಕೊಳ್ಳುತ್ತಿದ್ದು ಈ ಬಾರಿಯು ಕೂಡ ರಾಸುಗಳ ಮಾರಾಟ ಮತ್ತು ಕೊಳ್ಳುವ ಕೋಟ್ಯಾಂತರ ರೂಪಾಯಿಗಳ ವ್ಯಾಪಾರ ವಹಿವಾಟು ನಡೆಯುವ ನಿರೀಕ್ಷೆ ಇದೆ

ಈಗಾಗಲೇ ರೈತರು ರಾಸುಗಳನ್ನು ಕಟ್ಟಲು ಪ್ರತ್ಯೇಕ ಜಾಗ ಇಲ್ಲದ ಕಾರಣ ಚುಂಚನಕಟ್ಟೆಯ ಸುತ್ತಮುತ್ತ ಇರುವ ರೈತರ ಗದ್ದೆಗೆ 5ರಿಂದ 15 ಸಾವಿರ ರೂ. ಗಳನ್ನು ನೀಡಿ ಅಲ್ಲಿ ರಾಸುಗಳನ್ನು ಕಟ್ಟಲು ಸ್ವಚ್ಛಗೊಳಿ ಸುತ್ತಿದ್ದಾರೆ. ಅಲ್ಲದೆ ತಮ್ಮ ರಾಸುಗಳ ವೈಭೋಗ ತೋರಲು ಬೃಹತ್ ಚಪ್ಪರ ಹಾಕಲು ತಯಾರಿ ನಡೆಸುತ್ತಿದ್ದಾರೆ.





ಚುಂಚನಕಟ್ಟೆಯಲ್ಲಿ ಜಾನುವಾರು ಜಾತ್ರೆಗೆ ಜಾನುವಾರು ಕಟ್ಟಲು ಜೆಸಿಬಿ ಯಂತ್ರದ ಮೂಲಕ ಜಾಗ ಸಿದ್ಧಪಡಿಸುತ್ತಿರುವುದು

> ಈಗಾಗಲೇ ಚುಂಚನಕಟ್ಟೆಯ ಜಾನುವಾರು ಜಾತ್ರೆ ಮತ್ತು ಶ್ರೀರಾಮದೇವರ ರಥೋತ್ಸವದ ಪೂರ್ವ ಸಿದ್ದತೆಗಾಗಿ ಸ್ಥಳೀಯ ಜನಪ್ರತಿನಿಧಿಗಳು ಮತ್ತು ತಾಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಅಗತ್ಯ ಸೌಕರ್ಯ ಕಲ್ಪಿಸಿಸಲು ತಾಲೂಕು ಅಡಳಿತಕ್ಕೆ ಸೂಚನೆ ನೀಡಿದ್ದು ಯಶಸ್ವಿಗೆ ಶ್ರಮಿಸುತ್ತೇನೆ.
> – ಡಿ.ರವಿಶಂಕರ್, ಶಾಸಕರು

ರಾಜ್ಯದ ಹಾಸನ, ಮಂಡ್ಯ, ರಾಮನಗರ, ಚಾಮರಾಜನಗರ ಸೇರಿದಂತೆ ಇತರೆ ಜಿಲ್ಲೆಗಳಿಂದ ವಿವಿಧ ತಳಿಯ ಜಾನುವಾರು ಭಾಗವಹಿಸಲಿದ್ದು ಇದಕ್ಕಾಗಿ ರೈತರು ಸಿದ್ಧತೆ ಆರಂಭಿಸಿದ್ದು, ಜಾತ್ರೆ ಇನ್ನು 3 ದಿನದಲ್ಲಿ ಭರ್ಜರಿಯಾಗಿ ಆರಂಭಗೊಳ್ಳಲಿದೆ. ಇದಕ್ಕಾಗಿ ರಾಸುಗಳ ವ್ಯಾಪಾರಿಗಳು ಎದುರು ನೋಡುತ್ತಿದ್ದಾರೆ.

ಇತ್ತ ಸಾವಿರಾರು ರೈತರು ರಾಸುಗಳನ್ನು ಕಟ್ಟಲು ದವಣಿಗಳನ್ನು ನಿರ್ಮಿಸುತ್ತಿದ್ದಾರೆ. ಅತ್ತ ಜಾತ್ರೆಯಲ್ಲಿ ವ್ಯಾಪಾರ ವಹಿವಾಟು ನಡೆಸಲು ವಿವಿಧ ಅಂಗಡಿಗಳು ದೀಪದ ಅಲಂಕಾರ ವೈಭವದಿಂದ ದೇವಾಲಯದ ಸುತ್ತಮುತ್ತಲು ಸ್ವಚ್ಛತೆ ದೇವಸ್ಥಾನದ ಹಾಗೂ ಆರ್ಚುಗಳು ಸುಣ್ಣ ಬಣ್ಣ ಶೃಂಗಾರ ಗೊಳಿಸಲಾಗಿದೆ. 16 ರಂದು ಕೋದಂಡ ರಾಮನ ಬ್ರಹ್ಮರಥೋತ್ಸವ ನಡೆಯಲಿದ್ದು ಸಕಲ ಸಿದ್ಧತೆಗಳನ್ನು ಮಾಡಲಾಗಿದೆ. ಪರಿಣಾಮವಾಗಿ ಜಾತ್ರೆ ಇನ್ನು ಕೆಲವೇ ದಿನದಲ್ಲಿ ವೈಭವಕ್ಕೆ ಸಾಕ್ಷಿಯಾಗಲಿದ್ದು ನೋಡುಗರನ್ನು ತನ್ನತ್ತ ಕೈ ಬೀಸಿ ಕರೆಯಲಿದೆ

ಈಗಾಗಲೇ ಶಾಸಕ ಡಿ.ರವಿಶಂಕರ್ ಅವರು ಜಾತ್ರೆಯ ಕುರಿತು ಪೂರ್ವಭಾವಿ ಸಭೆ ನಡೆಸಿ ಅಗತ್ಯ ಮೂಲ ಸೌಲಭ್ಯವನ್ನು ಕಲ್ಪಿಸಲು ತಾಲೂಕು ಮಟ್ಟದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿರುವ ಪರಿಣಾಮವಾಗಿ ಅಧಿಕಾರಿಗಳನ್ನು ತಮ್ಮ ಇಲಾಖೆಯಿಂದ ಕಲ್ಪಿಸಿ ಜಾತ್ರೆಗೆ ಕಲ್ಪಿಸ ಬಹುದಾದ ಸವಲತ್ತುಗಳನ್ನು ಕಲ್ಪಿಸಲು ಸಿದ್ದತೆ ಆರಂಭಿಸಿದ್ದಾರೆ.

ಕಾರ್ಯಕ್ರಮಗಳು: ಚುಂಚನಕಟ್ಟೆಯಲ್ಲಿ ಜನವರಿ ತಿಂಗಳಿನಿಂದ ಜಾನು ವಾರು ಜಾತ್ರೆ ಮತ್ತು ಶ್ರೀರಾಮ ದೇವರ ರಥೋತ್ಸವ ಜರುಗುವುದರಿಂದ ವಿವಿಧ ಪೂಜಾ ಕಾರ್ಯಕ್ರಮಗಳು ನಡೆಯಲಿವೆ ಜನವರಿ 2 ರಂದು ಕೆ.ಅರ್.ನಗರದಿಂದ ಶ್ರೀರಾಮ ದೇವರ ಉತ್ಸವ ಮೂರ್ತಿಗಳ ಅಗಮನ,ಜ.13 ರಂದು ಸೀತಾ ಕಲ್ಯಾಣ, ಜ. 16 ರಂದು ಶ್ರೀರಾಮ ದೇವರ ಬ್ರಹ್ಮ ರಥೋತ್ಸವ, 18 ರಂದು ತೆಪ್ಪೋತ್ಸವ ನಡೆಯಲಿದೆ.

ಪ್ರಾಮಾಣಿಕವಾಗಿ ಶಿಕ್ಷಣ ನೀಡಿ, ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಫಲಿತಾಂಶ ತನ್ನಿ

ಶಿಕ್ಷಕರ ಕನ್ನಡ ಹಬ್ಬದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಶಿಕ್ಷಕರಿಗೆ ಕರೆ



ಶಿಕ್ಷಕರ ಕನ್ನಡ ಹಬ್ಬವನ್ನು ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಿದರು. ಈ ವೇಳೆ ಶಿಕ್ಷಕರು ಮತ್ತು ಅಧಿಕಾರಿಗಳಿದ್ದರು.

ಹೆಚ್.ಡಿ.ಕೋಟೆ, ಡಿ.27– ಶಿಕ್ಷರು ತಮ್ಮಲ್ಲಿರುವ ಪ್ರತಿಭೆಯನ್ನು ತೋರಿಸುವ ಉತ್ತಮ ಕೆಲಸ ಆಗಬೇಕು ಎಂದು ಕರೆ ನೀಡಿದ ಶಾಸಕ ಅನಿಲ್ ಚಿಕ್ಕಮಾದು, ಶಿಕ್ಷರು ಪ್ರಾಮಾಣಿಕವಾಗಿ ಮಕ್ಕಳಿಗೆ ಶಿಕ್ಷಣ ನೀಡಿದರೆ ಈ ಬಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಫಲಿತಾಂಶ ಬರಲಿದೆ ಎಂದರು.

ಪಟ್ಟಣದ ಬಿಜಿಎಸ್ ಭವನದಲ್ಲಿ ಕ್ಷೇತ್ರ ಶಿಕ್ಷಣ ಅಧಿಕಾರಿಗಳ ಕಚೇರಿ, ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಶಿಕ್ಷಕರ ಭಾಷಾ ಬಲವರ್ಧನೆಗಾಗಿ ಹಮ್ಮಿಕೊಂಡಿದ್ದ ಶಿಕ್ಷಕರ ಕನ್ನಡ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಮಾದರಿ ತಾಲೂಕು ನಮ್ಮದು. ಕಳೆದ ಬಾರಿಗಿಂತ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಉತ್ತಮವಾಗಿ ಬರುವುದರಲ್ಲಿ ಅನುಮಾನ ಇಲ್ಲಾ. ಇನ್ನೂ ಮೂರು ತಿಂಗಳು ಕಾಲಾವಕಾಶವಿದ್ದು ಶಿಕ್ಷಕರು ಪ್ರಾಮಾಣಿಕವಾಗಿ ಮಕ್ಕಳಿಗೆ ಶಿಕ್ಷಣ ನೀಡಿದರೆ ಉತ್ತಮ ಫಲಿತಾಂಶ ಬರಲಿದೆ ಎಂದರು.

ಶಿಕ್ಷಕರ ವೃತ್ತಿ ಉತ್ತಮವಾದದ್ದು, ರಾಜ್ಯದಲ್ಲಿ ಶಿಕ್ಷಣ, ಮತ್ತು ಆರೋಗ್ಯಕ್ಕೆ ಬಜೆಟ್‌ನಲ್ಲಿ ಹೆಚ್ಚು ಒತ್ತು ನೀಡಲಾಗಿದ್ದು, ನಾನು ಕೂಡ ತಾಲೂಕಿನಲ್ಲಿ ಶಿಕ್ಷಣ ಮತ್ತು ಆರೋಗ್ಯಕ್ಕೆ ನೆಚ್ಚಿನ ಆದ್ಯತೆ ನೀಡಿದ್ದೇನೆ. ತಾಲೂಕಿನ ವಿವಿಧ ಶಾಲೆಗಳಲ್ಲಿ 89 ಕನ್ನಡ ಭಾಷಾ ಪ್ರಯೋಗಗಳನ್ನು ಮಾಡಿ ಆ ಮೂಲಕ ಮಕ್ಕಳಿಗೆ ಉತ್ತಮ ಫಲಿತಾಂಶ ಬರಲು ಉತ್ತೇಜನ ನೀಡುತ್ತಿದ್ದಾರೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಮುಂದಿನ ದಿನಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ತರಲು ಪಣತೊಟ್ಟು ಕೆಲಸ ಮಾಡುತ್ತಿದ್ದಾರೆ ಎಂದರು. ಶಿಕ್ಷಣದಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಬೆಳಗ್ಗೆ ಮತ್ತು ಸಂಜೆ ಹೆಚ್ಚುವರಿಯಾಗಿ ವಿಶೇಷ ತರಗತಿ ತೆಗೆದುಕೊಂಡು ಅವರಿಗೆ ಮಾರ್ಗದರ್ಶನ ಮಾಡಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು ಮಾತನಾಡಿ ಶಿಕ್ಷಕರಲ್ಲಿ ಇರುವ ಕೌಶಲ್ಯವನ್ನು ಹೊರಗೆ ತರುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ತರುವ ದಿಕ್ಕಿನಲ್ಲಿ ಕೆಲಸ ಮಾಡುತ್ತಿದ್ದೇವೆ. ಶಿಕ್ಷಕರು ತಮ್ಮ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಶಿಸ್ತನ್ನು ಕಾಪಾಡಿಕೊಳ್ಳಲು ಶಿಕ್ಷಣ ಇಲಾಖೆ ಪಣತೊಟ್ಟು ಕಟಿಬದ್ಧರಾಗಿ ಕೆಲಸ ಮಾಡುತ್ತಿದ್ದಾರೆ ಎಂದರು.

ಇದೇ ವೇಗದಲ್ಲಿ ಎರಡು ವರ್ಷಗಳ ಕಾಲ ಕೆಲಸ ಮಾಡಿದರೆ ರಾಜ್ಯದಲ್ಲಿ ಮಾದರಿ ತಾಲೂಕಾಗಿ ಬದಲಾಗುವುದರಲ್ಲಿ ಎರಡು ಮಾತಿಲ್ಲಾ. 1200 ಮಕ್ಕಳನ್ನು ನೇರವಾಗಿ ಬೇಟಿ ಮಾಡಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದೇನೆ. ಅದೇ ರೀತಿ ಮುಖ್ಯ ಶಿಕ್ಷಕರು ಕೂಡ ಬಿಗಿಯಾಗಿದ್ದು ಉತ್ತಮ ಫಲಿತಾಂಶ ಬರುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಬಿಇಓ ರಾಜು ನೇತೃತ್ವದಲ್ಲಿ ಕಂಸಾಳ ಜಾನಪದ ನೃತ್ಯ ಮಾಡುವುದರ ಜೊತೆಗೆ ಶಿಕ್ಷಕರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಜಿಲ್ಲಾ ಉಪ ನಿರ್ದೇಶಕ ನಾಗರಾಜು, ಪುರಸಭಾ ಮಾಜಿ ಸದಸ್ಯ ಎಚ್.ಸಿ.ನರಸಿಂಹಮೂರ್ತಿ, ಕ್ಷೇತ್ರ ಸಂಪನ್ಮೂಲ ಅಧಿಕಾರಿ ಕೃಷ್ಣಯ್ಯ, ನಂಜಯ್ಯ,




ಕನ್ನಡ ಹಬ್ಬದಲ್ಲಿ ಶಿಕ್ಷಕರು, ಅಧಿಕಾರಿಗಳಿಂದ ಜಾನಪದ ನೃತ್ಯ.

ಮಹಾದೇವು, ಗಿರೀಶ್ ಮೂರ್ತಿ, ಲಿಂಗರಾಜು, ಸಿದ್ದರಾಜು, ನಾಗರಾಜು, ಪ್ರಕಾಶ್, ರೂಪ, ವಸಂತ್ ಕುಮಾರ್, ಕೆಂಪರಾಜು, ನಾಗೇಂದ್ರ, ಚಂದ್ರಶೇಖರ್, ಜ್ಯೋತಿ, ನಾರಾಯಣಸ್ವಾಮಿ, ಸೋಮ ಸುಂದರ್, ಪುಟ್ಟರಾಜು, ರವೀಂದ್ರ, ಚಿನ್ನಸ್ವಾಮಿ, ಶಿವಪ್ರಕಾಶ್, ಶಿವಯ್ಯ, ಕೃಷ್ಣಮೂರ್ತಿ, ಚಿಕ್ಕದೇವು, ಸುನಂದಾ, ಮಹೇಶ್, ಕಿರಣ್, ದೊರೆಸ್ವಾಮಿ, ಪ್ರಮೋದ್ ರೂಪ, ಪ್ರತಿಭಾ, ಅಧಿಕಾರಿಗಳು, ಜನಪ್ರತಿನಿಧಿಗಳು ಸೇರಿದಂತೆ ಸಾವಿರಾರು ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅನಧಿಕೃತ ಮನೆ ಕಳೆದುಕೊಂಡ ಮುಸ್ಲಿಂ ಜನರಿಗಾಗಿ ಮಿಡಿದ ಕೇರಳ ಸರ್ಕಾರ

ಬೆಂಗಳೂರಿನ ಕೋಗಿಲು ಲೇಔಟ್‌ಗೆ ಭೇಟಿ ಕೊಟ್ಟ ಎಂಪಿ ರಹೀಮ್



ಬೆಂಗಳೂರು: ಬೆಂಗಳೂರು ಉತ್ತರದ ಕೋಗಿಲು ಲೇಔಟ್ ಬಳಿ ನಡೆದ ಮನೆಗಳ ತೆರವು ಪ್ರಕರಣ ಇದೀಗ ರಾಜಕೀಯ ಕೆಸರೆರೆಚಾಟಕ್ಕೆ ಕಾರಣವಾಗಿದೆ. ತೆರವು ಕಾರ್ಯಾಚರಣೆಯನ್ನು ಕೇರಳ ಸಿಎಂ ಪಿಣರಾಯಿ ವಿಜಯನ್ ಬುಲ್ಡೋಜರ್ ದಾಳಿಗೆ ಹೋಲಿಸಿದ್ದಾರೆ. ಕರ್ನಾಟಕ ಸರ್ಕಾರಕ್ಕೂ ಉತ್ತರ ಪ್ರದೇಶ ಸರ್ಕಾರದ ಗಾಳಿ ಬೀಸಿದೆ. ಅಲ್ಲಿನ ಬುಲ್ಡೋಜರ್ ನೀತಿಯನ್ನು ಇಲ್ಲೂ ತರುವ ಕೆಲಸ ನಡೆಯುತ್ತಿದೆ ಎಂದು ಹೇಳುವ ಮೂಲಕ ಕರ್ನಾಟಕದ ಕಾಂಗ್ರೆಸ್ ಸರ್ಕಾರದ ವಿರುದ್ಧ ಕಿಡಿಕಾರಿದ್ದರು.

ಈ ಮಧ್ಯೆ ಕೇರಳದ ರಾಜ್ಯಸಭಾ ಸದಸ್ಯ ಎ.ಎ. ರಹೀಮ್ ಇಂದು ಕೋಗಿಲೆ ಬಡಾವಣೆಗೆ ಭೇಟಿ ನೀಡಿ, ಮನೆ ಕಳೆದುಕೊಂಡವರ ಅಹವಾಲು ಆಲಿಸಿ, ಸಿದ್ದರಾಮಯ್ಯ ಸರ್ಕಾರದ ನೀತಿಯನ್ನು ಟೀಕಿಸಿದರು.

ಬೆಂಗಳೂರಿನ ಯಲಹಂಕದ ಕೋಗಿಲು ಗ್ರಾಮದ ಫಕೀರ್ ಕಾಲೋನಿ ಮತ್ತು ವಸೀಮ್ ಲೇಔಟ್‌ನಲ್ಲಿರುವ ಮುಸ್ಲಿಂ ವಸತಿಗಳನ್ನು ನೆಲಸಮ ಮಾಡಿರುವುದು ತುಂಬಾ ದುಃಖಕರ ವಿಚಾರ, ಅಲ್ಲಿ ಮುಸ್ಲಿಂ ಕುಟುಂಬಗಳು ಹಲವು ವರ್ಷಗಳಿಂದ ವಾಸಿಸುತ್ತಿದ್ದವು. ಇದೀಗ ಏಕಾಏಕಿ ಈ ಚಳಿಗಾಲದಲ್ಲಿ ಮನೆಗಳನ್ನು ನೆಲಸಮ ಮಾಡಿದರೆ ಅವರು ಎಲ್ಲಿಗೆ ಹೋಗಬೇಕು. ಈ ಚಳಿಯಲ್ಲಿ ಮಕ್ಕಳ, ಮಹಿಳೆಯರನ್ನು ಬೀದಿಗೆ ಹಾಕಿದ್ದಾರೆ ಎಂದು ಕೇರಳ ಮುಖ್ಯಮಂತ್ರಿಗಳು ಸೋಷಿಯಲ್ ಮೀಡಿಯಾ ಮೂಲಕ ಆಕ್ರೋಶ ಹೊರಹಾಕಿದ್ದರು.

ಡಿಕೆಶಿ ತಿರುಗೇಟು: ಕೋಗಿಲು ಬಡಾವಣೆ ಅಕ್ರಮ ಒತ್ತುವರಿ ಸಂಬಂಧ ಕೇರಳ ಸಿಎಂ ಪಿಣರಾಯಿ ವಿಜಯನ್ ಅವರು ಕರ್ನಾಟಕದಲ್ಲಿ ಬುಲ್ಡೋಜರ್ ರಾಜ್ ನಡೆಯುತ್ತಿದೆ ಎಂಬ ಹೇಳಿಕೆಗೆ ತಿರುಗೇಟು ನೀಡಿದ ಡಿಸಿಎಂ ಡಿಕೆ ಶಿವಕುಮಾರ್, ಪಿಣರಾಯಿ ವಿಜಯನ್ ರಂತಹ ಹಿರಿಯ ನಾಯಕರು ಸತ್ಯಾ ಸತ್ಯತೆ ಅರಿಯದೇ ಮಾತನಾಡಿರುವುದು ದುರಾದೃಷ್ಟಕರ. ಬೆಂಗಳೂರಿನ ವಿಚಾರ ಏನು ಎಂದು ಅವರು ತಿಳಿಯಬೇಕು. ಈ ಜಾಗ ಘನತ್ಯಾಜ್ಯ ವಿಲೇವಾರಿ ಮಾಡುವ ಕ್ವಾರಿ ಪಿಟ್ ಆಗಿದೆ. ಘನತ್ಯಾಜ್ಯ ವಿಲೇವಾರಿ ಘಟಕಕ್ಕಾಗಿ 9 ವರ್ಷಗಳ ಹಿಂದೆಯೇ ಅಧಿಸೂಚನೆ ಹೊರಡಿಸಲಾಗಿದೆ. ಬೆಂಗಳೂರು ಬಗ್ಗೆ ಚೆನ್ನಾಗಿ ಗೊತ್ತಿದೆ. ಲ್ಯಾಂಡ್ ಮಾಫಿಯಾದವರು ಸ್ಲಂಗಳನ್ನು ನಿರ್ಮಿಸಲು ನಾವು ಬಿಡುವುದಿಲ್ಲ. ನಾವು ನಮ್ಮ ಭೂಮಿಯನ್ನು ರಕ್ಷಣೆ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದರು.

ಮುಸ್ಲಿಂ ಕುಟುಂಬಗಳಿಗೆ ಬೇರೆಡೆ ಜಾಗ: ಬೆಂಗಳೂರು ಉತ್ತರದ ಕೋಗಿಲು ಲೇಔಟ್ ಬಳಿ ನಡೆದ ಮನೆಗಳ ತೆರವು ಕಾರ್ಯಾಚರಣೆ ಕುರಿತಂತೆ ಕೇರಳ ಸಿಎಂ ಪಿಣರಾಯಿ ವಿಜಯನ್ ಬುಲ್ಡೋಜರ್ ಕಾರ್ಯಾಚರಣೆಗೆ ಹೋಲಿಸಿದ ಬೆನ್ನಲ್ಲೇ ಈ ಬಗ್ಗೆ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ.

ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇರಳ ಸಿಎಂ ಒಬ್ಬ ಕಮ್ಯೂನಿಸ್ಟ್, ಕೋಗಿಲು ಲೇಔಟ್ ನಲ್ಲಿ 2021-22ರಿಂದ ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದರು. ಅವರಿಗೆ ನೋಟಿಸ್ ಕೊಟ್ಟು ತೆರವು ಮಾಡಬೇಕು ಎಂದು ಹೇಳಿದ್ದೆವು. ಆದರೆ ಅಲ್ಲಿ ವಾಸಿಸುತ್ತಿದ್ದವರು ನಮ್ಮ ಮಾತನ್ನು ಕೇಳಲಿಲ್ಲ. ಹೀಗಾಗಿ ತೆರವು ಕಾರ್ಯಾಚರಣೆ ನಡೆಸಿ ಜಾಗವನ್ನು ಖಾಲಿ ಮಾಡಿಸಿದ್ದಾರೆ.

ಈ ಬಗ್ಗೆ ನಾನು ಜಿಬಿಎ ಕಮಿಷನರ್ ಹಾಗೂ ರಾಜ್ಯ ಕಾರ್ಯದರ್ಶಿ ಜೊತೆ ಮಾತನಾಡಿದ್ದೀನಿ. ಮನೆ ಕಳೆದುಕೊಂಡವರಿಗೆ ಪರ್ಯಾಯ ವ್ಯವಸ್ಥೆ ಮಾಡುವಂತೆ ಹೇಳಿದ್ದೇನೆ. ಅವರೆಲ್ಲಾ ವಲಸಿಗರಾದರೂ ಮಾನವೀಯತೆಯ ದೃಷ್ಟಿಯಿಂದ ಅವರಿಗೆ ಬೇರೆ ಕಡೆ ಮನೆ ಕಟ್ಟಿಕೊಳ್ಳಲು ಜಾಗ ಕೊಡುತ್ತೇವೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಕ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
45 (ಕ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	5 ಪ್ರದರ್ಶನಗಳು
ಲಿಡೋ	
ವೃಷಭ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಂತಾರ-2 (ಕ)	4 ಪ್ರದರ್ಶನಗಳು

ರಾಕೇಶ್ ಪಾಪಣ್ಣಗೆ ಹುಟ್ಟುಹಬ್ಬದ ಶುಭ ಹಾರೈಕೆ



ಹುಟ್ಟುಹಬ್ಬ ಆಚರಿಸಿಕೊಂಡ ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಅವರನ್ನು ಧನಗಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ದೊಡ್ಡಹುಂಡಿ ಸೋಮಣ್ಣ, ಗ್ರಾಪಂ ಸದಸ್ಯ ಮೊಟ್ಟೆ ನಾಗಣ್ಣ, ಸಿ.ಚಿಕ್ಕಣ್ಣ, ಬಾಳೆಕಟ್ಟೆ ಸಿ.ನಾಗೇಂದ್ರ ಅಭಿನಂದಿಸಿ, ಶುಭಾಶಯ ಕೋರಿದರು.

ಅಭಿವೃದ್ಧಿ ವಿಷಯದಲ್ಲಿ ಕೇಂದ್ರ ಸರ್ಕಾರವನ್ನು ರಾಜ್ಯ ಸರ್ಕಾರ ಸರಿಯಾಗಿ ಬಳಸಿಕೊಳ್ಳುತ್ತಿಲ್ಲ



ರಾಮನಗರ: ಅಮೃತ ಭಾರತ ನಿಲ್ದಾಣ ಯೋಜನೆ ಅಡಿಯಲ್ಲಿ ಅಂದಾಜು 20.96 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾದ ರಾಮನಗರ ರೈಲು ನಿಲ್ದಾಣದ ಆಧುನೀಕರಣ ಕಾಮಗಾರಿಯನ್ನು ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ಪರಿಶೀಲಿಸಿದರು.

ಸಂಚಾರಿ ಪ್ರದೇಶವನ್ನು ನವೀಕರಿಸುವುದು, ಪಾದಚಾರಿ ಸೇತುವೆ, ಪ್ಲಾಟ್ ಫಾರ್ಮ್ ಶೆಲ್ಟರ್‌ಗಳು ಮತ್ತು ಕಾಯುವ ಕೋಣೆಗಳ ನಿರ್ಮಾಣ, ದ್ವಿಚಕ್ರ ವಾಹನಗಳು ಮತ್ತು ನಾಲ್ಕು ಚಕ್ರಗಳ ವಾಹನಗಳಿಗೆ ಹೆಚ್ಚುವರಿ ಪಾರ್ಕಿಂಗ್ ವಲಯಗಳು, ಮೂರು ಲಿಫ್ಟ್‌ಗಳು ಮತ್ತು ಒಂದು ಎಸ್ಕಲೇಟರ್ ಅಳವಡಿಕೆ ಮತ್ತು ಹೊಸ ಶೌಚಾಲಯಗಳು ಈ ಕಾಮಗಾರಿಯಲ್ಲಿ ಸೇರಿವೆ.

ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಸೋಮಣ್ಣ, ಬೆಂಗಳೂರು ದಕ್ಷಿಣ ಜಿಲ್ಲೆ ಬೆಳವಣಿಗೆಗೆ ಅಪಾರ ಸಾಮರ್ಥ್ಯವನ್ನು ಹೊಂದಿದೆ ಮತ್ತು ಇದನ್ನು ಸಾಧಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವೆ ನಿಕಟ ಸಮನ್ವಯಕ್ಕೆ ಕರೆ ನೀಡಿದರು. ಈ ಪ್ರದೇಶದಲ್ಲಿ MEMU ರೈಲು ಸೇವೆಗಳು ದೈನಂದಿನ ಪ್ರಯಾಣಿಕರಿಗೆ ಪ್ರಯೋಜನಕಾರಿ ಎಂದು ಸಾಬೀತಾಗಿದೆ ಎಂದರು.

ದೇಶಾದ್ಯಂತ ರಸ್ತೆ ಮೇಲ್ಸೇತುವೆಗಳು ಮತ್ತು ರಸ್ತೆ ಕೆಳ ಸೇತುವೆಗಳ ವೆಚ್ಚವನ್ನು ಕೇಂದ್ರವು ಭರಿಸಲಿದೆ. ದೇಶಾದ್ಯಂತ ಸುಮಾರು ಶೇ. 98ರಷ್ಟು ಟ್ರ್ಯಾಕ್ ವಿದ್ಯುದ್ದೀಕರಣ ಕಾರ್ಯ ಪೂರ್ಣಗೊಂಡಿದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ಉತ್ತಮವಾಗಿ ಪ್ರಗತಿಯಲ್ಲಿದೆ ಎಂದರು, ನಂತರ ಅವರು ಬಿಡದಿ ರೈಲು ನಿಲ್ದಾಣವನ್ನು ಸಹ ಪರಿಶೀಲಿಸಿದರು. ರೈಲ್ವೆ ಜಾಲದ ಮೂಲಕ ವಾಹನಗಳ ಸಾಗಣೆಯನ್ನು ನಿರ್ಣಯಿಸಲು ಅವರು ಟೊಯೋಟಾ ಉತ್ಪಾದನಾ ಘಟಕಕ್ಕೂ ಭೇಟಿ ನೀಡಿದರು.

ನಾನು ಈ ಹಿಂದೆಯೇ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ, ಚೀಫ್ ಸೆಕ್ರೆಟರಿ ಎಲ್ಲರಿಗೂ ಹೇಳಿದ್ದೇನೆ. ಯಾರೂ ಕೂಡಾ ನಮ್ಮ ಮನವಿಗೆ ಸ್ಪಂದಿಸುತ್ತಿಲ್ಲ. ಕೇಂದ್ರ ಸರ್ಕಾರವನ್ನು ಸರಿಯಾಗಿ ರಾಜ್ಯ ಸರ್ಕಾರ ಬಳಸಿಕೊಳ್ಳುತ್ತಿಲ್ಲ. ದಿನ ಬೆಳಾಗದರೆ ಕೇಂದ್ರ ಸರ್ಕಾರವನ್ನು ಟೀಕಿಸುವುದೆ ರಾಜ್ಯ ಸರ್ಕಾರದ ಕೆಲಸವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸ್ಫೋಟಕ ವಸ್ತುಗಳ ಬಳಕೆ ನಿಷೇಧಿಸಿ

ಪಾಲಿಕೆ ಮಾಜಿ ಸದಸ್ಯ ಕೆ.ವಿ. ಮಲ್ಲೇಶ್ ಆಗ್ರಹ



ಮೈಸೂರು, ಡಿ. 27– ಮೈಸೂರು ನಗರದ ಐತಿಹಾಸಿಕ ಪ್ರವಾಸಿ ತಾಣವಾದ ಅಂಬಾವಿಲಾಸ ಅರಮನೆ ಮುಂಭಾಗ ಬಲೂನ್‌ಗೆ ಹೀಲಿಯಂ ತುಂಬುವ ಸಿಲಿಂಡರ್ ಸ್ಫೋಟ ಪ್ರಕರಣ ಅತ್ಯಂತ ಗಂಭೀರವಾಗಿದ್ದು, ಸರಕಾರ ತಕ್ಷಣವೇ ಸಾರ್ವಜನಿಕ, ಪ್ರವಾಸಿ ತಾಣಗಳಲ್ಲಿ ಇಂತಹ ಸ್ಫೋಟಕ ವಸ್ತುಗಳ ಬಳಕೆಯನ್ನು ನಿಷೇಧಿಸಬೇಕು ಎಂದು ನಗರ ಪಾಲಿಕೆ ಮಾಜಿ ಸದಸ್ಯ ಹಾಗೂ ಅನಿಕೇತನ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ. ಮಲ್ಲೇಶ್ ಸ್ಥಳೀಯ ಆಡಳಿತವನ್ನು ಆಗ್ರಹಿಸಿದ್ದಾರೆ.

ಮೈಸೂರು ನಗರ ಪ್ರವಾಸಿಗರ ನೆಚ್ಚಿನ ತಾಣವಾಗಿದೆ. ಅದರಲ್ಲೂ ಅಂಬಾವಿಲಾಸ ಅರಮನೆ ನೋಡಲು ದೇಶ-ವಿದೇಶಗಳಿಂದ ಲಕ್ಷಾಂತರ ಜನ ಆಗಮಿಸುತ್ತಾರೆ. ಅಂತಹ ಅರಮನೆ ಮುಂಭಾಗವೇ ಈ ದುರಂತ ನಡೆದಿರುವುದು ವಿಪರ್ಯಾಸ. ವರ್ಷಾಂತ್ಯದಲ್ಲಿ ಮೈಸೂರು ಅರಮನೆಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಿರುತ್ತದೆ. ಜೊತೆಗೆ ಅರಮನೆ ಆವರಣದಲ್ಲಿ ಮಾಗಿ ಉತ್ಸವ ನಡೆಯುತ್ತಿದೆ. ಇಂತಹ ಹೊತ್ತಿನಲ್ಲಿ ಈ ರೀತಿಯ ಅವಘಡ ಸಂಭವಿಸಿದೆ. ಇದು ಅನಿರೀಕ್ಷಿತ, ಇದಕ್ಕೆ ಯಾರನ್ನೂ ದೂಷಿಸುವುದಿಲ್ಲ. ಆದರೆ, ಮುಂದಿನ ದಿನಗಳಲ್ಲಿ ಇಂತಹ ಅವಘಡಗಳ ಬಗ್ಗೆ ಎಚ್ಚರ ವಹಿಸಬೇಕಿದೆ. ಈ ಬಗ್ಗೆ ರಾಜ್ಯ ಸರಕಾರ ತುರ್ತು ಗಮನಹರಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ, ಪ್ರವಾಸಿ ತಾಣಗಳಲ್ಲಿ ಇಂತಹ ಸ್ಫೋಟಕಗಳ ಬಳಕೆಯನ್ನು ನಿಷೇಧಿಸಬೇಕು.

ಪ್ರವಾಸಿ ತಾಣಗಳಲ್ಲಿ ಎಚ್ಚರ : ನಗರದ ಪ್ರವಾಸಿ ತಾಣಗಳಲ್ಲಿ ಹೆಚ್ಚೆಚ್ಚು ತಪಾಸಣೆ ನಡೆಸಿ ವ್ಯಾಪಾರ ಸ್ಥಳದಲ್ಲಿನ ಸ್ಫೋಟಕಗಳ ಬಳಕೆಯನ್ನು ತಕ್ಷಣ ನಿಷೇಧಿಸಬೇಕಿದೆ. ಪ್ರವಾಸಿಗರ ರಕ್ಷಣೆಗೆ ಹೆಚ್ಚು ಆದ್ಯತೆ ನೀಡದಿದ್ದರೆ ನಗರಕ್ಕೆ ಆಗಮಿಸುವ ಪ್ರವಾಸಿಗರ ಸಂಖ್ಯೆ ಕುಸಿಯುವ ಆತಂಕವಿದೆ.

ಅಸಂಘಟಿತ ವ್ಯಾಪಾರಿಗಳಿಗೆ ಸೌಲಭ್ಯ: ನಗರ ಬೆಳೆದಂತೆಲ್ಲ ಅಸಂಘಟಿತ ವಲಯದ ವ್ಯಾಪಾರಿಗಳ ಸಂಖ್ಯೆ ದಿನೇ ದಿನೆ ಹೆಚ್ಚುತ್ತಿದೆ. ಇಂತಹ ವ್ಯಾಪಾರಿಗಳಿಗೆ ಪ್ರತ್ಯೇಕ ವಲಯ ನಿರ್ಮಿಸಬೇಕಿದೆ ದೂರದ ಊರುಗಳಿಂದ, ರಾಜ್ಯಗಳಿಂದ ನಗರಕ್ಕೆ ಆಗಮಿಸುವ ವ್ಯಾಪಾರಿಗಳ ನೋಂದಣಿ, ಅವರಿಗೆ ಸ್ಥಳ ನಿಗದಿಯಂತಹ ಕೆಲಸವನ್ನು ಸ್ಥಳೀಯಾಡಳಿತ ಮಾಡಬೇಕಿದೆ.

ನಗರದ ಭದ್ರತೆ ದೃಷ್ಟಿಯಿಂದ ಸಂಘ-ಸಂಸ್ಥೆಗಳು, ಸಾರ್ವಜನಿಕರೂ ಕೂಡ ಆಡಳಿತದ ಜತೆಗೆ ಕೈಜೋಡಿಸಬೇಕು. ಸೂಕ್ತ ಮಾಹಿತಿ ನೀಡುವ ಜತೆಗೆ ನಗರದ ಭದ್ರತೆಗೆ ಸಹಕರಿಸಬೇಕು ಎಂದು ತಿಳಿಸಿದ್ದಾರೆ.

ಅಚ್ಚರಿ ಮೂಡಿಸಿರುವ ಸುರ್ಜೇವಾಲ ಮೌನ!



ಬೆಂಗಳೂರು: ರಾಜ್ಯದಲ್ಲಿನ ಸಣ್ಣಪುಟ್ಟ ವಿಷಯಗಳಿಗೂ ಪ್ರತ್ಯಕ್ಷವಾಗುತ್ತಿದ್ದ ಹಾಗೂ ಸರಣಿ ಸಭೆ ನಡೆಸಿ ಸ್ವತಃ ಶಾಸಕರು, ಸಚಿವರ ಅಹವಾಲುಗಳನ್ನು ಆಲಿಸುತ್ತಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ನಾಯಕತ್ವ ಬಿಕ್ಕಟ್ಟಿನಂತಹ ಮಹತ್ವದ ಬೆಳವಣಿಗೆಗಳು ನಡೆಯುತ್ತಿದ್ದರೂ, ಮೌನಕ್ಕೆ ಜಾರಿರುವುದು ತೀವ್ರ ಚರ್ಚೆಗೆ ಕಾರಣವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನಡುವಿನ ಅಧಿಕಾರ ಸಮತೋಲನ ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಸುರ್ಜೇವಾಲ ಅವರು, ಸ್ವಯಂಪ್ರೇರಿತವಾಗಿ ಈ ವಿಚಾರದಲ್ಲಿ ಮೌನ ತಾಳಲು ನಿರ್ಧಾರ ಕೈಗೊಂಡಿದ್ದಾರೆಂದು ಮೂಲಗಳು ತಿಳಿಸಿವೆ.

ನಾಯಕತ್ವ ವಿಚಾರ ಸಂಬಂಧ ಸುರ್ಜೇವಾಲ ಅವರು ಈಗಾಗಲೇ ಹೈಕಮಾಂಡ್‌ಗೆ 2 ಬಾರಿ ಪತ್ರ ಬರೆದಿದ್ದರು. ಆದರೆ, ಇದಕ್ಕೆ ಯಾವುದೇ ಪ್ರತಿಕ್ರಿಯೆ ಬಾರದ ಕಾರಣ ಹಾಗೂ ತಮ್ಮ ಪ್ರಭಾವ ಕುಗ್ಗುತ್ತಿರುವ ಸೂಚನೆ ದೊರೆತ ಹಿನ್ನೆಲೆಯಲ್ಲಿ ರಾಜ್ಯ ರಾಜಕೀಯ ವಿಚಾರದಿಂದ ದೂರ ಸರಿದಿದ್ದಾರೆಂದು ಮೂಲಗಳು ತಿಳಿಸಿವೆ.

ಈ ನಡುವೆ ಇತ್ತೀಚೆಗೆ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಭೆಯಲ್ಲೂ ಸುರ್ಜೇವಾಲ ಅವರು ಭಾಗಿಯಾಗದಿರುವುದು ಈ ಚರ್ಚೆಗಳಿಗೆ ಇಂಬು ನೀಡುತ್ತಿವೆ.

ಸಭೆಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಕೂಡ ಸುರ್ಜೇವಾಲ ಬಗ್ಗೆ ಯಾವುದೇ ತಲೆ ಕೆಡಿಸಿಕೊಳ್ಳದೆ ಕೆ.ಸಿ. ವೇಣುಗೋಪಾಲ್ ಅವರ ಮೇಲೆಯೇ ಹೆಚ್ಚು ಅವಲಂಬಿತವಾಗಿರುವುದು ಕಂಡುಬಂದಿತ್ತು ವೇಣುಗೋಪಾಲ್ ಅವರು ಈ ಹಿಂದೆ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ವಹಿಸಿದ್ದರು.


ಸುರ್ಜೇವಾಲ ಅವರ ಆಪ್ತ ಮೂಲಗಳು ನೀಡಿರುವ ಮಾಹಿತಿ ಪ್ರಕಾರ, ಕರ್ನಾಟಕದಲ್ಲಿ ಕಾಂಗ್ರೆಸ್ ಈಗಾಗಲೇ ಅಧಿಕಾರದಲ್ಲಿದ್ದು, ಉತ್ತಮ ಸ್ಥಿತಿಯಲ್ಲಿರುವ ಹಿನ್ನೆಲೆಯಲ್ಲಿ, ಅವರು ಜಾರ್ಖಂಡ್‌ನಂತಹ ಇತರೆ ರಾಜ್ಯಗಳತ್ತ ಹೆಚ್ಚಿನ ಗಮನ ಹರಿಸಲು ಆಸಕ್ತಿ ವ್ಯಕ್ತಪಡಿಸಿದ್ದಾರೆಂದು ತಿಳಿದುಬಂದಿದೆ.

ಹಿರಿಯ ಕಾಂಗ್ರೆಸ್ ಶಾಸಕರೊಬ್ಬರು ಮಾತನಾಡಿ, ರಾಜ್ಯದಲ್ಲಿ ನಾಯಕತ್ವದ ಗೊಂದಲ ತೀವ್ರವಾಗಿದ್ದು, ಈ ವಿಚಾರದಲ್ಲಿ ಸುರ್ಜೇವಾಲ ಅವರು ಸಂಪೂರ್ಣ ಸ್ವಯಂ ಇಚ್ಛೆಯಿಂದ ದೂರ ಉಳಿದಿದ್ದಾರೆ ಎಂದು ತಿಳಿಸಿದ್ದಾರೆ.

ಆದರೆ, ಸಿದ್ದು ಆಪ್ತರು ಸುರ್ಜೇವಾಲ ಅವರು ಪಕ್ಷಪಾತ ಮಾಡುತ್ತಿದ್ದಾರೆಂದು ಹೈಕಮಾಂಡ್‌ಗೆ ದೂರು ನೀಡಿರುವ ಹಿನ್ನೆಲೆಯಲ್ಲಿ ಹೈಕಮಾಂಡ್ ಸುರ್ಜೇವಾಲ ಅವರನ್ನು ಸೈಡ್ ಲೈನ್ ಮಾಡಿದೆ ಎಂಬ ಮಾತುಗಳು ಕೇಳಿ ಬರುತ್ತಿದೆ.

ಈ ಬೆಳವಣಿಗೆ ಹಿನ್ನೆಲೆಯಲ್ಲಿ ಅವರು ಅಸಮಾಧಾನಗೊಂಡಿದ್ದು, ಸ್ವಯಂ ಪ್ರೇರಿತರಾಗಿ ರಾಜ್ಯ ರಾಜಕೀಯ ವಿಚಾರದಿಂದ ದೂರ ಸರಿಯಲು ನಿರ್ಧರಿಸಿದ್ದಾರೆಂದು ಹೇಳಲಾಗುತ್ತಿದೆ.

ಬಿಜೆಪಿ-ಆರ್‌ಎಸ್‌ಎಸ್ ಬಹಿರಂಗವಾಗಿ ಹೊಗಳಿದ ಸಂಸದ ದಿಗ್ವಿಜಯ್ ಸಿಂಗ್



ನವದೆಹಲಿ: ಕಾಂಗ್ರೆಸ್‌ನ ಹಿರಿಯ ನಾಯಕ ಮತ್ತು ರಾಜ್ಯಸಭಾ ಸಂಸದ ದಿಗ್ವಿಜಯ ಸಿಂಗ್ ಅವರು ಬಹಿರಂಗವಾಗಿ ಬಿಜೆಪಿ ಹಾಗೂ ಅದರ ಮಾರ್ಗದರ್ಶಕ ಸಂಸ್ಥೆಯಾದ ಆರ್‌ಎಸ್‌ಎಸ್ ಹೊಗಳಿರುವುದು ಇದೀಗ ರಾಜಕೀಯ ವಿವಾದಕ್ಕೆ ಕಾರಣವಾಗಿದೆ.

ಪಕ್ಷದಲ್ಲಿನ ಆಂತರಿಕ ಸುಧಾರಣೆಗಳ ಅಗತ್ಯವನ್ನು ರಾಹುಲ್ ಗಾಂಧಿಗೆ ಸೂಚಿಸಿದ ಒಂದು ವಾರದ ನಂತರ ಈ ಹೇಳಿಕೆ ನೀಡುವ ಮೂಲಕ ದಿಗ್ವಿಜಯ ಸಿಂಗ್ ಹೊಸ ವಿವಾದವನ್ನು ಹುಟ್ಟುಹಾಕಿದ್ದಾರೆ.

1990ರ ದಶಕದ ಪ್ರಧಾನಿ ನರೇಂದ್ರ ಮೋದಿಯವರ ಬ್ಲ್ಯಾಕ್ ಅಂಡ್ ವೈಟ್ ಫೋಟೋವನ್ನು ಶನಿವಾರ ಬೆಳಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡ ಅವರು, ವಿವಿಧ ವಿಷಯಗಳ ಕುರಿತು ಕಾಂಗ್ರೆಸ್ ಅನ್ನು ಗುರಿಯಾಗಿಸಿ, ಬಿಜೆಪಿ ಮತ್ತು ಅದರ ಸೈದ್ಧಾಂತಿಕ ಪೋಷಕ ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಹೊಗಳಿದ್ದಾರೆ.

ಗುಜರಾತ್‌ನಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಬಿಜೆಪಿ ಹಿರಿಯ ಎಲ್.ಕೆ. ಅಡ್ವಾಣಿ ಅವರ ಬಳಿಯುವ ನರೇಂದ್ರ ಮೋದಿ ಅವರು ನೆಲದ ಮೇಲೆ ಕುಳಿತಿರುವುದನ್ನು ತೋರಿಸುವ ಸ್ಕ್ರೀನ್‌ಶಾಟ್ ಅನ್ನು ಆನ್‌ಲೈನ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಡ್ವಾಣಿ ಬಳಿ ನೆಲದ ಮೇಲೆ ಕುಳಿತಿರುವ ಮೋದಿ ಅವರನ್ನು ಉಲ್ಲೇಖಿಸಿ, ಒಮ್ಮೆ ನೆಲದ ಮೇಲೆ ಕುಳಿತಿದ್ದ ತಳಮಟ್ಟದ ಕಾರ್ಯಕರ್ತರು ಸಂಘ-ಬಿಜೆಪಿ ಪರಿಸರ ವ್ಯವಸ್ಥೆಯೊಳಗೆ ಹೇಗೆ ಬೆಳೆದು ಮುಖ್ಯಮಂತ್ರಿ ಮತ್ತು ಪ್ರಧಾನಿಯಾಗಬಹುದು ಎಂಬುದನ್ನು ಶ್ಲಾಘಿಸಿದ್ದಾರೆ. ಕೊನೆಯಲ್ಲಿ ಜೈ ಶಿಯಾ ರಾಮ್ ಎಂದು ಪೋಸ್ಟ್ ಮಾಡಿದ್ದರು.

ಈ ಹೇಳಿಕೆಗೆ ಬಿಜೆಪಿ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದು, ಈ ಪೋಸ್ಟ್ ಅನ್ನು ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿ ಬಳಸಿಕೊಂಡಿದೆ. ಸಿಂಗ್ ಅವರ ಟ್ವೀಟ್ ಕಾಂಗ್ರೆಸ್‌ನ ನಿರಂಕುಶ ಮತ್ತು ಪ್ರಜಾಪ್ರಭುತ್ವ ವಿರೋಧಿ" ಆಂತರಿಕ ಕಾರ್ಯಚಟುವಟಿಕೆಯನ್ನು ಬಹಿರಂಗಪಡಿಸುವ ಸತ್ಯದ ಬಾಂಬ್ ಎಂದು ಬಿಜೆಪಿ ವಕ್ತಾರ ಸಿ.ಆರ್. ಕೇಶವನ್ ಹೇಳಿದ್ದಾರೆ. ರಾಹುಲ್ ಗಾಂಧಿ ಧೈರ್ಯ ತೋರಿಸುತ್ತಾರೆಯೇ ಮತ್ತು ಈ ಆಘಾತಕಾರಿ ಸತ್ಯ ಬಾಂಬ್‌ಗೆ ಪ್ರತಿಕ್ರಿಯಿಸುತ್ತಾರೆಯೇ ಎಂದು ಕೇಶವನ್ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರಶ್ನಿಸಿದ್ದಾರೆ.

ಸಿಂಗ್ ಅವರ ಪೋಸ್ಟ್ ಕಾಂಗ್ರೆಸ್ ವಲಯದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದೆ. ಪಕ್ಷದ ಹೈಕಮಾಂಡ್‌ಗೆ ಸಂದೇಶದ ರೀತಿಯಲ್ಲಿ ನೋಡಲಾಗುತ್ತಿದೆ. ಅವರು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರಲ್ಲದೇ ಅಧಿಕೃತ ಕಾಂಗ್ರೆಸ್ ಎಕ್ಸ್ ಹ್ಯಾಂಡಲ್ ಅನ್ನು ಟ್ಯಾಗ್ ಮಾಡಿದ್ದಾರೆ. ಪಕ್ಷದ ಸುಧಾರಣೆಯನ್ನು ಒತ್ತಿ ಹೇಳಲು ಈ ರೀತಿಯ ಪೋಸ್ಟ್ ಮಾಡಿದ್ದಾರೆ ಎನ್ನಲಾಗುತ್ತಿದೆ.

ಡಿಸೆಂಬರ್ 19 ರಂದು ಪಕ್ಷದೊಳಗೆ ಸುಧಾರಣೆ ಕುರಿತು ರಾಹುಲ್ ಗಾಂಧಿಯನ್ನು ಒತ್ತಾಯಿಸುವ ಪೋಸ್ಟ್ ಒಂದನ್ನು ಮಾಡಿದ್ದರು. ಆಂತರಿಕ ಬದಲಾವಣೆಗಳ ಬಗ್ಗೆ ರಾಹುಲ್ ಗಾಂಧಿಗೆ ಮನವರಿಕೆ ಮಾಡುವುದು ಅಷ್ಟು ಸುಲಭವಲ್ಲ ಎಂದು ಹೇಳಿದ್ದರು. ಕಾಂಗ್ರೆಸ್ ಪ್ರಜಾಪ್ರಭುತ್ವವನ್ನು ಬಾಹ್ಯವಾಗಿ ಬೋಧಿಸುತ್ತದೆ. ಆದರೆ ಆಂತರಿಕವಾಗಿ ಅದನ್ನು ಅನುಸರಿಸುವಲ್ಲಿ ವಿಫಲವಾಗಿದೆ ಎಂದು ಬಿಜೆಪಿಯ ಟೀಕೆಗಳನ್ನು ದಿಗ್ವಿಜಯ್ ಸಿಂಗ್ ಉಲ್ಲೇಖಿಸಿದ್ದರು.

ಮತ್ತೊಬ್ಬ ಬಿಜೆಪಿ ವಕ್ತಾರ ಪ್ರದೀಪ್ ಭಂಡಾರಿ, ಸಿಂಗ್ ಅವರ ಪೋಸ್ಟ್ ಬಹಿರಂಗ ಭಿನ್ನಾಭಿಪ್ರಾಯಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದ್ದಾರೆ.

ಶುಭ ಹಾರೈಕೆ



ಹಿನಕಲ್ ಗ್ರಾಪಂ ಮಾಜಿ ಉಪಾಧ್ಯಕ್ಷ ಹೊನ್ನಪ್ಪ, ಗ್ರಾಪಂ ಮಾಜಿ ಸದಸ್ಯರಾದ ಶ್ರೀನಿವಾಸ್, ಚಂದ್ರಶೇಖರ್, ಮಲ್ಲೇಶ್ ಹಾಗೂ ಕೀರ್ತಿ, ನರಸಿಂಹ ಅವರು ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಜನಪದ ಕಲೆಯಲ್ಲಿ ಕರ್ನಾಟಕ ಶ್ರೀಮಂತ ರಾಜ್ಯ

ವಿಚಾರ ಸಂಕಿರಣದಲ್ಲಿ ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಅಭಿಮತ



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಆಯೋಜಿಸಿದ್ದ 'ಶರಣೆಂದೆ ಭೂಮಿ ತಾಯಿಗೆ' ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಂಡು ಮೆರಗು ನೀಡಿದವು.

ಮೈಸೂರು,ಡಿ.27(ಎಂಟಿವೈ)– ಕರ್ನಾಟಕ ಜನಪದ ಕಲೆಯಲ್ಲಿ ಇತರೆ ರಾಜ್ಯಗಳಿಗಿಂತ ದೇಶದಲ್ಲೇ ಅತೀ ಶ್ರೀಮಂತ ರಾಜ್ಯ ಎನಿಸಿದೆ ಎಂದು ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಆಯೋಜಿಸಿದ್ದ 'ಶರಣೆಂದೆ ಭೂಮಿ ತಾಯಿಗೆ' ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಜನಪದ ಕಲೆ ಹಾಗೂ ಅಕಾಡೆಮಿಯನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳುವುದರೊಂದಿಗೆ ಅದಕ್ಕೆ ಬೇಕಾದ ಅನುದಾನ ನೀಡಬೇಕು. ಇತ್ತೀಚಿನ ದಿನಗಳಲ್ಲಿ ಆಕಾಡೆಮಿಗೆ ಅಗತ್ಯ ಪ್ರಮಾಣದ ಅನುದಾನ ಸಿಗದ ಕಾರಣ ಜಾನಪದ ಕಲೆಗಳ ಸಂರಕ್ಷಣೆಗೆ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬ ಮಾತು ಕೇಳಿ ಬರುತ್ತಿವೆ. ಜಾನಪದದಲ್ಲಿ ಯಾವುದೇ ಪ್ರಕಾರವನ್ನು ಸಂಗ್ರಹಿಸಿದರೂ ಅದನ್ನು ಪ್ರಕಟಿಸುವ ಧೈರ್ಯ ಅಕಾಡೆಮಿಗೆ ಬರಬೇಕು. ಇಲ್ಲದಿದ್ದರೆ ಅಕಾಡೆಮಿಯು ಇದ್ದೂ ನಿಷ್ಪ್ರಯೋಜಕವಾಗುತ್ತದೆ ಎಂದರು.


ಜಾನಪದ ಕ್ಷೇತ್ರದಲ್ಲಿ ಇನ್ನಷ್ಟು ಕೆಲಸ ಮಾಡಬೇಕು. ಗಾದೆ, ಒಗಟು, ಕಥೆ, ಐತಿಹ್ಯಗಳು, ಪುರಾಣ, ಅಡುಗೆ, ಉಡುಗೆ, ವ್ಯವಸಾಯ ಸೇರಿದಂತೆ ಪ್ರತಿಯೊಂದು ವಿಚಾರದಲ್ಲೂ ವೈಶಿಷ್ಟ್ಯ ಇದೆ. ನಮ್ಮಲ್ಲಿ 18 ಕುಲಕಸುಬುಗಳಿದ್ದು, ಅವೆಲ್ಲವೂ ಗ್ರಾಮೀಣ ಪ್ರದೇಶದಲ್ಲಿದೆ. ಇದನ್ನೆಲ್ಲ ಶಾಸ್ತ್ರೀಯವಾಗಿ ಸಂಗ್ರಹಿಸಿ, ಸಂಪಾದಿಸಬೇಕು. ಅಲ್ಲದೆ, ಅವುಗಳನ್ನು ಪ್ರಕಟಿಸುವ ಅಗತ್ಯವಿದೆ. ಇಂದು ಜಾನಪದದ ವ್ಯಾಪ್ತಿ ಎಲ್ಲರಿಗೂ ತಿಳಿದಿದೆ. ಆದರೆ ವ್ಯಾಪಕವಾದ ಕ್ಷೇತ್ರ ಕಾರ್ಯ ಹೆಚ್ಚು ಪರಿಣಾಮಕಾರಿಯಾಗಿ ನಡೆಯಬೇಕು. ಮೊದಲಿನಂತೆ ವಿದ್ಯಾರ್ಥಿಗಳನ್ನು ಪ್ರಚೋದಿಸಿ ಕ್ಷೇತ್ರಕಾರ್ಯ ಮಾಡುವಂತಹ ಮೇಷ್ಟ್ರುಗಳು ಕಡಿಮೆಯಾಗಿದ್ದಾರೆ ಎಂದು ಅವರು ವಿಷಾದಿಸಿದರು.

ಈ ಹಿಂದೆ ಸಿಪಿಕೆ ಅವರು ಪಾಠ ಮಾಡುವಾಗ ಫಿನ್ಲೆಂಡಿನ ಕಲೆವಾಲ ಎನ್ನುವ ಕೃತಿ ಕುರಿತು ಮಾತನಾಡುವಾಗ ಫಿನ್ಲೆಂಡಿನ ಸಣ್ಣ ರಾಜ್ಯದಲ್ಲಿ ಕಲೆವಾಲ ಎಂಬ ಮಹಾಕಾವ್ಯ ಸಿಕ್ಕಿದ್ದು, ಅದು 20 ಸಾವಿರ ಸಾಲುಗಳ ದೀರ್ಘವಾದ ಕಾವ್ಯ ಎಂದು ಸಿಪಿಕೆ ಅವರು ಹೇಳಿದರು. ಆ ಮಾದರಿಯ ಮಹಾಕಾವ್ಯದ ಬಗ್ಗೆ ಶೋಧನೆ ಮಾಡಿದರೆ ನಮ್ಮಲ್ಲೂ ಸಿಗಬಹುದು ಎಂದು ತಿಳಿಸಿದರು.

ಮಂಟೆಸ್ವಾಮಿ, ಮಹದೇಶ್ವರ, ಮಹಾಭಾರತ, ರಾಮಾಯಣ, ಗುಂಜಪ್ಪ, ಯಲ್ಲಮ್ಮ ದೇವಿ ಸೇರಿದಂತೆ 10ಕ್ಕೂ ಹೆಚ್ಚು ಜನಪದ ಮಹಾಕಾವ್ಯಗಳು ನಮ್ಮಲ್ಲಿ ಪ್ರಕಟವಾಗಿವೆ ಎಂಬ ಹೆಮ್ಮೆ ನಮ್ಮದು ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಜಾನಪದ ಆಕಾಡೆಮಿಯ ಅಧ್ಯಕ್ಷ ಡಾ.ಗೊಲ್ಲಹಳ್ಳಿ ಶಿವಪ್ರಸಾದ್, ಅಕಾಡೆಮಿಯ ಕುಲಸಚಿವೆ ಎನ್.ನಮ್ರತ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಮುನಿರಾಜು, ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯರಾದ ಮೈಸೂರು ಉಮೇಶ್, ದೇವಾನಂದ ವರಪ್ರಸಾದ್, ಸಂಚಾಲಕ ಮೈಸೂರು ಜಿ.ಗುರುರಾಜ್ ಉಪಸ್ಥಿತರಿದ್ದರು.

ಮೈಸೂರಿಗೆ ಮುಂದುವರೆದ ಪ್ರವಾಸಿಗರ ಜಾತ್ರೆ; ಎಲ್ಲೆಡೆ ವಾಹನ-ಜನ ದಟ್ಟಣೆ



ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಶನಿವಾರ ಸಂಜೆ ವಾಹನ ದಟ್ಟಣೆ ವ್ಯಾಪಕವಾಗಿತ್ತು.

ಮೈಸೂರು,ಡಿ.27(ಪಿಎಂ)– ಕ್ರಿಸ್‌ಮಸ್ ಹಾಗೂ ವರ್ಷಾಂತ್ಯದ ರಜೆ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿಗೆ ಪ್ರವಾಸಿಗರು ಲಗ್ಗೆ ಇಟ್ಟಿದ್ದು, ಶನಿವಾರವೂ ನಗರದ ಹೃದಯಭಾಗದಲ್ಲಿ ವಾಹನ ಹಾಗೂ ಜನದಟ್ಟಣೆ ಮುಂದುವರೆದಿತ್ತು.

ಮೈಸೂರು ಅರಮನೆ, ಹಾರ್ಡಿಂಜ್ ವೃತ್ತ, ಕೆಆರ್ ವೃತ್ತದ ಸುತ್ತಮುತ್ತ ವಾಹನ ದಟ್ಟಣೆ ಮಧ್ಯಾಹ್ನದ ವೇಳೆಯಂತೂ ವ್ಯಾಪಕವಾಗಿತ್ತು. ವಾಹನಗಳು ನಿಧಾನವಾಗಿ ಸಾಗುವ ಸನ್ನಿವೇಶ ನಿರ್ಮಾಣವಾಗಿತ್ತು. ಮೈಸೂರು ಅರಮನೆಗೂ ಪ್ರವಾಸಿಗರು ಭಾರೀ ಸಂಖ್ಯೆಯಲ್ಲಿ ಲಗ್ಗೆ ಇಟ್ಟಿದ್ದರು. ಅರಮನೆ ವೀಕ್ಷಣೆ ಜೊತೆಗೆ ಇಲ್ಲಿನ ಫಲ-ಪುಷ್ಪ ಪ್ರದರ್ಶನ ವೀಕ್ಷಿಸಿ ಸಂಭ್ರಮಿಸಿದರು. ನಿನ್ನೆಯಂತೆಯೇ ಇಂದು ಸಹ ಚಾಮುಂಡಿಬೆಟ್ಟಕ್ಕೂ ಹೆಚ್ಚಿನ ಭಕ್ತಾದಿಗಳು, ಪ್ರವಾಸಿಗರು ಭೇಟಿ ನೀಡಿ ತಾಯಿ ಚಾಮುಂಡೇಶ್ವರಿ ದರ್ಶನದೊಂದಿಗೆ ಬೆಟ್ಟದ ಪ್ರಾಕೃತಿಕ ಸೌಂದರ್ಯ ಕಣ್ತುಂಬಿಕೊಂಡರು.

ಮೈಸೂರು ಅರಮನೆ, ಮೃಗಾಲಯ, ದಸರಾ ವಸ್ತು ಪ್ರದರ್ಶನ ಸೇರಿದಂತೆ ನಗರದ ಪ್ರವಾಸಿ ತಾಣಗಳಲ್ಲಿ ಭಾರೀ ಜನದಟ್ಟಣೆ ಇದ್ದಿತು. ಇದೇ ರೀತಿಯ ದಟ್ಟಣೆ ಭಾನುವಾರವಾದ ನಾಳೆಯೂ ಮುಂದುವರೆಯಲಿದೆ. ಪ್ರವಾಸಿಗರು, ಸ್ಥಳೀಯರು ಹಾಗೂ ನೆರೆ ಜಿಲ್ಲೆಯವರು ಮೈಸೂರು ನಗರದ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ್ದ ಹಿನ್ನೆಲೆಯಲ್ಲಿ ಇಂದು ಕೆಆರ್ ವೃತ್ತ ಸೇರಿದಂತೆ ನಗರದ ಪ್ರಮುಖ ವೃತ್ತ ಹಾಗೂ ರಸ್ತೆಗಳಲ್ಲಿಯೂ ವಾಹನ ದಟ್ಟಣೆ ಇದ್ದಿತು. ವಾಹನ ನಿಲುಗಡೆ ಸ್ಥಳಗಳಲ್ಲಿಯೂ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದವು.

ಹೊಸ ವರ್ಷ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಇನ್ನೂ ಮೂರ್‍ನಾಲ್ಕು ದಿನಗಳು ಮೈಸೂರಿನಲ್ಲಿ ಪ್ರವಾಸಿಗರ ದಿಬ್ಬಣ ಮುಂದುವರೆಯಲಿದೆ. ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ (ಮೈಸೂರು-ಬೆಂಗಳೂರು ಹೆದ್ದಾರಿ) ಭಾರೀ ಸಂಖ್ಯೆಯಲ್ಲಿ ವಾಹನಗಳು ಎರಡೂ ಪಥದಲ್ಲಿ ಸಂಚರಿಸುತ್ತಿರುವುದು ಇಂದು ಕಂಡುಬಂದಿತು.



ಮೈಸೂರು ಮೃಗಾಲಯ ಆವರಣ ಶನಿವಾರ ಜನರಿಂದ ಕಿಕ್ಕಿರಿದಿತ್ತು.

ನೋಂದಣಿ ಸಂಖ್ಯೆ : ಎಂವೈಇ–4–00254–2023–24 ದೂ: (ಕಛೇರಿ) 0821-4262418

ಶ್ರೀರಾಮ ಮಂದಿರ

ನಯನಜ ಕ್ಷತ್ರಿಯ ಕನ್ನಡಿಗರ ಟ್ರಸ್ಟ್ (ರಿ.)
ವಾದ್ಯ ಸಂಗೀತ ಪಾಠಶಾಲೆ
ನಂ. 778/ಬಿ, ಎಲ್–3, 778ಎಲ್–2/2, ಕುಂಬಾರಗೇರಿ, ಲಷ್ಕರ್ ಮೊಹಲ್ಲಾ, ಮೈಸೂರು

ಪ್ರತಿಭಾ ಪುರಸ್ಕಾರ
ಪ್ರತಿವರ್ಷದಂತೆ ಈ ವರ್ಷವು ಕೂಡ ನಮ್ಮ ಮೇಲ್ಕಂಡ ಟ್ರಸ್ಟ್ ವತಿಯಿಂದ 176ನೇ ವರ್ಷದ ಶ್ರೀ ತ್ಯಾಗರಾಜ ಆರಾಧನಾ ಮಹೋತ್ಸವವನ್ನು ದಿನಾಂಕ 07–01–2026 ನೇ ಬುಧವಾರ ಬೆಳಿಗ್ಗೆ 7–30 ಗಂಟೆಗೆ ಏರ್ಪಡಿಸಿದ್ದು, ಈ ಮಹೋತ್ಸವದಲ್ಲಿ ಮೈಸೂರು ನಗರದಲ್ಲಿ ವಾಸವಾಗಿರುವ ನಮ್ಮ ನಯನಜ ಕ್ಷತ್ರಿಯ ಕನ್ನಡಿಗರ ಜನಾಂಗದ 2024–2025 ನೇ ಸಾಲಿನ ಎಸ್.ಎಸ್.ಎಲ್.ಸಿ., ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇಕಡ 80% ಹೆಚ್ಚು ಅಂಕ ಗಳಿಸಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ "ಪ್ರತಿಭಾ ಪುರಸ್ಕಾರ" ನೀಡಲಾಗುವುದು.

ಜನಾಂಗದ ವಿದ್ಯಾರ್ಥಿಗಳು ತಮ್ಮ ಜಾತಿ ಪ್ರಮಾಣ ಪತ್ರ (ತಾಲ್ಲೂಕು ಕಛೇರಿಯಿಂದ ನೀಡುವ ಜಾತಿ ಪ್ರಮಾಣ ಪ್ರತಿ), ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಅಂಕಪಟ್ಟಿಯ ಜೆರಾಕ್ಸ್ ಪ್ರತಿ, ಆಧಾರ್ ಜೆರಾಕ್ಸ್ ಪ್ರತಿ, ಭಾವಚಿತ್ರವನ್ನು ದಿನಾಂಕ 06–01–2026 ರೊಳಗೆ ಸಂಘದ ಕಛೇರಿಗೆ ನೀಡುವುದು.

ಕಛೇರಿ ವೇಳೆ : ಬೆಳಿಗ್ಗೆ 10.30 ರಿಂದ 1.00 ರವರೆಗೆ, ಸಂಜೆ 5.00 ರಿಂದ 8.00 ರವರೆಗೆ
ಸೂಚನೆ : ನಯನಜ ಕ್ಷತ್ರಿಯ ಕನ್ನಡಿಗರ ಜನಾಂಗದವರಿಗೆ ಮಾತ್ರ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : **7892425049, 9900301719**
ವಂದನೆಗಳೊಂದಿಗೆ

ಇಂತಿ ತಮ್ಮ ವಿಶ್ವಾಸಿ
ಸಹಿ/– ಎಸ್. ರವೀಂದ್ರ, ಕಾರ್ಯದರ್ಶಿಗಳು
ನಯನಜ ಕ್ಷತ್ರಿಯ ಕನ್ನಡಿಗರ ಟ್ರಸ್ಟ್ (ರಿ) ಮೈಸೂರು

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಸಂಖ್ಯೆ:ಮೈಅಪ್ರಾ/ವ.ಕ–1//2025–26 ದಿನಾಂಕ : 4–12–2025

ಪತ್ರಿಕಾ ಪ್ರಕಟಣೆ
ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಶ್ರೀ ಹರೀಶ್ ಬಿನ್ ಶ್ರೀ ಕೆ.ಗುರಪ್ಪ ನಂ:3375, 7ನೇ ಮೇನ್ ರೋಡ್, ತಿಲಕನಗರ, ಮೈಸೂರು. ರವರಿಗೆ ಮೈಸೂರು ನಗರದ ಶ್ರೀರಾಂಪುರ 2ನೇ ಹಂತ ಬಡಾವಣೆಯ ನಿವೇಶನ ಸಂಖ್ಯೆ 419 ಅಳತೆ:**6x9** ಮೀ ನಿವೇಶನವು ಆಶಾಮಂದಿರ ಯೋಜನೆಯಡಿ ದಿನಾಂಕ: 05.09.1987 ರಂದು ಮಂಜೂರಾಗಿದ್ದು, ಹಾಗೂ ದಿನಾಂಕ:05.09.1987 ರಂದು ಸ್ವಾಧೀನ ಪತ್ರ ಪಡೆದಿರುತ್ತಾರೆ. ನಂತರ ಮಂಜೂರಾತಿದಾರರಾದ ಶ್ರೀ ಹರೀಶ್ ರವರು ತಮ್ಮ ಪ್ರತಿನಿಧಿ ಶ್ರೀ ಸಿ.ಪ್ರಕಾಶ್ ಬಿನ್ ಶ್ರೀ ಚೆಲುವಯ್ಯ ರವರ ವಿಳಾಸ:3412, ಶ್ರೀನಿವಾಸ ದೇವಸ್ಥಾನದ ರಸ್ತೆ, 5ನೇ ಮುಖ್ಯ ರಸ್ತೆ, ತಿಲಕ್‌ನಗರ, ಮಂಡಿ ಮೊಹಲ್ಲಾ, ಮೈಸೂರು ರವರಿಗೆ ಉಪ ನೋಂದಣಾಧಿಕಾರಿ ಮೈಸೂರು ದಕ್ಷಿಣ ರವರ ಕಛೇರಿಯಲ್ಲಿ 4ನೇ ಪುಸ್ತಕದ 224ನೇ ಸಂಪುಟದಲ್ಲಿ 201–202ನೇ ಪುಟದಲ್ಲಿ 1669ನೇ ನಂಬರಾಗಿ ದಿನಾಂಕ: 16.02.1995 ರಂದು ನೋಂದಾಯಿತ ಜಿ.ಪಿ.ಎ ನೀಡಿರುತ್ತಾರೆ. ಜಿ.ಪಿ.ಎ ದಾರರಾದ ಶ್ರೀ ಸಿ.ಪ್ರಕಾಶ್ ರವರು ಶ್ರೀರಾಂಪುರ 2ನೇ ಹಂತ ಬಡಾವಣೆಯ ನಿವೇಶನ ಸಂಖ್ಯೆ 419 ಅಳತೆ:**6x9** ಮೀ ನಿವೇಶನವನ್ನು ಶ್ರೀಮತಿ ಸುಜಾತ ಎಂಬುವರಿಗೆ ಉಪ ನೋಂದಣಾಧಿಕಾರಿ ಮೈಸೂರು ದಕ್ಷಿಣ ಕಛೇರಿಯಲ್ಲಿ 1ನೇ ಪುಸ್ತಕದ ದಸ್ತಾವೇಜು ನಂಬರ ಎಂವೈಎಸ್–1–05955–2009–10 ಆಗಿ ಸಿ.ಡಿ. ನಂಬರ ಎಂವೈಎಸ್‌ಡಿ 133ನೇ ದ್ದರಲ್ಲಿ ದಿನಾಂಕ: 07.01.2010 ರಂದು ಶುದ್ಧಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ಕ್ರಯಪತ್ರ ನೀಡುವಂತೆ ಕೋರಿರುತ್ತಾರೆ. ಶ್ರೀಮತಿ ಸುಜಾತ ರವರು ಕ್ರಯಪತ್ರ ಕೋರಿ ಅರ್ಜಿಸಲ್ಲಿಸಿರುವುದರಿಂದ ಸದರಿಯವರಿಗೆ ಕ್ರಯಪತ್ರ ನೀಡಬೇಕಾಗಿದ್ದು ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್
ವಲಯ ಕಛೇರಿ–1,
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಚಾಮರಾಜನಗರ–ರಾಮಸಮುದ್ರ

ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ
ಗುರುರಾಘವೇಂದ್ರ ಚಿತ್ರಮಂದಿರಕ್ಕೆ ಹೋಗುವ ರಸ್ತೆ, ಎಸ್.ಪಿ. ಆಫೀಸ್ ಹಿಂಭಾಗ, ಚೆನ್ನಿಪುರದಮೋಳೆ, ಚಾಮರಾಜನಗರ–571313
e-mail: udachngr@gmail.com ದೂರವಾಣಿ ಮತ್ತು ಫ್ಯಾಕ್ಸ್ ಸಂ: 08226–223166, +91 8226–295066
ಸಂಖ್ಯೆ: ಚಾರಾನಅಪ್ರಾ/ಮ.ಯೋ.ತ/ಪರಿಷ್ಕೃತ–03/2025–26 ದಿನಾಂಕ: 22–12–2025

ಪ್ರಕಟಣೆ
ನಮೂನೆ– VI ನಿಯಮ 32(ಎ)

ಚಾಮರಾಜನಗರ–ರಾಮಸಮುದ್ರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅಮೃತ್ 2.0 ಯೋಜನೆಯಡಿಯಲ್ಲಿ ಮಹಾಯೋಜನೆ (ಪರಿಷ್ಕೃತ–03) ತಯಾರಿಸುವ ಇಂಗಿತವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 10(1) ರನ್ವಯ ಘೋಷಿಸುವ ಬಗ್ಗೆ.

ಸರ್ಕಾರದ ಅಧಿಸೂಚನೆ ಸಂ.ನಅಇ 285 ಭೂಬವಿ 98 ಬೆಂಗಳೂರು ದಿನಾಂಕ:31–07–1999 ರಲ್ಲಿ ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಚಾಮರಾಜನಗರ ಪಟ್ಟಣ ಸೇರಿ 27 ಪೂರ್ಣ ಕಂದಾಯ ಗ್ರಾಮಗಳನ್ನು ಚಾಮರಾಜನಗರ–ರಾಮಸಮುದ್ರ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಸಾರ್ವಜನಿಕರ ಗಮನಕ್ಕೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 10(1) ರನ್ವಯ ಚಾಮರಾಜನಗರ–ರಾಮಸಮುದ್ರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅಮೃತ್ 2.0 ಯೋಜನೆಯಡಿಯಲ್ಲಿ ಮಹಾಯೋಜನೆ (ಪರಿಷ್ಕೃತ–03) ತಯಾರಿಸಲು ಉದ್ದೇಶಿಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ಯೋಜನಾ ಪ್ರಾಧಿಕಾರದ ಕಾಯ್ದೆ, ನಿಯಮ 32(ಎ) ರನ್ವಯ ಸಾರ್ವಜನಿಕರಿಂದ ಸಲಹೆಗಳನ್ನು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಗುರುರಾಘವೇಂದ್ರ ಚಿತ್ರಮಂದಿರಕ್ಕೆ ಹೋಗುವ ರಸ್ತೆ, ಎಸ್.ಪಿ.ಆಫೀಸ್ ಹಿಂಭಾಗ, ಚೆನ್ನಿಪುರದಮೋಳೆ, ಚಾಮರಾಜನಗರ ಇವರ ಕಚೇರಿಗೆ ಖುದ್ದಾಗಿಯಾಗಲೀ ಅಥವಾ ನೋಂದಾಯಿತ ಅಂಚೆಯ ಮೂಲಕವಾಗಲೀ ಸಲ್ಲಿಸತಕ್ಕದ್ದು. ಸದರಿ ಪ್ರಕಟಣೆಯನ್ನು ದಿನಾಂಕ:24–11–2025ರ ಕರ್ನಾಟಕ ರಾಜ್ಯ ಪತ್ರದಲ್ಲಿ ಹೊರಡಿಸಲಾಗಿದೆ. ಹಾಗಾಗಿ ಈ ಪತ್ರಿಕಾ ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಅರವತ್ತು (60) ದಿನಗಳೊಳಗಾಗಿ ಸಲಹೆಗಳನ್ನು ಸ್ವೀಕರಿಸಲಾಗುತ್ತದೆ. ಈ ಅವಧಿಯ ನಂತರ ಬಂದಂತಹ ಸಲಹೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ಚಾಮರಾಜನಗರ.

ಸಹಿ/– ಅಧ್ಯಕ್ಷರು
ನಗರಾಭಿವೃದ್ಧಿ ಪ್ರಾಧಿಕಾರ,
ಚಾಮರಾಜನಗರ.

ಸಂ.ವಾ.ಸಾ.ಸಂ.ಇ/ಹಿ.ಸನಿ/ಚಾ.ನಗರ/600/2025–26

ಮೈಸೂರು ಮಿತ್ರ
46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು